A.—Sri R. M. PATIL (Minister for Health).—

(*a*) Yes.
(*b*) No.
(*c*) Does not arise.

Export Rebate on Handloom Silk Cloth.

Q.—1571. Smt. K. S. NAGARATHNAMMA (Gundlupet).—

Will the Government be pleased to state:—

(*a*) the extent of export rebate granted on handloom silk cloth sent outside the State;

(*b*) the recipients of such rebate;

(*c*) whether handloom weavers are also entitled to receive any percentage of such rebates?

A.—Sri MOHAMED ALI (Minister for Excise and Rural Industries).—

(*a*) No such rabate is granted.
(*b*) Does not arise.
(*c*) Does not arise.

Assistant Secretaries and their Emoluments.

Q.—2036. Sri A. MUNIAPPA (Chickaballapur).—

Will the Government be pleased to state:—

(*a*) the number and the pay scales of Assistant Secretaries working in different Secretariat departments;

(*b*) out of them, the number of graduates and non-graduates?

A.—Sri S. NIJALINGAPPA (Chief Minister).—

(*a*) The posts of Assistant Secretaries have been since designated as Under Secretaries. There are 42 Under Secretaries in the different Departments of Government. Their grade pay is Rs. 300-25-550-30-700 or pay of the parent grade to which the officer belongs and a Special Pay of Rs. 75 per mensem.

(*b*) Graduates ...	...	38
Non-Graduates	...	4

Supply of Iron and Steel to Bhatkal Petha.

Q.—2145. Sri J. H. SHAMSUDDIN (Honawar).—

Will the Government be pleased to state:—

(*a*) whether it is a fact that no Iron and Steel was supplied to Bhatkal Petha in the year 1956 and 1957 for agricultural and non-agricultural purposes;

(*b*) if so, the reasons therefor;

(*c*) the action they propose to take for the supply of Iron and Steel to the people?

A.—Sri C. M. POONACHA (Minister for Home Affairs and Industries).—

(*a*) Yes.

(*b*) With regard to non-agricultural quota no dealer was proposed for Bhatkal Petha as the demand from the consumers in this area is reported to be negligible. As regards Iron and Steel materials for agricultural purposes, applications from Bhatkal Petha were called for, for the appointment of Agents, but no one came forward to deal in Iron and Steel materials.

(*c*) The needs of the consumers of this area are however being met from the stockists in nearby places. Any further applications from this area will be considered sympathetically.

BUDGET FOR 1958-59—DEMANDS FOR GRANTS.

Demand No. 23.—Agriculture, Horticulture, Fisheries.

40. Agriculture.

Mr. SPEAKER.—Motion moved:

"That a sum not exceeding Rs. 2,14,27,000 be granted to the Government to defray the charges which will come in course of payment during the year ending 31st day of March 1959, in respect of 'Agriculture'."

Demand No. 25—Veterinary

41. Veterinary.

Mr. SPEAKER.—Motion moved :

"That a sum not exceeding Rs. 94,58,100 be granted to the Government to defray the charges which will come in course of payment during the year ending 31st day of March 1959, in respect of 'Veterinary'."

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಸಭೆಯ ಮುಂದಿರತಕ್ಕ ವ್ಯವಸಾಯ ಮತ್ತು ಪಶುವೈದ್ಯಕ್ಕೆ ಸಂಬಂಧಪಟ್ಟ ಬೇಡಿಕೆಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊಟ್ಟಮೊದಲು ವ್ಯವಸಾಯದ ಬೇಡಿಕೆಗೆ ಸಂಬಂಧಪಟ್ಟಂತೆ ಮಾತನಾಡಲು ಪ್ರಯತ್ನಪಡುತ್ತೇನೆ. ಈಗ ವ್ಯವಸಾಯದ ಇಲಾಖೆಗೆ ಗುರುತರವಾದ ಜವಾಬ್ದಾರಿ ಇದೆ ಎಂಬುದನ್ನರಿತುಕೊಂಡು ಮುಂದುವರಿಯಬೇಕೆಂದು ಒತ್ತಾಯಪೂರ್ವಕವಾಗಿ ಹೇಳಬೇಕಾಗಿದೆ. ಬಹು ಕಾಲದಿಂದ ಹೇಳುತ್ತಾ ಬರುತ್ತಿರುವ ಮಾತುಗಳನ್ನೇ ಮತ್ತೆ ಮತ್ತೆ ಹೇಳುವುದರಿಂದ ಎಷ್ಟೋ ಜನರಿಗೆ ಬೇಸರವಾಗಬಹುದು; ಆದರೆ ವಿಧಿಯಿಲ್ಲದೆ ಹೇಳಬೇಕಾಗಿದೆ. ಎಷ್ಟೋ ಕಾಲದಿಂದ ಹೇಳುತ್ತಿದ್ದರೂ ಸಹ ಆಹಾರ ಉತ್ಪತ್ತಿ ಏಕೆ ಹೆಚ್ಚಿಲ್ಲ, ಇಲಾಖೆಯವರು ಸರಿಯಾಗಿ ಪ್ರಯತ್ನಪಟ್ಟಿಲ್ಲವೋ ಅಥವ ಪ್ರಯತ್ನಪಟ್ಟು ವಿಫಲರಾಗಿದ್ದಾರೋ ಎಂಬುದನ್ನು ವಿಶದಪಡಿಸಲು ಪ್ರಯತ್ನಮಾಡುತ್ತೇನೆ.

ಸ್ವಾಮಿ, ಈಗಾಗಲೇ ನಮ್ಮ ಸಂಸ್ಥಾನದಲ್ಲಿ ಅನೇಕ ಉತ್ಪತ್ತಿಯನ್ನು ಹೆಚ್ಚಿಸತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಆದರೆ ಕೈಗೊಂಡಿರತಕ್ಕ ಕಾರ್ಯಗಳು ಎಷ್ಟು ಫಲದಾಯಕವಾಗಿವೆ ಎಂಬುದನ್ನು ಮಾತ್ರ ನಾನು ಹೇಳಬೇಕಾಗಿದೆ. ಮೊಟ್ಟಮೊದಲನೆಯದಾಗಿ, ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ ಹೆಚ್ಚು ಭೂಮಿಯನ್ನು ಉಳುಮೆ ಮಾಡುವುದಕ್ಕೆ ಪ್ರಯತ್ನ ಮಾಡುವುದು ಒಂದು ಭಾಗ. ಎರಡನೆಯದು ವೈಜ್ಞಾನಿಕ ಸಹಾಯ ಸಲಕರಣೆಗಳಿಂದ ಉತ್ಪತ್ತಿಯನ್ನು ಹೆಚ್ಚುಮಾಡುವುದು ಮತ್ತೊಂದು ವಿಭಾಗ. ಸರ್ಕಾರ ಈ ಎರಡು ವಿಭಾಗಗಳಲ್ಲಿಯೂ ಎಷ್ಟುಮಟ್ಟಿಗೆ ಫಲವನ್ನು ಪಡೆದಿದೆ, ತತ್ಪರಿಣಾಮವಾಗಿ ಸಾರ್ವಜನಿಕರು ಎಷ್ಟುಮಟ್ಟಿಗೆ ತಮ್ಮ ಉತ್ಪತ್ತಿಯನ್ನು ಹೆಚ್ಚಿಸಿದ್ದಾರೆ, ಇದರಿಂದ ನ್ಯಾಷನಲ್ ಇಕಮ್ ಎಷ್ಟು ಹೆಚ್ಚಿದೆ ಮತ್ತು ಇದರ ಫಲವಾಗಿ foreign exchange ದೇಶಕ್ಕೆ ಎಷ್ಟುಮಟ್ಟಿಗೆ ಹೆಚ್ಚಿದೆ ಎನ್ನುವುದನ್ನು ಯೋಚನೆಮಾಡಬೇಕು. ಏಕೆಂದರೆ, ಅಗ್ರಿಕಲ್ಚರಲ್ ಇಂಡಸ್ಟ್ರಿ ಬಹಳ ಮುಖ್ಯವಾದುದು. ಇಡೀ ಪ್ರಪಂಚದಲ್ಲೇ ಇಂಡಿಯಾದ ಅಗ್ರಿಕಲ್ಚರಲ್ ಇಂಡಸ್ಟ್ರಿ ಬಹಳ ಗಣ್ಯವಾದ ಸ್ಥಾನವನ್ನು ಪಡೆದಿದೆ. ಇಂಥ ಒಂದು ಅಗ್ರಿಕಲ್ಚರಲ್ ಇಂಡಸ್ಟ್ರಿ ವಿಷಯದಲ್ಲಿ ಫಾರಿನ್ ಎಕ್ಸ್‌ಛೇಂಜ್ ದೊರೆಯುವ ಒಂದು ಅನುಕೂಲವನ್ನು ಅದಕ್ಕಿರುವ ಪ್ರಾಧಾನ್ಯತೆಯನ್ನು ಕಳೆಯುವುದಕ್ಕೆ ಪ್ರಯತ್ನಪಡಬಾರದು ಮತ್ತು ವ್ಯವಸಾಯಗಾರರಿಗೆ ಸಂಬಂಧಪಟ್ಟಿರುವ ಈ ಒಂದು ಇಲಾಖೆಯನ್ನು ತೃಣೀಕರಿಸಿ, ಮರೆತು ಹಾಳುಮಾಡಬಾರದು ಎಂದು ಮಾತ್ರ ಎಚ್ಚರಿಕೆ ಕೊಡುತ್ತೇನೆ.

1947ನೆಯ ಇಸವಿಯೊಳಗೆ ಎಕ್ಸ್‌ಟೆನ್ಸಿವ್ ಕಲ್ಟಿವೇಷನ್‌ಗಾಗಿ ಇಂಡಿಯಾ ಸರ್ಕಾರದವರು ಟ್ರ್ಯಾಕ್ಟರ್ ಆರ್ಗನೈಜೇಷನ್ ಪ್ರಾರಂಭಿಸಿದರು, ಸುಮಾರು 200 ಟ್ರ್ಯಾಕ್ಟರುಗಳನ್ನು ಅವರು ಕೊಂಡುಕೊಂಡರು, ಸಂಸ್ಥಾನ ಸರ್ಕಾರದವರೂ ಟ್ರ್ಯಾಕ್ಟರ್ ಆರ್ಗನೈಜೇಷನ್ ಮಾಡಬೇಕೆಂದು ಒತ್ತಾಯಮಾಡಿದರು. ತತ್ಪಲವಾಗಿ ಮೈಸೂರು ಸಂಸ್ಥಾನದಲ್ಲೂ ಟ್ರ್ಯಾಕ್ಟರ್ ಆರ್ಗನೈಜೇಷನ್ ಆಯಿತು. ಆದಾದಾಗ ಸುಮಾರು 127 ಟ್ರ್ಯಾಕ್ಟರುಗಳಿದ್ದುವು, 26 ಬುಲ್‌ಡೋಜರುಗಳಿದ್ದುವು. 1956ನೆಯ ಇಸವಿಯ ಎಸ್ಟಿಮೇಟ್ಸ್ ಕಮಿಟಿ ವರದಿ ನೋಡಿದರೆ ಬಹಳ ಆಶ್ಚರ್ಯವಾಗಿಯೂ ಮತ್ತು ವಿಚಿತ್ರವಾಗಿಯೂ ಕಾಣುತ್ತದೆ. ಅದರಲ್ಲಿ 1956ನೆಯ ಇಸವಿ ಆಕ್ಟೋಬರ್ 20ರದಿವಸ 127 ಟ್ರ್ಯಾಕ್ಟರುಗಳು ಕೆಲಸ ಮಾಡುತ್ತಿಲ್ಲ, 15 ಟ್ರ್ಯಾಕ್ಟರುಗಳು ಕೆಲಸಮಾಡುತ್ತಿವೆ ಮತ್ತು 26 ಬುಲ್‌ಡೋಜರುಗಳು ಕೆಟ್ಟಿವೆ, 11 ಮಾತ್ರ ಚೆನ್ನಾಗಿವೆ ಎಂದು ತಿಳಿಸಿದ್ದಾರೆ. ಏಕೆ ಈ ದುಷ್ಟ ಪರಿಸ್ಥಿತಿಗೆ ಟ್ರ್ಯಾಕ್ಟರುಗಳು ಇಳಿದುವೆಂದು ಯೋಚನೆ ಮಾಡಿದರೆ ಇಲಾಖೆ ಮತ್ತು ಸಂಬಂಧಪಟ್ಟ ಸರ್ಕಾರಿ ಮಂತ್ರಿಗಳು ತಮ್ಮ ತೀಕ್ಷ್ಣ ಬುದ್ಧಿಯನ್ನು ಕಾಲಕ್ಕೆ ತಕ್ಕಹಾಗೆ ಉಪಯೋಗಿಸುತ್ತಾ ಬಂದಿಲ್ಲ ಎಂದು ಮಾತ್ರ ಹೇಳಬಲ್ಲೆ. ಯಾವಾಗ ಇದು ಗೊತ್ತಾಯಿತೋ ಆಗ ತಕ್ಷಣ ಔಷಧಿ ಕೊಡುವ ಡಾಕ್ಟರನ್ನು ಕರೆತಂದು ಔಷಧಿ ಕೊಟ್ಟಿದ್ದರೆ ಖಾಯಿಲೆ ವಾಸಿಯಾಗುತ್ತಿತ್ತು. ಹಾಗೆ ಮಾಡದೆ ಕೆಟ್ಟ ತಕ್ಷಣ ಷೆಡ್ಡುಗಳಿಗೆ ಬಿಡುವ ಒಂದು ಕ್ರಮ ಅನುಸರಿಸಿದರು. ಈ ಸಂಬಂಧದಲ್ಲಿ ಒಂದು ವರ್ಕ್‌ಷಾಪ್ ಇತ್ತೆಂದು ಕಾಣುತ್ತದೆ. ಅಲ್ಲಿ ಸರಿಯಾಗಿ ನೋಡಿ ಕೊಳ್ಳಲಿಲ್ಲ, ಸರಿಯಾಗಿ ಅಲ್ಲಿ ನವರು ಕೆಲಸ ಮಾಡುತ್ತಿಲ್ಲ ಎಂದು ಈ ದಿವಸ ಹೇಳುತ್ತಾರೆ. ಈ ದಿವಸ ಇಂಡಿಯಾ ಸರ್ಕಾರದವರು 200 ಟ್ರ್ಯಾಕ್ಟರುಗಳಿಂದ ಉಳುಮೆಯಲ್ಲಿದ್ದ ಭೂಮಿಗಿಂತ ಸುಮಾರು 10 ಲಕ್ಷ ಎಕರೆ ಹೆಚ್ಚಾಗಿ ಉಳುಮೆ ಮಾಡಿಸಿದ್ದಾರೆ. ಸಂಸ್ಥಾನ ಸರ್ಕಾರದವರೆಷ್ಟು ಮಾಡಿದ್ದಾರೆಂಬುದಕ್ಕೆ ಲೆಕ್ಕ ಕೊಡಲಿ. ಬಹಳ ಸ್ವಲ್ಪ ಮಾಡಿದ್ದಾರೆಂದು ನನಗೆ ಗೊತ್ತು. ಇಷ್ಟೇ ಅಲ್ಲ, ಟ್ರ್ಯಾಕ್ಟರ್ ಹೇಗೆ ಉಪಯೋಗಿಸಿದ್ದಾರೆ ಎಂಬುದೂ ಗೊತ್ತಿದೆ, ರಾಷ್ಟ್ರೀಯ ಧೋರಣೆ ಇಟ್ಟುಕೊಂಡು ಕೆಲಸ ಮಾಡಬೇಕು, ಹೆಚ್ಚು ಭೂಮಿ ಉಳುಮೆ ಮಾಡಬೇಕು ಎಂಬ ಅಭಿಪ್ರಾಯವನ್ನಿಟ್ಟುಕೊಂಡು ಮಾಡಿಲ್ಲ. ಟ್ರ್ಯಾಕ್ಟರುಗಳನ್ನು ಇಂಡಿವಿಜುಯಲ್ಸ್‌ಗೆ ಕೊಡುತ್ತಾ ಹೋದರು. ಕೊನೆಗೆ ಅವು ಬೆಂಗಳೂರಿಗೆ ಬಂದು ಸರ್ಕಾರದ ಕೈ ಸೇರಿದವು. ಹೀಗಾಗಿ ಟ್ರ್ಯಾಕ್ಟರ್ ಆರ್ಗನೈಜೇಷನ್ ಮೈಸೂರು ಸರ್ಕಾರದಲ್ಲಿ ಜಯಪ್ರದವಾಗಲಿಲ್ಲ. ಈ ದಿವಸದ ಪರಿಸ್ಥಿತಿ ನೋಡೋಣ. ಅಗ್ರಿಕಲ್ಚರಲ್ ಇಂಜನಿಯರಿಂಗ್ ಇಲಾಖೆಗೆ 12 ಲಕ್ಷ ರೂಪಾಯಿಗಳ ಬಡ್ಜೆಟ್ ಈ ದಿವಸ ಇದೆ. ಉತ್ಪತ್ತಿ ಹೇಗಿದೆಯೆಂದರೆ ಟ್ರ್ಯಾಕ್ಟರ್ ಆರ್ಗನೈಜೇಷನ್‌ನಲ್ಲಿ 88 ಸಾವಿರ ರೂಪಾಯಿಗಳು ಬರುತ್ತವೆ, ಬುಲ್‌ಡೋಜ ವರ್ಗೈರೆಯಿಂದ 5 ಲಕ್ಷ 25 ಸಾವಿರ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಸುಮಾರು ಆರು ಲಕ್ಷ ರೂಪಾಯಿ ಈ ದಿವಸ ಖೋತಾ ಆಗುತ್ತದೆ, ಹೆಚ್ಚಾಗಿ ಈ ದಿವಸ ಖರ್ಚು ಮಾಡಬೇಕಾಗಿರುತ್ತದೆ. ಟ್ರ್ಯಾಕ್ಟರನ್ನು ಪೂರ್ಣವಾಗಿ ತೆಗಿಯರಿ, ಅದರಿಂದ ಪ್ರಯೋಜನವಿಲ್ಲ ಎಂಬ ಕೆಲವರ ವಾದವಿದೆ. ಸರ್ಕಾರದವರು

(ಶ್ರೀ ಯು. ಎಸ್. ಮಾದಪ್ಪ)

ಟ್ರ್ಯಾಕ್ಟರುಗಳನ್ನು ಸಾಧ್ಯವಾದಮಟ್ಟಿಗೆ ನರಿಪಡಿಸಿ ಹೆಚ್ಚಾಗಿ ಬಂಜರು ಭೂಮಿ ಮತ್ತು ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇದ್ದರೆ ತಾವೇ ವ್ಯವಸಾಯಕ್ಕೆ ಅದನ್ನು ತೆಗೆದುಕೊಂಡು ಹದಮಾಡಿ ಬಡವರಿಗೆ ಹಂಚುವ ಒಂದು ಮಾರ್ಗ ಕೈ ಕೊಂಡಿದ್ದಾರೆಯೇ ಅಂದರೆ ಅದಕ್ಕೆ ಪ್ರಯತ್ನ ಮಾಡಿಲ್ಲ, ಈ ಆರ್ಗನೈಜೇಷನ್ ಉದ್ದೇಶವೇ ಅದು. ಈ ದಿವನ ಆಗಿರುವುದೇ ಬೇರೆ. ಈಗಲೂ ಕಾಲ ಮಿರಿಲ್ಲ. ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ, ಸಿ.ಡಿ. ಬ್ಲಾಕು ಇರುವ ಕಡೆ ಟಿಕ್ಕಿಕಲ್ ಪರ್ಸನ್ಸ್ ಬಹಳವಾಗಿದ್ದಾರೆ, ಅಲ್ಲಿ ಸಾಕಾದಷ್ಟು ಆರ್ಗನೈಜೇಷನ್ಸ್ ಇವೆ, ಅನುಕೂಲವಿದೆ. ಅದನ್ನಾದರೂ ಉಪಯೋಗ ಮಾಡಿಕೊಂಡು ಟ್ರ್ಯಾಕ್ಟರು ಮತ್ತು ಬುಲ್‌ಡೋಜರುಗಳನ್ನು ಅಲ್ಲಿಗೆ ಕಳುಹಿಸಿ ಹೆಚ್ಚು ಸಿಗಾ ತೆಗೆದುಕೊಂಡು ಅಲ್ಲಿ ಎಕ್ಸ್‌ಟೆನ್ಸಿವ್ ಕಲ್ಟಿವೇಷನ್ ಜಾರಿಗೆ ತಂದು ಬಡವರಿಗೆ, ಭೂಮಿ ಇಲ್ಲದಿರುವವರಿಗೆ ಜಮೀನು ಹಂಚುವ ಕಾರ್ಯಕ್ರಮ ಸರ್ಕಾರ ಕೈಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತು ಖಾಯಿಲೆಯಿಂದ ಇರುವ ಟ್ರ್ಯಾಕ್ಟರುಗಳನ್ನೇನು ಮಾಡಬೇಕೆಂಬುದನ್ನು ಪೂರ್ಣ ಜವಾಬ್ದಾರಿಯಿಂದ ಇತ್ಯರ್ಥಮಾಡಿ, ಹಾಗೆ ಮಾಡುವಾಗ ಸರ್ಕಾರಕ್ಕೆ ನಷ್ಟವಾಗದಂತೆ ಮಾಡಿ. ಇದಲ್ಲದೆಯೇ ಎಸ್ಟಿಮೇಟ್ಸ್ ಕಮಿಟಿಯಲ್ಲಿ ಒಂದು ವಿಷಯ ಹೇಳಿದ್ದಾರೆ. ಫರ್ಗೂಸನ್ ಟ್ರ್ಯಾಕ್ಟರ್ಸ್ ಕಂಪೆನಿಯ ಒಬ್ಬ ರೆಪ್ರಸೆಂಟೇಟಿವ್ ಮಾತಿನ ಅಧಾರದ ಮೇರೆ ಸುಮಾರು ಒಂದು ಲಕ್ಷ ರೂಪಾಯಿಗಳ ಸ್ಪೇರ್ ಪಾರ್ಟ್ಸ್ ಟ್ರ್ಯಾಕ್ಟರ್ ಮತ್ತು ಬುಲ್‌ಡೋಜರುಗಳಿಗಾಗಿ ಕೊಂಡಿದ್ದಾರೆಂದು ಎಸ್ಟಿಮೇಟ್ಸ್ ಕಮಿಟಿಯವರು ಹೇಳುತ್ತಾರೆ. ಕೊಂಡುಕೊಂಡ ಸ್ಪೇರ್ ಪಾರ್ಟ್ಸ್ ಇಲ್ಲಿರುವ ಟ್ರ್ಯಾಕ್ಟರುಗಳಿಗೆ ಅಥವಾ ಬುಲ್‌ಡೋಜರುಗಳಿಗೆ ನರಿಹೋಗುವುದಿಲ್ಲವಾದ್ದರಿಂದ ಸಾಧ್ಯವಾದ ಮಟ್ಟಿಗೆ ಜಾಗ್ರತೆ ವಾಪಸು ಮಾಡಿ ಎಂದು ಅದೇ ಸಮಿತಿಯವರು ಉತ್ತಮವಾದ ಸಲಹೆ ಮಾಡಿದ್ದಾರೆ. ಇದಕ್ಕೆ ಜಾಗ್ರತೆ ಕಾರ್ಯಕ್ರಮ ತೆಗೆದು ಕೊಳ್ಳಬೇಕು. ಇಲ್ಲದಿದ್ದರೆ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ನಷ್ಟವಾಗುತ್ತದೆ.

ಇನ್ನು ಎರಡನೆಯದಾಗಿ ಸೈಂಟಿಫಿಕ್ ಮೆಥಡ್, ಇಂಟೆನ್ಸಿವ್ ಕಲ್ಟಿವೇಷನ್ ವಿಷಯದಲ್ಲಿ ಎರಡು ಮಾತು. ಇದನ್ನು ಮಾಡುವಾಗ ಬಿತ್ತನೆ ಬಹಳ ಮುಖ್ಯವಾದುದು, ಎರಡನೆಯದು ರಿಸರ್ವ್. ಕೆಲವು ರೋಗಗಳಿಂದ ರೈತನ ಬೆಳೆಗೆ ಆಗುವನಷ್ಟ ಕಡಮೆ ಮಾಡುವ ಉದ್ದೇಶದಿಂದ ಕೆಲವು ಆರ್ಗನೈಜೇಷನ್‌ಗಳಿವೆ. ಸರ್ಕಾರ ಬಜೆಟ್ಟಿನಲ್ಲಿ, ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿರುವ ಹಣದಲ್ಲಿ ವ್ಯವಸಾಯದ ಅಭಿವೃದ್ಧಿಗೆ ಏನೂ ಉಳಿಯುತ್ತಿಲ್ಲ. ಇದನ್ನು ಗಮನಿಸಬೇಕು. ತೇಕಡ ಹತ್ತು ಭಾಗ ಕೂಡ ಅಭಿವೃದ್ಧಿಗೆ ಸಿಕ್ಕುವುದಿಲ್ಲ; ಒಂದೊಂದು ಸಲ ಸೇಕಡ ಐದರಷ್ಟಿರುತ್ತದೆ. ಇದು ಎಚ್ಚರಿಕೆಯಿಂದ ನೋಡಬೇಕಾದ ವಿಷಯ; ಇದನ್ನು ಎಚ್ಚರಿಕೆಯಿಂದ ಪರಿಗಣಿಸಬೇಕು.

ವ್ಯವಸಾಯಾಭಿವೃದ್ಧಿಗಾಗಿ ಅಗ್ರಿಕಲ್ಚರಲ್ ಕಾಲೇಜ್, ಎಕ್ಸ್‌ಪೆರಿಮೆಂಟಲ್ ಫಾರಂ, ರಿಸರ್ಚ್ ಇನ್‌ಸ್ಟಿಟ್ಯೂಷನ್ ಎಂದೇನು ಮೂರು ಭಾಗವಿದೆ ಆ ವಿಚಾರ ಸ್ವಲ್ಪ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. ಎಕ್ಸ್‌ಪೆರಿಮೆಂಟಲ್ ಫಾರಂಗಳಲ್ಲಿ ಕೆಲವು ಉತ್ತಮವಾದ ಫಾರಂಗಳಿವೆ. ಆದರೆ ಕೆಲವು ಫಾರಂಗಳು ಮಾಡುತ್ತಿರುವ ಕೆಲಸ, ಅವುಗಳಿಗಾಗಿ ಆಗುತ್ತಿರುವ ಖರ್ಚು ಯಾವರೀತಿಯದೆಯೆಂಬುದನ್ನು ಯೋಚನೆ ಮಾಡಬೇಕು. ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾಯಿಸಬೇಕು, ಈ ಬಾಬಿನಲ್ಲಿ ಸ್ವಪರಿಪೂರ್ಣತೆಯನ್ನು ಸಾಧಿಸಬೇಕು ಎಂದು ಹೇಳುತ್ತಿದ್ದೇವೆ. ಅದೇರೀತಿ ವ್ಯವಸಾಯ ಕ್ಷೇತ್ರದಲ್ಲೂ ಸ್ವಪರಿಪೂರ್ಣತೆ ಬಾರದಿದ್ದರೆ ಸಾಕಷ್ಟು ಅನುಕೂಲವಾಗುತ್ತದೆಯೇ ಎಂಬುದನ್ನು ಯೋಚನೆಮಾಡಬೇಕು. ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ಚಾಮರಾಜನಗರ ತಾಲ್ಲೂಕು ಹರದನಹಳ್ಳಿ ರೀಜನಲ್ ಫಾರಂ ವಿಚಾರ ಇದೇ ನಭೆಯಲ್ಲಿ 1954 ನೆಯ ಇಸವಿಯಲ್ಲಿ ಹೇಳಿದೆ. ಅದು ಸುಮಾರು 7½ ಲಕ್ಷರೂಪಾಯಿಗಳ ನಷ್ಟದಲ್ಲಿ ಕೆಲಸ ಮಾಡುತ್ತಿತ್ತು. ಅದಕ್ಕೆ ನಾನು ಅದನ್ನು ನನಗೆ ವಹಿಸಿ, ನನಗೇನೂ ನಂಬಾವನೆ ಬೇಡ, ನಾನು ಅದನ್ನು ನರಿಯಾಗಿ ನಡೆಸುತ್ತೇನೆಂದು ಹೇಳಿದೆ. ಡಾ॥ ನಾಗನಗೌಡರು ಬಂದು ಖುದ್ದಾಗಿ ನೋಡಿದರು. ಈಗ 3½ ಸಾವಿರ ರೂಪಾಯಿ, 4½ ಸಾವಿರ ರೂಪಾಯಿ ಉತ್ಪತ್ತಿ ಬರುತ್ತಿದೆ. ಐದಾರು ವರ್ಷಗಳಿಂದ 7½ ಲಕ್ಷ ರೂಪಾಯಿ ನಷ್ಟವಾಗಿ ಈಗ 3½—4½ ಸಾವಿರ ರೂಪಾಯಿ ಉತ್ಪತ್ತಿ ಬರಬೇಕಾದರೆ ಲೀಕೇಜ್ ಇತ್ತೆಂಬುದನ್ನು ಊಹಿಸಬಹುದು. ಡಾ॥ ನಾಗನಗೌಡರು ಅಧಿಕಾರದಲ್ಲಿದ್ದಾಗ ಅಲ್ಲಿಗೆಬಂದು ಒಂದು ಜೊತೆ ಎತ್ತು ಬಹಳ ಬಡವಾಗಿದ್ದುದನ್ನು ಕಂಡು ಹುರುಳಿ ಕೊಟ್ಟಿಲ್ಲವೇ ಎಂದು ಕೇಳಿದರು. ಕೊಟ್ಟಿದೆಯೆಂದು ಜವಾಬು ಬಂತು. ಡಾ॥ ನಾಗನಗೌಡರು ವ್ಯವಸಾಯದ ವಿಚಾರ ಚೆನ್ನಾಗಿ ತಿಳಿದವರಾದ್ದರಿಂದ ತಕ್ಷಣ ಅದನ್ನು ಪರೀಕ್ಷೆ ಮಾಡಿದರು. ಹುರುಳಿ ಬಂದಿದ್ದು, ಖರ್ಚಾಗಿದ್ದುದು ಲೆಕ್ಕದಲ್ಲಿತ್ತು. ಆದರೆ ನಿಜವಾಗಿಯೂ ಎತ್ತುಗಳಿಗೆ ಕೊಡುತ್ತಿರಲಿಲ್ಲ. ಸ್ಲಿಪ್ ಹಾಕಿ ಹಾಗೆ ಖರ್ಚುಮಾಡುವ ಪದ್ಧತಿಯಿದೆ. ಇದನ್ನೆಲ್ಲಾ ಎಚ್ಚರಿಕೆಯಿಂದ ನೋಡಬೇಕು

2-30 P.M.

ಈ ಎಕ್ಸ್‌ಪೆರಿಮೆಂಟಲ್ ಫಾರಂನಿಂದ 4,78,800 ರೂಪಾಯಿ ಲುಕ್ಸಾನ ಆಗುತ್ತಾ ಇದೆ. ಸ್ವಪರಿಪೂರ್ಣ ಆದರೂ ಆಗಿರಬೇಕು. ಇದರಲ್ಲಿ ಇಟ್ಟುಕೊಂಡಿರುವ ಉದ್ದೇಶ ಸಾಧನೆಯಾಗಬೇಕು. ಸಂಬಂಧಪಟ್ಟ ಸುತ್ತಮುತ್ತಲಿನ ತಾಲ್ಲೂಕುಗಳಿಗೆ ಬಿತ್ತನೆಯನ್ನು ಪೂರೈಕೆ ಮಾಡತಕ್ಕ ತತ್ವವನ್ನಾದರೂ ಇಟ್ಟುಕೊಳ್ಳಬೇಕು. ಆದರೆ ಹಾಗೆ ನಡೆಯಕ್ಕೆ ಮಾಡುತ್ತಿಲ್ಲ. ಆದುದರಿಂದ ನಾನು ಈ ರೀತಿಯಾಗಿ ಸಲಹೆ ಮಾಡುತ್ತಿದ್ದೇನೆ.

ಇನ್ನು ಅಗ್ರಿಕಲ್ಚರಲ್ ಕಾಲೇಜ್ ವಿಷಯ. ಈಗ ಒಂದು ಸ್ಕೂಲು ಒಂದು ಕಾಲೇಜು ಅಷ್ಟು ಇದೆ. ವಿಶಾಲ ಮೈಸೂರು ರಾಜ್ಯವಾದಮೇರೆ ಸ್ಕೂಲುಗಳು ಹೆಚ್ಚಿವೆ. ಅದರ ಜೊತೆಗೆ ಖರ್ಚುನಹ ಹೆಚ್ಚಿದೆ. ಉತ್ಪತ್ತಿ ಮತ್ತು ಖರ್ಚು ನೋಡಿದರೆ ನಷ್ಟ ಆಗುತ್ತಾ ಇದೆ. ಈ ಕಾಲೇಜು ಮತ್ತು ಸ್ಕೂಲುಗಳಿಗೆ ಬಹಳ ಜಮೀನು ಇದೆ. ಉತ್ಪತ್ತಿವಾದತಕ್ಕಂಥ ಎಲ್ಲ ನೆಲಕರಣೆ ಕೊಡಲಾಗಿದೆ. ಆದರೆ contingency ಖರ್ಚು 40 ಸಾವಿರ 50 ಸಾವಿರ ರೂಪಾಯಿ ಆಗುತ್ತಿರುವುದನ್ನು ನೋಡಿದರೆ ಭಯವಾಗುತ್ತದೆ. ಅದಕಾರಣ ದಯವಿಟ್ಟು ಇದನ್ನು ಪರಿಶೀಲನೆಮಾಡಿ ನೋಡಬೇಕು.

ಇನ್ನು ರಾಷ್ಟ್ರೀಯ ವಿಸ್ತರಣೆ ಯೋಜನೆಯಲ್ಲಿ village level workers ತಯಾರುಮಾಡುತ್ತಾರೆ. ಮಂಡ್ಯದಲ್ಲಿ ಒಂದೇ ಒಂದು ಎಕ್ಸ್‌ಪೆರಿಮೆಂಟಲ್ ಫಾರಂ

ಇದೆ. ಆದರೆ Selection Committee ಯವರು ಒಂದು ಗುಂಪಿಗೆ ಸೇರಿದ ಜನರಿಗೆ ಅಷ್ಟೇ ಕೊಡಕ್ಕಂಥ ಕೆಟ್ಟ ಬುದ್ಧಿಯನ್ನು ಬಿಟ್ಟು ಬಿಡಬೇಕು. ಅದು ಸಾರ್ವತ್ರಿಕವಾಗಿ ಎಲ್ಲರಿಗೂ ಸಿಕ್ಕುವ ಹಾಗೆ ಇರಬೇಕು. N.E.S.ನಲ್ಲಿ ಅವರನ್ನು ತೆಗೆದುಕೊಳ್ಳಬಹುದು. ಆದರೆ ಅಷ್ಟುಜನ ಸಾಕಾಗುವದಿಲ್ಲ. ತರಬೇತಿ ಪಡೆದು ತಯಾರು ಆಗತಕ್ಕಂಥವರ ಸಂಖ್ಯೆ ಕಡಮೆಯಾಗಿದೆ. ಆದುದರಿಂದ ತರಬೇತಿ ಕೊಡತಕ್ಕ ಶಿಕ್ಷಣ ಏರ್ಪಾಡು ಮಾಡಬೇಕು ಎಂದು ಸರಕಾರಕ್ಕೆ ನಾನು ಸಲಹೆ ಮಾಡುತ್ತೇನೆ.

ಇನ್ನು ಅಗ್ರಿಕಲ್ಚರಲ್ ಮಾರ್ಕೆಟ್ ವಿಷಯ. ರೈತ ಬೆಳೆದಂಥ ಧಾನ್ಯವನ್ನು ಸರಿಯಾದ ಬೆಲೆಗೆ ಮಾರಲಕ್ಕೆ ಒಂದು ಸ್ಥಳವಿಲ್ಲ. ರೈತನ ವಿಷಯ ಬಂದ ಕೂಡಲೇ ಸರಕಾರ ಹಿಂದೆ ಉಳಿಯುತ್ತದೆ. ಓಟು ತೆಗೆದುಕೊಳ್ಳಲ್ಲಕ್ಕೆ ಬಂದಾಗ ಮುಂದೆ ಬರುತ್ತದೆ. ಗೋಡೌನ್ ಕೊಡಲು ಸರಕಾರ ಪ್ರಯತ್ನಮಾಡಿದೆ. ಆದರೆ ಅದು ಸಾಕಾದಷ್ಟು ಇಲ್ಲ, ಹಾಗು ವ್ಯವಸ್ಥಿತವಾಗಿಲ್ಲ. ಇನ್ನು weights and measures ಗೆ ಒಂದು ಸರಿಯಾದ ಕಾನೂನನ್ನು ತರಬೇಕು ಮತ್ತು ಎಲ್ಲ weights and measures uniform ಆಗಿ ಇರಬೇಕು. ಮೆಟ್ರಿಕ್ ಸಿಸ್ಟಂ ಪ್ರಕಾರ weights and measures ಮಾಡಬೇಕೆಂದು ಬಹಳ ದಿವಸಗಳಿಂದ ಹೇಳುತ್ತಾ ಇದ್ದೇನೆ. ಆದರೆ ಇದುವರೆಗೆ ಸರಕಾರ ಮನಸ್ಸುಮಾಡಿಲ್ಲ. ಕೊನೆಯದಾಗಿ ಇನ್ನೊಂದು ಮಹತ್ವದ ಸೂಚನೆ ಏನೆಂದರೆ ರೈತನಿಗೆ ನಷ್ಟವಾಗದ ಹಾಗೆ ಮಾಡುವದಕ್ಕಾಗಿ ಒಂದು ಇನ್ಶೂರನ್ಸ್ ಸ್ಕೀಮು ಜಾರಿಗೆ ತರಬೇಕು. ಇನ್ನೂ ಎಷ್ಟೋ ವಿಷಯ ಹೇಳಬೇಕಾಗಿದೆ. ಆದರೆ ಈಗ ಮಾತನಾಡಲು ನನಗೆ ಕಾರಾವಕಾಶವಿಲ್ಲ. ಆದುದರಿಂದ ಇಷ್ಟು ಹೇಳಿ ನನ್ನ ಭಾಷಣ ವಾಪಸು ತೆಗೆದುಕೊಳ್ಳುತ್ತೇನೆ.

*ಶ್ರೀ ಎ. ಆರ್. ಪಂಚಗಾವಿ (ಗೋಕಾಕ).—ಮಾನ್ಯ ಅಧ್ಯಕ್ಷರೆ, ಈಗ ಸಭೆಯಮುಂದೆ ಚರ್ಚೆಗೆ ಬಂದಿರುವ ಒಕ್ಕಲತನ ಮತ್ತು ಪೆಟೆರಿನರಿ ಬಜೆಟ್ ಡಿಮ್ಯಾಂಡುಗಳನ್ನು ನಾನು ಸ್ವಾಗತಿಸುತ್ತೇನೆ. ಹಾಗೆಯೇ ಕೆಲವು ಸೂಚನೆಗಳನ್ನು ಕೊಡಲು ಬಯಸುತ್ತೇನೆ.

ಒಕ್ಕಲತನವು ನಮ್ಮ ದೇಶದ ಮುಖ್ಯ ಉದ್ಯೋಗವಾಗಿದೆ. ಶೇಕಡಾ 80ರಷ್ಟು ಜನರಿಗೆ ಒಕ್ಕಲತನ ಆಧಾರವಾಗಿದೆ. ಒಕ್ಕಲತನಕ್ಕೆ ಬಜೆಟ್ಟಿನಲ್ಲಿ ಕೊಟ್ಟಿರತಕ್ಕ 2,14,27,000 ರೂಪಾಯಿ ಹಣ ತೀರ ಕಡಮೆಯಾಗಿದೆ. ಅದೇರೀತಿ ವೆಟರಿನರಿಗೆ ಕೊಟ್ಟಿರತಕ್ಕ 94,58,100 ರೂಪಾಯಿ ಹಣ ಸಹ ಕಡಮೆಯಾಗಿದೆ. ನಮ್ಮ ದೇಶದಲ್ಲಿ ಒಕ್ಕಲತನ ಶಿಕ್ಷಣ ಪಡೆಯುವುದು ತೀರ ಕಡಮೆಯಾಗಿದೆ ಎಂದು ಹೇಳಬಹುದು. ಒಕ್ಕಲತನವು ನಮ್ಮ ದೇಶದ ಮುಖ್ಯ ಉದ್ಯೋಗವಾಗಿರುವದರಿಂದ ಜನಸಂಖ್ಯೆಯ ಪ್ರಮಾಣದಮೇಲೆ ಇನ್ನೂ ಹೆಚ್ಚಿಗೆ ಹಣ ಒದಗಿಸಬೇಕು. ಒಕ್ಕಲತನ ಶಿಕ್ಷಣದ ಬಗ್ಗೆ 10 ಕೋಟಿ ರೂಪಾಯಿ ಮೇಲ್ಪಟ್ಟು ಇರಬೇಕು.

Sri C. J. MUCKANNAPPA.—Sir, I rise to a point of order. You have given a ruling that members should not read newspapers in the House. I want to know whether Ministers can go through their files and pass orders thereon in the House.

Mr. SPEAKER.—The Ministers can look into their files and dispose them of in the House.

ಶ್ರೀ ಎ. ಆರ್. ಪಂಚಗಾವಿ.—ಒಕ್ಕಲತನವು ನಮ್ಮ ದೇಶದಲ್ಲಿರತಕ್ಕ ಮುಖ್ಯ ಉದ್ಯೋಗವಾಗಿದೆ. ಈ ಉದ್ಯೋಗಕ್ಕೆ ಸಾಕಷ್ಟು ಶಕ್ತಿ ಇಲ್ಲದೇ ಇರುವದರಿಂದ ಜನರಲ್ಲಿ ತಾತ್ಸಾರ ಭಾವನೆ ಬಂದಿದೆ. ಅಧಿಕಾರಿಗಳಲ್ಲಿ ಇತರ ಉದ್ಯೋಗಸ್ಥರಲ್ಲಿ ಒಕ್ಕಲತನದ ಬಗ್ಗೆ ಒಂದು ರೀತಿಯ ತಾತ್ಸಾರ ಭಾವನೆಯುಂಟಾಗಿದೆ. ಅದಕ್ಕೆ ಯೋಗ್ಯ ಶಿಕ್ಷಣದ ಅಭಾವವೇ ಕಾರಣ. ಯಾವುದೇ ಖಾತೆಯಲ್ಲಿ ಕೆಲಸಮಾಡುತ್ತಿರಲಿ ಎಲ್ಲರೂ ಒಕ್ಕಲತನದ ಶಿಕ್ಷಣ ಪಡೆಯಲೇ ಬೇಕೆಂಬ ಒಂದು ಯೋಜನೆ ಮಾಡಬೇಕು. ಹೀಗೆ ಮಾಡಿದರೆ ತಿರಸ್ಕಾರ ಭಾವನೆ ಹೊರಟು ಹೋಗುವುದು ಯಾರಿಗೂ ಅನ್ಯಾಯವಾಗಬಾರದು. ಜನರಲ್ಲಿ ಇರುವ ಅಜ್ಞಾನವೇ ಈ ಉದ್ಯೋಗ ಬೆಳೆಯದೆ ಇರುವುದಕ್ಕೆ ಕಾರಣವಾಗಿದೆ. ಆದ್ದರಿಂದ ಒಕ್ಕಲತನದ ಶಿಕ್ಷಣವನ್ನು ಪ್ರತಿಯೋಬ್ಬರೂ ಕಡ್ಡಾಯವಾಗಿ ತೆಗೆದುಕೊಳ್ಳಲೇಬೇಕೆಂದು ಮಾಡಿದರೆ ಒಕ್ಕಲತನದ ಬಗ್ಗೆ ಜನರಲ್ಲಿ ಆದರ ಭಾವ ಬರುತ್ತದೆ. ಹಾಗು ತಿರಸ್ಕಾರ ಭಾವನೆ ಅಳಿಯುತ್ತದೆ. ನಮ್ಮ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿ ಬಂದನಂತರ ಒಕ್ಕಲತನದ ಬಗ್ಗೆ ಅವರು ತಾಳುತ್ತಿರುವ ಕಾಳಜಿಪೂರ್ವಕ ಧೋರಣೆಯಿಂದ ಒಕ್ಕಲತನವು ಸುಧಾರಿಸಬಹುದು ಎಂಬ ಆಸೆ ನಮಗೆ ಇದೆ. ಒಕ್ಕಲತನಕ್ಕೆ ಅಗ್ರಪ್ರಾಧಾನ್ಯ ಕೊಡಬೇಕು ಎಂದು ನಾನು ಹೇಳುತ್ತೇನೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಕ್ಕಲತನಕ್ಕೆ ಪ್ರಾಧಾನ್ಯ ಕೊಟ್ಟಿದೆ. ಹೊಸ ಹೊಸ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ. ಮುಖ್ಯವಾಗಿ ನೀರಾವರಿ ಭಾವಿಗಳ ಸಹಾಯ ಕೊಡುವುದು ಬಹಳ ಮಹತ್ವದ್ದಾಗಿದೆ. ನಮ್ಮ ಪ್ರದೇಶದಲ್ಲಿ ನೀರಾವರಿಗಾಗಿ 1,100 ಭಾವಿಗಳನ್ನು ಕೊಡಬೇಕೆಂದು ಇದೆ. ಇದರಿಂದ ಒಕ್ಕಲತನ ಸುಧಾರಿಸುತ್ತದೆ. ಎಷ್ಟು ಕೆಲಸ ಆಗಬೇಕೋ ಅಷ್ಟು ಕೆಲಸವಾಗಿಲ್ಲ. ಯೋಜನೆಯ ಪೂರ್ತಿಲಾಭ ತೆಗೆದುಕೊಂಡಿಲ್ಲ. ಯಾಕೆಂದರೆ ಈ ಯೋಜನೆಯ ಬಗ್ಗೆ ಸಾಕಷ್ಟು ಪ್ರಚಾರವಾಗಿಲ್ಲ. ಸಾಕಷ್ಟು ಮಾಹಿತಿ ಜನರಿಗೆ ಇಲ್ಲದೇ ಇರುವ ಮೂಲಕ ರೈತರು ಅರ್ಜಿಗಳನ್ನು ಕೊಟ್ಟಿಲ್ಲ ಮತ್ತು ಅವರಿಗೆ ಸಹಾಯ ಸಿಕ್ಕುತ್ತಿಲ್ಲ. ಈ ಭಾವಿ ಯೋಜನೆಯಲ್ಲಿ 250 ರೂಪಾಯಿ ಸಬ್‌ಸಿಡಿ ಮತ್ತು 750 ರೂಪಾಯಿ ಸಾಲ ಕೊಡುತ್ತಾರೆ. ಇದು ಒಂದು ಹೊಸ ಯೋಜನೆಯಾಗಿರುವದರಿಂದ ಇನ್ನೂ ಹೆಚ್ಚು ಹಣ ಕೊಡಲಕ್ಕೆ ಬೇಕು. ಯಾಕೆಂದರೆ ಹೆಚ್ಚು ಖರ್ಚು ಬರುವದರಿಂದ ಒಂದು ಭಾವಿಗೆ ಎರಡು ಸಾವಿರ ರೂಪಾಯಿ ಕೊಡಬೇಕು. ಈ ಬಗ್ಗೆ ಒಕ್ಕಲಿಗರಿಗೆ ಸಾಕಷ್ಟು ಮಾಹಿತಿ ಗೊತ್ತಿಲ್ಲ. ಸರಿಯಾದ ಪ್ರಚಾರ ಕಾರ್ಯ ನಡೆದಿಲ್ಲ. ಆದ್ದರಿಂದ ಸಾಕಷ್ಟು ಪ್ರಚಾರ ಕೆಲಸವಾಗಬೇಕು. ಒಕ್ಕಲಿಗರು ಮುಂದೆ ಬಂದು ಇದರ ಪೂರ್ಣಲಾಭ ತೆಗೆದುಕೊಳ್ಳಬೇಕು.

ಇನ್ನು ಈ ಹೊಸ ಯೋಜನೆಗಳಲ್ಲಿ ಪಶು ಅಭಿವೃದ್ಧಿ ಸುಧಾರಣೆಯ ಬಗ್ಗೆ ಸರ್ಕಾರದವರು ಮಾಡಿರುವ ಕಾರ್ಯ ಅತ್ಯಂತ ಮಹತ್ವವಾದುದು. ಅಂತಹ ಯೋಜನೆಗಳಿಂದ ಅನಾವಶ್ಯಕವಾಗಿ ಹಾಳಾಗಿ ಹೋಗುತ್ತಿರುವ ಸಂಪತ್ತನ್ನು ಸುಧಾರಿಸಬೇಕು. ಮುಂದಿನ ವರ್ಷದಲ್ಲಿ 12 ಸಾವಿರ ಹಳ್ಳಿಗಳಲ್ಲಿ ಉತ್ತಮರೀತಿಯಲ್ಲಿ ಗೊಬ್ಬರವನ್ನೊದಗಿಸಲು ಪ್ರಯತ್ನವನ್ನು ಸರ್ಕಾರದವರು ನಡೆಸುತ್ತಿರುವುದು

(ಶ್ರೀ ಎ. ಆರ್. ಪಂಚಗಾವಿ)

ಅತ್ಯಂತ ಉತ್ತಮವಾದ ಯೋಜನೆ. ಇದರಿಂದ ಒಕ್ಕಲು ತನದ ಪರಿಸ್ಥಿತಿ ಬಹಳಮಟ್ಟಿಗೆ ಸುಧಾರಿಸುವುದೆಂದು ನನ್ನ ಭಾವನೆಯಾಗಿದೆ. ಹಳ್ಳಿಗಳಲ್ಲಿ ಕಸಕಡ್ಡಿಗಳನ್ನು ಸಿಕ್ಕಾಪಟ್ಟೆಹಾಕಿ ಅಲ್ಲಿನ ಸೂತ್ತಮುತ್ತಲಿರುವ ಜನರು ಮಲಮೂತ್ರಗಳನ್ನು ವಿಸರ್ಜನೆಮಾಡಿ ಹಳ್ಳಿಯನ್ನು ಹೊಲಸುಮಾಡುತ್ತಿದ್ದಾರೆ. ಇದರ ಪೂರ್ಣ ಉಪ ಯೋಗವನ್ನು ಪಡೆಯುವಂತೆ ಅವರಿಗೆ ತಿಳಿವಳಿಕೆ ಕೊಟ್ಟುಸ್ವಚ್ಛವಾದ ರೀತಿಯಲ್ಲಿ ಗ್ರಾಮವನ್ನು ಇಡಲು ವ್ಯವಸ್ಥೆಮಾಡಬೇಕು. ಕಸವನ್ನು ರಸವನ್ನಾಗಿ ಮಾಡು ಎಂದು ಹೇಳುವಂಥಾದ್ದು ಭಂಗಾರದಂತಹ ಮಾತು. ಇದಕ್ಕೆ ಹಳ್ಳಿಗಾಡಿನವರಿಂದ ಸ್ವಾಗತ ಸಿಕ್ಕಬೇಕು. ಹಳ್ಳಿಗಳಲ್ಲಿ ಅನೇಕ ಕಡೆ ಇದರ ಬಗ್ಗೆ ತಿರಸ್ಕಾರ ಭಾವನೆಯಿದೆ. ಇಂತಹ ಮನೋಭಾವನೆ ಒಕ್ಕಲಿಗರ ಮನಸ್ಸಿನಲ್ಲಿರುವುದು ಹೋಗಬೇಕು. ಗೊಬ್ಬರದ ಅಭಾವ ಎಲ್ಲಾ ಕಡೆಯೂ ಹೆಚ್ಚಾಗಿದೆ. ನೀರಾವರಿ ಯೋಜನೆಗಳಾದಮೇಲೆ, ಗೊಬ್ಬರದ ಬಗ್ಗೆ ಹಳ್ಳಿಗಾಡಿನವರಲ್ಲಿ ತಿರಸ್ಕಾರ ಭಾವನೆ ಹೋಗುವು ದಕ್ಕೆ ಪ್ರಾರಂಭವಾಗಿದೆ. ಹಳ್ಳಿಗಳಲ್ಲಿ ಪಂಚಾಯತಿ ಯವರು ಪಾಯಿಖಾನೆಗಳನ್ನು ಕಟ್ಟಿಸಬೇಕು. ಗೊಬ್ಬರ ದಿಂದ ಎಷ್ಟು ಲಾಭವಾಗುತ್ತದೆಂಬುದನ್ನು ಸರ್ಕಾರ ದವರು ಚೆನ್ನಾಗಿ ಅರಿತು ಮುಂದಿನ ವರ್ಷದೊಳಗೆ ಸುಮಾರು 12 ಸಾವಿರ ಹಳ್ಳಿಗಳಿಗೆ ಗೊಬ್ಬರದ ಸರಬ ರಾಜನ್ನು ಕಾಲಕ್ಕೆ ಸರಿಯಾಗಿ ಒದಗಿಸುವಂತೆ ಏರ್ಪಾಡು ಮಾಡಬೇಕು. ಇದರಿಂದ ಹಳ್ಳಿಗಳ ಸುತ್ತ ಮುತ್ತಲಿರುವ ಒಕ್ಕಲಿಗರ ಪರಿಸ್ಥಿತಿ ಸುಧಾರಿಸ ಬಹುದು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸು ತ್ತೇನೆ.

*ಶ್ರೀ ಬಿ ಎಲ್. ನಾರಾಯಣಸ್ವಾಮಿ (ಮುಳ ಬಾಗಿಲು).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಎದುರಿಗಿರುವ ಡಿಮ್ಯಾಂಡ್ ಬಹಳ ಪ್ರಾಮುಖ್ಯ ವಾದುದು. ಸ್ವಾತಂತ್ರ್ಯ ಬಂದು 10 ವರ್ಷಗಳು ಪೂರ್ತಿಯಾದರೂ ಸಹ ಇದುವರೆಗೆ ದೇಶದಲ್ಲಿ ಬೇಕಾ ದಷ್ಟು ಆಹಾರವನ್ನು ಬೆಳೆಯುವುದಕ್ಕಾಗಲಲ್ಲ. ಸರ್ಕಾರದವರು ಇದಕ್ಕಾಗಿ ಲಕ್ಷಾಂತರ ರೂಪಾಯಿ ಗಳನ್ನು ವ್ಯಯಮಾಡಿ ಹೆಚ್ಚು ಆಹಾರವನ್ನು ಬೆಳೆಯ ಬೇಕೆಂದು ಮುಂದೆ ಬಂದಿದ್ದಾರಾದರೂ, ವ್ಯವಸಾಯದ ಇರಾಖೆ ಎಷ್ಟು ಫಲದಾಯಕವಾಗಿ ಕೆಲಸಮಾಡಿಲ್ಲ. ನಾವು ನಿರೀಕ್ಷಿಸಿದಷ್ಟು ಫಲ ದೊರಕಿಲ್ಲವೆಂಬುದನ್ನು ಯಾರಾದರೂ ಒಪ್ಪಿಕೊಳ್ಳಬಹುದು. ಇದಕ್ಕೆ ಕಾರಣ ವೇನಿರಬೇಕೆಂಬುದನ್ನು ಸಾರ್ವಜನಿಕ ಸರ್ಕಾರ ಯೋಚನೆ ಮಾಡಬೇಕು. ಸರ್ಕಾರದವರು ಇದಕ್ಕೆ ಒಂದು ದೊಡ್ಡ ಇರಾಖೆಯನ್ನು ನೇಮಿಸಿದ್ದಾರೆ. ಈ ಇರಾಖೆಯನ್ನು ನೇಮಿಸಿದ್ದರೂ ಸಹ ನಾವು ನಿರೀಕ್ಷಿಸಿ ದಷ್ಟು ಫಲ ದೊರಕದಿರಲು ಸರ್ಕಾರದ ಹೊಣೆ ಎಷ್ಟೆಂಬು ದನ್ನು ಸ್ವಲ್ಪ ಬಿಚ್ಚಿದ ಮನಸ್ಸಿನಿಂದ ಯೋಚನೆ ಮಾಡಬೇಕು. ಮುಖ್ಯವಾಗಿ ವ್ಯವಸಾಯ ಅಭಿವೃದ್ಧಿ ಗೊಳ್ಳಬೇಕಾದರೆ ಕೇವಲ ಮಾನವನ ಶಕ್ತಿ ಮತ್ತು ಪ್ರಕೃತಿ ಸಹಾಯ ಬಹಳ ಅವಶ್ಯಕವಾಗಿದೆ. ಕೋಲಾರ ಜಿಲ್ಲೆಯಲ್ಲಿ ಪ್ರಕೃತಿ ಸಹಾಯವೇ ಮಹತ್ವವಾದುದು. ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಬೆಳೆಯುವ ಯೋಜನೆಯು ವಿಫಲವಾಗಿದೆ. ಏಕೆಂದರೆ ಅನಿಶ್ಚಿತ ಮತ್ತು ಅಲ್ಪ ಮಳೆಯ ದೆಸೆಯಿಂದ ಯಾವೊಂದು ಬೆಳೆಯೂ ಆಗದೆ ರೈತರ ಮನಸ್ಸು ನಿಜವಾಗಿ ನೋಯುತ್ತಿದೆ. ಕೋಲಾರದಲ್ಲಿ ಈ ಸ್ಥಿತಿಯಾಗಿರುವುದರಿಂದ ವ್ಯವ ಸಾಯ ಲಾಭದಾಯಕವಾಗಿಲ್ಲವೆಂದು ಹೇಳು ವುದು ಮಾತ್ರವಲ್ಲ, ವ್ಯವಸಾಯ ಮಾಡತಕ್ಕವರಿಗೆ ಅವರ ವೃತ್ತಿಯಲ್ಲಿ ಆಶೆ—ಆಕಾಂಕ್ಷೆಗಳೇನೂ ಇಲ್ಲ. ಇದಕ್ಕೆ ಕಾರಣವಿಷ್ಟೆ. ದಿನೇ ದಿನೇ ತಾನು ಕೃಷಿ ಗೋಸ್ಕರ ಎಷ್ಟೊಂದು ಹಣವನ್ನು ವ್ಯಯ ಮಾಡಿದರೂ ಅವನ ಬಡತನ ಹೆಚ್ಚಾಗುತ್ತಿದೆ. ರೈತನ ಸ್ಥಿತಿ ಕುಸಿದುಹೋಗುತ್ತಿದೆ. ಆದ್ದರಿಂದ ಕ್ಷಾಮಕ್ಕೆ ಬಲ ಯಾಗುತ್ತಿರುವ ಜಿಲ್ಲೆಗಳಿಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ಒತ್ತಾಯಮಾಡಿ ಪ್ರಾರ್ಥಿಸು ತ್ತೇನೆ.

ಕೋಲಾರ ಜಿಲ್ಲೆಯಲ್ಲಿ ನಿಜವಾಗಿ ವ್ಯವಸಾಯ ಅಭಿವೃದ್ಧಿಯಾಗಬೇಕಾಗಿದ್ದರೆ ನೀರಾವರಿ ಭಾವಿಗಳು ಹೆಚ್ಚಾಗಬೇಕು. ಹೆಚ್ಚು ಕುಟುಂಬಗಳಿರುವ ಕಡೆ, ಪ್ರತಿಯೊಂದು ಕುಟುಂಬಕ್ಕೊಂದೊಂದು ಭಾವಿಯಾ ದರೂ ಬೇಕು. ಏಕೆಂದರೆ ಅನೇಕ ಮಂದಿ ಬಡವರು ಇರುತ್ತಾರೆ. ಆದರೆ ಪ್ರತಿಯೊಬ್ಬರೂ ತಮ್ಮ ಸ್ವಂತ ಖರ್ಚಿನಿಂದ ಭಾವಿ ತೆಗೆಸುವುದಕ್ಕೆ ಸಾಧ್ಯವಿಲ್ಲ. ಆದ್ದ ರಿಂದ ಸರ್ಕಾರದವರು ಅವರ ನೆರವಿಗೆ ಬರಬೇಕು. ಸಾಲದ ರೂಪವಾಗಿಯಾದರೂ ಅವರಿಗೆ ಹಣ ಸಹಾಯ ಮಾಡಬೇಕು. ಅಲ್ಪ ಸ್ವಲ್ಪ ಗ್ರ್ಯಾಂಟು ನೆಪಮಾತ್ರಕ್ಕೆ ಅಥವಾ ಒಂದು ಪ್ರಚಾರಕ್ಕೆ ಅನುಕೂಲವಾಗುತ್ತದೆಯೇ ಹೊರತು ಬೇರೆ ಇನ್ನಾವ ಕಾರ್ಯವನ್ನು ಸಾಧಿಸಲು ಖಂಡಿತ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಮಳೆಯ ಅಭಾವ ಕಣ್ಣಿಗೆ ಕಾಣಿಸುವುದಕ್ಕಿಂತ ಮುಂಚಿತ ವಾಗಿಯೇ ಒಂದು ಸುವ್ಯವಸ್ಥಿತವಾದ ಯೋಜನೆ ಯನ್ನು ವ್ಯವಸಾಯಕ್ಕೆ ಯಾವರೀತಿಯಲ್ಲೂ ಧಕ್ಕೆ ಬಾರದಂತೆ ಹಾಕಿಕೊಂಡು, ಮಳೆಯ ಅಭಾವ ಇರುವ ಕಡೆಗಳಲ್ಲಿ ಭಾವಿಗಳನ್ನು ತೆಗೆಸಲು ಅದಕ್ಕನುಗುಣ ವಾಗಿ ಸಾಲವನ್ನು ಸರ್ಕಾರದವರು ಒದಗಿಸಬೇಕು. ಆರೀತಿ ಸಾಲವನ್ನು ಒದಗಿಸುವಾಗ ಸರ್ಕಾರದವರು ಪ್ರತಿಫಲದ ಬಗ್ಗೆ ವಿಶೇಷ ಗಮನವನ್ನು ಕೊಡಬಾರದು. ನೀರಾವರಿ ಪಂಪುಗಳನ್ನು ಹಾಕಬೇಕು. ಅದರಿಂದ ಖರ್ಚು ಕಡಿಮೆಯಾಗುತ್ತದೆ. ರೈರ್ವೆ ಪೋಲ್ಸನ್ನು ಹಾಕಿದರೆ ಖರ್ಚು ಜಾಸ್ತಿಯಾಗುತ್ತದೆ. ವ್ಯವಸಾ ಯಕ್ಕೆ ನೀರಾವರಿ ಪಂಪುಗಳನ್ನು ಹಾಕಬೇಕಾದರೆ, ಬಲ್ಲ ಪೋಲ್ಸನ್ನು ಉಪಯೋಗಿಸಬೇಕು. ಸ್ಪೀರ್ ಪೋಲ್ಸನ್ನಿಂದ ಏನೂ ಪ್ರಯೋಜನವಿಲ್ಲ. ಅದರಿಂದ ರೈತರಿಗೆ ಬಹಳ ಅನಾನುಕೂಲವಾಗುತ್ತದೆ. ಅದು ಉತ್ತಮವಾಗಿರುವುದಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ತೀವ್ರವಾಗಿ ಯೋಚಿಸಿ ಅದಕ್ಕೆ ಬೇಕಾದಷ್ಟು ಹಣ ಸೌಕರ್ಯವನ್ನೊದಗಿಸಬೇಕು. ಮುಖ್ಯವಾಗಿ ದೇಶ ಅಭಿವೃದ್ಧಿಯಾಗಬೇಕಾದರೆ, ಅದರಲ್ಲೂ ವ್ಯವ ಸಾಯ ಅಭಿವೃದ್ಧಿಯಾಗಬೇಕಾದರೆ ನಮಗೆ ಧನ ಸಂಪತ್ತು ಹೆಚ್ಚಾಗಿ ಬೇಕು. ಮೂಕಪ್ರಾಣಿಗಳ ವಿಚಾರದಲ್ಲಿ ಸರ್ಕಾರದವರು ಈಗಾಗಲೇ ಅನೇಕ ಪಶುವೈದ್ಯ ಶಾಲೆಗಳನ್ನು ತೆರೆಯಲು ಪ್ರಯತ್ನ ಮಾಡಿದ್ದಾರೆ. ಇನ್ನೂ ಆಗಬೇಕಾದಷ್ಟು ಹೇರಳ ವಾಗಿದೆ. ಕೆಲವು ಜಿಲ್ಲೆಗಳಲ್ಲಿ ಪಶುವೈದ್ಯಾಲಯ ಗಳನ್ನು ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಬಹಳ ಅಲ್ಪ ಸಂಖ್ಯೆಯಲ್ಲಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ತಮ್ಮ ತಾಲ್ಲೂಕಿನ ವಿಷಯ ಹೇಳಿ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ನನ್ನ ತಾಲ್ಲೂಕ್ ಶ್ರೀನಿವಾಸಪುರದ ವಿಷಯ ಹೇಳಬೇಕಾದರೆ 1947ನೆಯ ಇಸವಿಯಲ್ಲಿ ಸಚಿವರು ನಮ್ಮ ತಾಲ್ಲೂಕಿಗೆ ಬಂದಾಗ ಒಂದು ಪಶುವೈದ್ಯಶಾಲೆಯನ್ನು ಕೊಡು ತ್ತೇವೆಂದು ವಾಗ್ದಾನ ಮಾಡಿದ್ದರು. ಈಗಾಗಲೇ 1957ನೇ ಇಸವಿ ಕಳೆಯಿತು. ಈಗ 1958ನೇ ಇಸವಿ

ಯಲ್ಲಿದ್ದೇವೆ. ಮಂಡೇನಹಳ್ಳಿ ಮತ್ತು ರಾಯರ್ ಪಾಡು ಯಲ್ಲೂರು ಗ್ರಾಮಗಳಲ್ಲಿ ಪಶುವೈದ್ಯ ಶಾಲೆಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳಿದರು. ಸ್ಥಳೀಯ ಸಂಸ್ಥೆಯವರು ಮತ್ತು ಗ್ರಾಮಗಳವರು ಈ ಬಗ್ಗೆ ಅವರ ಭಾಗವನ್ನು ಕೊಟ್ಟಿದ್ದಾರೆ. ಸರ್ಕಾರದವರು ತಮ್ಮ ಭಾಗವನ್ನು ಜಾಗ್ರತೆ ಕೊಟ್ಟು ಕೂಡಲೆ ಅಲ್ಲಿ ಪಶುವೈದ್ಯ ಶಾಲೆಗಳನ್ನು ತೆರೆಯ ಬೇಕೆಂದು ಪ್ರಾರ್ಥಿಸುತ್ತೇನೆ. ಮಾನ್ಯಮಂತ್ರಿಗಳ ಜಿಲ್ಲೆಯಾದ ಶಿವಮೊಗ್ಗಾ ಜಿಲ್ಲೆಯಲ್ಲಿ 8-10 ಮೈಲಿಗೆ ಒಂದೊಂದು ಆಸ್ಪತ್ರೆ ಇದೆ. ಕೋಲಾರ ಜಿಲ್ಲೆಯ ರ್ನಾದರೋ 20-25 ಮೈಲಿಗಳವರೆಗೂ ಒಂದು ಆಸ್ಪತ್ರೆ ಇಲ್ಲ. ಪ್ರಾಣಿ ಸಂಪತ್ತು ಜಾಸ್ತಿಯಾಗಲು ಮೊದಲಿಗೆ ಗೂಳಿಗಳನ್ನು ಉಚಿತವಾಗಿ ಒದಗಿಸುತ್ತಿದ್ದರು. ಈಗ ಸರ್ಕಾರದವರು ಇಂಸೆಮಿನೇಷನ್ ಸೆಂಟರ್‌ಸ್ಸನ್ನು ಪ್ರಾರಂಭಮಾಡಬೇಕೆಂದು ಹೊರಟಿದ್ದಾರೆ. ಮೂರು ವರ್ಷಗಳಿಂದ ಎಐ.ಎಸ್. ಮತ್ತು ಸಿ.ಡಿ. ಬ್ಲಾಕ್‌ಗಳಲ್ಲಿ ಗೂಳಿಗಳನ್ನು ಕೊಡುವುದನ್ನು ನಿಲ್ಲಿಸಿದ್ದಾರೆ. ಗೂಳಿಗಳನ್ನು ಒದಗಿಸದೆ ಇದ್ದರೆ ರೈತರಿಗೆ ಎಷ್ಟು ತೊಂದರೆಯಾಗುತ್ತದೆಂಬುದು ಮಾನ್ಯ ಸಚಿವರಿಗೆ ಚೆನ್ನಾಗಿ ಗೊತ್ತಿದೆ. ಒಟ್ಟಿನಲ್ಲಿ ಪ್ರಾಣಿ ಸಂಪತ್ತು ಹೆಚ್ಚಾಗಲು ಅವಕಾಶವಿಲ್ಲದೆ ವಿಧಿಯಿಲ್ಲದೆ ಕೆಳಮಟ್ಟದ ತಳಿಗಳು ಆಗುತ್ತಿವೆ. ಇಂಸೆಮಿನೇಷನ್ ಸೆಂಟರ್ಸ್ ಕೆಲವೆಡೆಗಳಲ್ಲಿ ತೃಪ್ತಿಕರವಾಗಿವೆ. ಇನ್ನು ಕೆಲವೆಡೆಗಳಲ್ಲಿ ಅದು ನಿಷ್ಪಲವಾಗಿದೆ. ತಾಲ್ಲೂಕಿನ ಐದಾರು ಮೈಲಿಗಳ ನುತ್ತ ಮುತ್ತಲಿನಲ್ಲಿಲ್ಲದೆ ಎಲ್ಲೋ 20-25 ಮೈಲಿಗಳ ದೂರದಲ್ಲಿ ಈ ಸೆಂಟರುಗಳಿದ್ದರೆ, ಅದರಿಂದ ಏನು ಉಪಯೋಗ ಪಡೆಯುವುದಕ್ಕೆ ಸಾಧ್ಯ? ನುಮಾರು ನಾಲ್ಕೈದು ವರ್ಷಗಳಿಂದಲೂ ಇದು ಇನ್ನೂ ಪ್ರಯೋಗದಲ್ಲಿಯೇ ಇದೆ. ದಯವಿಟ್ಟು ನಮಗೆ ಹಳೆಯ ಪದ್ಧತಿಯನ್ನು ಜಾರಿಗೆ ಕೊಡಿ, ಅಥವಾ ಹಿಂದಿನ ಪದ್ಧತಿಯಂತೆ ಗೂಳಿಗಳನ್ನು ಉಚಿತವಾಗಿ ಕೊಡತಕ್ಕ ಕಾರ್ಯವನ್ನು ಸರ್ಕಾರದವರು ಕೂಡಲೇ ಕೈಕೊಳ್ಳಬೇಕೆಂದು ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಬೋರಣ್ಣಗೌಡ (ಬೇಲೂರು):— ಸ್ವಾಮಿ, ನಮ್ಮಮುಂದೆ ಇರತಕ್ಕ ಡಿಮ್ಯಾಂಡನ್ನು ಪುಷ್ಟೀಕರಿಸುತ್ತಾ ಕೆಲವು ಸಲಹೆಗಳನ್ನು ಕೊಡ ಬೇಕೆಂದು ಆಶಿಸುತ್ತಾ ಇದ್ದೇನೆ. ನಾವು ಜಮೀನು ಸಂಬಂಧವಾದಂಥ ಅಭಿವೃದ್ಧಿಯನ್ನು ಯಾವರೀತಿ ಮಾಡುತ್ತಾ ಇದ್ದೇವೆ ಎಂದರೆ ಈಗತಾನೆ ಮಾನ್ಯ ಮಿತ್ರರಾದ ಶ್ರೀಮಾನ್ ನರಸಿಂಹಸ್ವಾಮಿ ಅವರು ನಾವು ಎಷ್ಟು ಜಾಗ್ರತೆ ಸ್ವಯಂ ಪರಿಪೂರ್ಣತೆಯನ್ನು ಹೊಂದಬೇಕಾಗಿತ್ತೋ ಅಷ್ಟು ಜಾಗ್ರತೆ ಸ್ವಯಂ ಪರಿಪೂರ್ಣತೆಯನ್ನು ಹೊಂದಿಲ್ಲ, ಲಕ್ಷಾಂತರ ರೂಪಾಯಿಗಳನ್ನು ಆಹಾರ ಉತ್ಪನ್ನ ಹೆಚ್ಚಿಸಲು ಖರ್ಚು ಮಾಡುತ್ತಾ ಇದ್ದೇವೆ ಎನ್ನುವ ವಿಚಾರವನ್ನು ವ್ಯಕ್ತ ಪಡಿಸಿದರು. ನಮ್ಮಲ್ಲಿ ನೀರಾವರಿಗೆ ಎಷ್ಟೋ ಕೆರೆ ಗಳು ಇದ್ದು ಪ್ರಕೃತಿ ಬಹಳ ಸಹಾಯ ಮಾಡುತ್ತಾ ಇದ್ದರೂ ನಮಗೆ ಬೇಕಾದಷ್ಟು ಆಹಾರವನ್ನು ಬೆಳೆದು ಕೊಳ್ಳಲಕ್ಕೆ ಏನು ತೊಂದರೆ ಇದೆ ಎಂದು ಯೋಚನೆ ಮಾಡಿದರೆ ನಮ್ಮ ದೇಶದ ಈ ಭಾಗದ ಉದ್ಯೋಗ ಸ್ಥರು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಒಬ್ಬೊಬ್ಬರು ಅಗ್ರಿಕಲ್ಚರಲ್ ಇಂಜಿನಿಯರ್ಸ್ ಇದ್ದಾರೆ. ಅವರ ಕೆಲಸ ಏನು ಎಂಬುದು ನಿಗೂಢ ವಾಗಿ ಗೊತ್ತಿಲ್ಲ. ಹಿಂದೆ ಅವರ ಕೆಲಸ ಗುಳಿ ಮಾರು ವುದು, ಬೀಜ ಮಾರುವುದು ಎಂದು ಹೇಳಿ ವ್ಯಾಪಾರಸ್ತ ರನ್ನಾಗಿ ಮಾಡಿ ಲಕ್ಷಾಂತರ ರೂಪಾಯಿ ಹಾಳಾಯಿತು. ಲಕ್ಷಾಂತರ ರೂಪಾಯಿ ತರೆಮೇಲೆ ಹಾಕಿಕೊಂಡು ಅಥವಾ ಆ ಇರಾಪಯನ್ನು ಇಟ್ಟುಕೊಂಡು ಎಷ್ಟು ಜನರನ್ನು ಪ್ರಾಸಿಕ್ಯೂಟ್ ಮಾಡಿದಿರಿ, ಎಷ್ಟು ಜನರನ್ನು ಸಸ್‌ಪೆಂಡ್ ಮಾಡಿದಿರಿ ಎಂದರೆ ಅದು ಒಂದು ಸಂಖ್ಯೆಯೇ ಸಾಕು. ಬೇರೆ ದೇಶದವರು ಬಹಳ ಮೇಧಾವಿಗಳು ಎಂದು ಹೇಳಿ ಇಲ್ಲಿಂದ ಕೆಲವರನ್ನು ಆರು ತಿಂಗಳು ವರ್ಷಕ್ಕೆ ಒಂದು ಸಾರಿ ಅಲ್ಲಿ ಕಳುಹಿಸುತ್ತೀರಿ. ಅವರು ಅಲ್ಲಿಗೆ ಹೋಗಿ ನೋಡಿಕೊಂಡು ಬರುತ್ತಾರೆ. ಅಲ್ಲೇನು ಕುಡಿತ ಕಲತುಕೊಂಡು ಬರುತ್ತಾರೋ ಅಥವಾ ಅಲ್ಲೇನಾದರೂ ಇದಕ್ಕೆ ಸಂಬಂಧಪಟ್ಟ ವಿಷಯ ಕಲತುಕೊಂಡು ಬರುತ್ತಾರೋ ಗೊತ್ತಿಲ್ಲ. ದೊಡ್ಡ ದೊಡ್ಡ ಆಫೀಸರುಗಳನ್ನು ಕಳುಹಿಸುತ್ತೀರಿ. ಚಿಕ್ಕ ನೌಕರರನ್ನು ಕಳುಹಿಸುವುದಿಲ್ಲ. ಅದು ಏನೇ ಇರಲಿ, ಯಾವ ರೀತಿ ಅವರು ಮುಂದುವರಿದಿದ್ದಾರೆ, ಯಾವ ಯಾವ ರೀತಿ ಕೆಲಸ ಕಾರ್ಯಗಳನ್ನು ಮಾಡುತ್ತಾರೆ ಎಂಬುದನ್ನು ತಿಳಿದುಕೊಂಡು ಬಂದು ಅದನ್ನು ಇಲ್ಲಿ ಎಷ್ಟರಮಟ್ಟಿಗೆ ಆಚರಣೆಯಲ್ಲಿ ತರಲು ಅವರು ಶ್ರಮವಹಿಸಿದ್ದಾರೋ ಗೊತ್ತಾಗುವುದಿಲ್ಲ. ಯಾರಾದರೂ ಒಬ್ಬ ರೈತ ತನಗಿರತಕ್ಕ ಸಮಸ್ಯೆಯನ್ನು ಅವರ ಮುಂದೆ ಇಟ್ಟರೆ ಯಾವ ರೀತಿ ಪರಿಹಾರ ಮಾಡಬೇಕು ಎನ್ನುವ ಯೋಚನೆಯೇ ಅವರಿಗೆ ಇಲ್ಲ. ಅಗ್ರಿಕಲ್ಚರಲ್ ಇಂಜಿನಿಯರುಗಳು ಯಾರಿದ್ದಾರೆ ಅವರು ಯಾವ ರೈತನಿಗೆ ಯಾವ ಸ್ಕೀಮಲಭ್ಯವಿರಬೇಕು, ಯಾವ ಬೆಳೆಯನ್ನು ಬೆಳೆಯಬೇಕು, ಅದರಿಂದ ಸ್ವಯೋಜನವಾಗುತ್ತದೆಯೇ ಎನ್ನುವ ವಿಚಾರದಲ್ಲಿ ಸಲಹೆ ಕೊಡುತ್ತಾ ಇಲ್ಲ. ನಮ್ಮ ದೇಶದಲ್ಲಿ ಅವರೆಲ್ಲರನ್ನೂ ಗುಳ ಮಾರುವುದು, ಗೊಬ್ಬರ ಮಾರುವುದಕ್ಕೆ ಹಚ್ಚಿದ್ದಾರೆ. ಎತ್ತಿಗೆ ಏನು ಖಾಯಿಲೆ ಆಗಿದೆ, ಯಾವ ಬೆಳೆ ಬೆಳೆದರೆ ಉತ್ತಮ ಎಂಬುದನ್ನು ಅವರು ಯೋಚನೆ ಮಾಡುವುದಿಲ್ಲ. ಅಥವಾ ಬೆಳೆಗೆ ಏನಾದರೂ ರೋಗ ಹತ್ತಿದರೆ ಅದಕ್ಕೆ ಏನು ಔಷಧಿ ಹಾಕಬೇಕು ಎನ್ನುವುದೂ ಕೂಡ ಅವರಿಗೆ ಗೊತ್ತಿರುವುದಿಲ್ಲ. ನಮ್ಮ ಸ್ಥಿತಿ ಹೀಗಿದೆ. ಪ್ರತಿಯೊಂದು ಕಡೆಯೂ ಕೂಡ ಎಕ್ಸ್‌ಪೆರಿಮೆಂಟರ್ ಫಾರಂ ಅಂತ ಮಾಡಿ ಒಂದು ಎಕರೆ ಜಮೀನನ್ನು ರೈತರಿಂದ ಬಿಡಿಸಿಕೊಂಡು, ಬೆಳೆ ಬೆಳೆದು ಯಾವ ರೀತಿ ಹೆಚ್ಚು ಉತ್ಪನ್ನ ಉಂಟುಮಾಡಿಕೊಳ್ಳಬಹುದು ಎಂಬ ಯೋಚನೆಯನ್ನು ಅವರು ಮಾಡುವುದಿಲ್ಲ. ಹೀಗಾದರೆ ನಮ್ಮ ದೇಶದಲ್ಲಿ ಹೇಗೆ ಬೇಸಾಯ ಅಭಿವೃದ್ಧಿಗೆ ಬರುತ್ತದೆ? ನಮಗೆ ಆಹಾರದ ಸ್ವಯಂ ಪರಿಪೂರ್ಣತೆ ಹೇಗೆ ಆಗುತ್ತದೆ? ಉದಾಹರಣೆಗೆ ಆಲೂಗಡ್ಡೆ ಬೆಳೆಯ ತಕ್ಕ ಹಾಸನ ತೆಗೆದುಕೊಳ್ಳಿ. ವರ್ಷೇ ವರ್ಷೇ ಅದಕ್ಕೆ ರೋಗ ತಗುಲಿ ಬಹಳ ನಷ್ಟವಾಗುತ್ತಾ ಇದೆ. ಆ ರೋಗ ನಿವಾರಣೆ ಮಾಡುವುದಕ್ಕೆ ಯಾವ ಕ್ರಮ ಅನುಸರಿಸಬೇಕೆಂಬುದನ್ನು ಯಾರಾದರೂ ಯೋಚನೆ ಮಾಡಿದ್ದಾರೆಯೇ? ಇಲ್ಲ. ಹೀಗಾದರೆ ರೈತನ ಗತಿ ಏನು? ವರ್ಷೇ ವರ್ಷೇ ರೈತನ ಸ್ಥಿತಿ ಅಧೋಗತಿಗೆ ಇಳಿಯುತ್ತಾ ಹೋದರೆ ಈ ಇಲಾಖೆ ಇದರೇನು ಇಲ್ಲದೇ ಇದ್ದರೇನು? ಎಂದು ರೈತನ ಮನಸ್ಸಿನಲ್ಲಿ ಒಂದು ತಾತ್ಸಾರ ಮನೋಭಾವ ಬರುವುದು ಸ್ವಭಾವಿಕ. ಅದಕ್ಕೇ ಪ್ರತಿಯೊಬ್ಬರೂ, ಅಧಿಕಾರಿಗಳು, ಸಂಬಂಧಪಟ್ಟ ಮಂತ್ರಿಗಳು ಗಮನಕೊಟ್ಟು, ಪ್ರತಿಯೊಂದು ತಾಲ್ಲೂಕಿನಲ್ಲೂ ಯಾವ ಬೆಳೆಗೆ ಯಾವ ಖಾಯಿಲೆ ಬರಬಹುದು, ಅದಕ್ಕೆ ನಿವಾರಣೋಪಾಯ ವೇನು ಎಂಬುದನ್ನು ಕಂಡುಹಿಡಿಯುವುದಕ್ಕೆ ಒಂದು ಎಕ್ಸ್‌ಪರಿಮೆಂಟಲ್ ಫಾರಂನ್ನು ತೆಗೆದು ಉತ್ತಮ

(ಶ್ರೀ ಬಿ. ಎನ್. ಬೋರಣ್ಣಗೌಡ)

ವಾದ ಬೆಳೆ ಬೆಳೆಯುವುದಕ್ಕೆ ರೈತನಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇದುವರೆಗೂ ಏನು ಕೆಲಸ ಆಗುತ್ತಿದೆ ಎಂದರೆ ಅವರಿಗೆ ನಂಬಿಕೆ ಕೊಡುತ್ತೀರಿ, ಕೆಲಸಮಾಡಬೇಕು, ಇವತ್ತು ಆ ಹಳ್ಳಿಗೆ ಹೋಗಿದ್ದೆ, ಇವತ್ತು ಈ ಹಳ್ಳಿಗೆ ಹೋಗಿದ್ದೆ ಎಂದು ಹೇಳಿ ನುಳ್ಳು ಡೈರಿ ಬರೆಯುವುದನ್ನು ಕಣ್ಣಾರೆ ನೋಡಿದ್ದೇನೆ. ಏನಾದರೂ ಹಳ್ಳಿಗೆ ಹೋಗಿ ತಿಳಿದುಕೊಂಡು ಬರೋಣ ಎಂದು ಹೋದರೆ, ಆ ಇನ್ಸ್‌ಪೆಕ್ಟರು ಮೊದಲೇ ಗುಮಾಸ್ತರಿಗೆ ವಿಚಾರ ಸರಿಯಾಗಿ ಕೊಡಬಾರದು ಎಂದು ತಿಳಿಸಿ, 'ಏನ್ರೀ ನೀವು ಮನೆಯಲ್ಲೇ ಕುಳಿತುಕೊಂಡು ನುಳ್ಳು ಡೈರಿ ಬರೆದಿದ್ದೀರಾ' ಎಂದು ಕೇಳಿದರೆ 'ಇಲ್ಲ ಸ್ವಾಮಿ, ಹಳ್ಳಿಗೆ ಹೋಗಿದ್ದರು' ಎಂದು ಅವರಿಂದ ಹೇಳಿಸಿಬಿಡುತ್ತಾರೆ. ಈ ರೀತಿ ಎಲ್ಲಾ ಎಷ್ಟೋ ಇದೆ. ಇವೆಲ್ಲಾ ಹೋಗಬೇಕು. ಈ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡುವವರಿಗೆ ಅನೇಕರಿಗೆ ನತ್ಯವಾಗಿ ಕೆಲಸ ಮಾಡಬೇಕೆನ್ನುವ ಮನೋಭಾವ ಇರಬಹುದು. ಕೆಳಗಿನ ಅಧಿಕಾರಿಗಳಲ್ಲಿ ಏನಾಗಿದೆ ಎಂದರೆ, ಇವತ್ತು ಒಬ್ಬ ಅಧಿಕಾರಿ ಇಲ್ಲದ್ದರೆ ಅವನನ್ನು ಇನ್ನು ಆರು ತಿಂಗಳೊಳಗೆ ಪುಟ್‌ಬಾಲ್ ಒದ್ದ ಹಾಗೆ ಇನ್ನೊಂದು ಕಡೆಗೆ ವರ್ಗಮಾಡುತ್ತಾರೆ. ಹೀಗಾಗಿ ಮನಸ್ಸಿಟ್ಟು ಕೆಲಸ ಮಾಡಲು ಯಾರಿಗೂ ಇಷ್ಟವಿಲ್ಲ. ಹೀಗಾಗಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಇದು ವಿಷಾದಕರ. ಈ ರೀತಿ ಆಗಬಾರದು. ವ್ಯವಸಾಯದ ಇಲಾಖೆಯಲ್ಲಿರತಕ್ಕ ನೌಕರರು ಯಾರಲ್ಲೂ ಕೂಡ ತಾವು ಮಾಡುತ್ತ ಇರತಕ್ಕ ಕೆಲಸ ಇಂಪಾರ್ಟೆಂಟ್ ಎಂಬ ಭಾವನೆ ಬರಬಾರದು. ಈಗ ಈ ಇಲಾಖೆಯಲ್ಲಿ ಆಗುತ್ತಿರುವ ಕೆಲಸ ಕಾರ್ಯಗಳಿಂದ ರಾಷ್ಟ್ರಾಭಿವೃದ್ಧಿಗೆ ಕಳಂಕ ಬಂದಿದೆ. ಇದನ್ನು ತಪ್ಪಿಸಲು ಮಾನ್ಯ ಮಂತ್ರಿಗಳು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿ ಹತ್ತು ಹತ್ತು ಎಕ್ಸ್‌ಪರಿಮೆಂಟಲ್ ಫಾರಂಗಳನ್ನು ಮಾಡಿ ಬೆಳೆ ಬೆಳೆಸಿ ರೈತರೂ ಕೂಡ ಅದೇ ರೀತಿ ಆಹಾರ ಧಾನ್ಯ ಬೆಳೆಯಬೇಕೆಂದು ಸಲಹೆ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. SRINIVAS SHETTY (Coondapur).—Mr. Speaker, Sir, within the short space of 10 minutes it is rather difficult to say anything. The unfortunate position is that two of the most important Departments of the Government are Agriculture and Veterinary and it is unfortunate that these two Departments have not realised their importance. They are really the most important Departments so far as our village life is concerned.

Without going to any budget details, I may say that one of the most important things for developing both animal husbandry and agriculture is to take advantage of modern researches. We are so backward in this respect in our country that we must not only jump, but run for catching up with the developments all over the world. Of course, it is a happy augury that our Government are slowly realising their responsibility in this matter. Some time ago, I paid a visit to the Hessarghatta Poultry and Dairy Farm along with some of the M.L.As. I was very much pleased to see the poultry farm but was not so impressed with the dairy farm. I was informed that there are 10,000 fowls in the poultry farm and a very modern equipment has been installed there as an incubator. A few days ago, I read a book called 'Ford's Almanac' wherein it is stated that in America even an individual is managing 10,000 fowls. We are in a fairly big State and we are very proud of having a poultry farm having 10,000 fowls.

3 P.M.

In America an individual is said to be managing a farm of 10,000 fowls. How backward are we in this respect, we can realise on a comparison. Though it is good that we have started such institutions, it is not enough. I request the Hon'ble Minister and the Government through him to revolutionise this attitude of mind and give as much funds as possible to such institutions of research.

Sri B. N. BORANNA GOWDA.—My friend may please look into the income and expenditure of the poultry farm.

Sri V. SRINIVAS SHETTY.—Of course, leaving the larger issues apart, Sir, as I look at the Statistical Map of Mysore, I find that my District of South Canara is very much neglected as, regards research institutions. There is of course, a paddy research station; there is a research institution on sweet potato—very minor thing. There is a research institution on cashewnut. That is all that I find. It is a fairly progressive area and we have got a lot of crops. For example, coconut research is very important. I find recently coconut research stations were established in Mandya or some other districts in old Mysore. South Kanara is one of the most important areas where coconut is one of the important products. A research station is quite necessary, in view of the fact that our farmers are using most antedeluvian methods with

regard to coconut, we cannot get good seedlings. In the interest of the District I would request that at least one research station may be established in my District. I would have asked for more. But I would request that at least one research station may be established. We had one at Kasargod and now it has gone to Kerala. It is one of the most important products of South Kanara and I request therefore the Government to make up their mind to have at least one coconut research station in South Kanara.

Sir, I see a number of Cotton Research stations working in Mysore State. It is said that South Kanara and North Kanara would be in the forefront of Sea Island Cotton producing areas. But there is no research station at all. On the prospect of cultivating Sea Island Cotton in South Canara and North Kanara, opinion is divided and they say that chances of success or failure are 50 : 50. I therefore say that at least there must be one research station in each district so that we may know what are the prospects with regard to cotton cultivation.

Dr. R. NAGAN GOWDA (Hospet).—If the Hon'ble Member yields, I suggest that he may look into the scheme No. 52 which refers to his own area.

Sri V. SRINIVAS SHETTY.—But no research station.

Sri H. S. RUDRAPPA.—There is a research station. My friend has not seen it. It is already there.

Sri V. SRINIVAS SHETTY.—Sir, sugarcane is one of the important crops in my district. I see a number of sugarcan research stations in almost every district but there is no research station in my district. May I request the Government to have a research station established in South Kanara in respect of sugarcane also?

Of course, we have been finding a lot of propaganda for soil-testing and probably they slowly send samples of soil to Bangalore. We have made a request to the Government to provide a soil-testing kit to each agricultural demonstrator. It is a cumbrous procedure as it is now. At least in each district, a few agricultural demonstrators should be provided with these soil testing kits. I would even go one step further and say it would be very desirable to have one soil testing kit for each village level worker. But if that is not possible, I would request that at least a few agricultural demonstrators may be equipped with soil testing kits so that they may be able to carry out quick research and find out the quality of the soil.

Another point, Sir, with regard to the Agriculture, the Hon'ble Minister may find from the statistics that we in South Kanara have mainly oil pumps. It shows that South Kanara is the last in the list for supply of electric pumps. We have therefore to request for more electric pumps. I find from the statistics that there are 570 oil pumps and electric pumps are only 96. Whereas in Bangalore you have electric pumps numbering 1128, in Kolar district 1637, Tumkur 979, Chitaldrug 940, in South Kanara there are only 96 the least, no doubt. Therefore, Sir, we are interested in having more electric pump sets and I request that this year more attention may be paid to supply electric pumps to my district.

Another most important thing is the number of veterinary institutions. My district has the least number of veterinary institutions in the whole State. Old Mysore areas are fairly advanced in this respect. Coorg is very much advanced. North Karnataka and Hyderabad Karnataka are very backward in this. I request the Hon'ble Minister to do his very best in this matter. I find that 9 veterinary dispensaries are to be opened in the near future and I request that at least 2 dispensaries may be allotted to each taluk in South Kanara and North Kanara. I am also making a plea for North Kanara although there are my friends representing that area. I request that at least two dispensaries may be given to every taluk so that we can also come as near to Coorg and old Mysore as possible in this matter.

Another thing is that we have been trying for artificial insemination centres. It will take another century to bring about a revolution in this respect at the rate we are producing. I request the Government to establish one

(SRI V. SRINIVAS SHETTY)

artificial insemination Centre in each taluk in the very near future.

Apart from all this, Sir, I want to put before the Government that we must improve the lot of veterinary doctors. Their condition at any rate in this State looks very deplorable. If we look at Kerala, U.P., Madras and Bombay, they are given a starting salary upto Rs 175, but here, they are paid only Rs. 100. Veterinary Doctors have to spend a considerable sum on their education and they have to undergo three or four years course in the Veterinary colleges and they have to join service on a pittance of Rs. 100. I am informed that people are going outside our State and they are not willing to join duty here, because this Government is paying only Rs. 100. They cannot have private practice. It looks very ridiculous and I request the Government to take the earliest steps to improve their lot.

[SRI J. H. SHAMSUDDIN in the Chair]

Government should pay them at least what is being paid to similar class of workers in the neighbouring State.

MR. CHAIRMAN (SRI J. H. SHAMSUDDIN).—The Hon'ble Member's time is up. He has only one minute.

SRI V. SRINIVAS SHETTY.—One thing more, Sir. I find three things are important in agriculture and veterinary, namely feed, breed and seed. There are no seed farms in my district and we want more and more farms. There is a scheme to start seedfarms in the second five-year plan of the State. I say that Government should take early steps to start at least one seed farm in each taluk of South Kanara. I have discussed the point with the people. It is very difficult to find lands. Government should acquire lands and establish seed farms in each taluk.

Another point is the establishment of as many farms for growing grass as possible. The statistics show that only ·16 per cent of land is the extent available for one head of cattle in South Kanara. I therefore request that as many farms as possible may be started in South Kanara to grow grass and distribute seeds. Thank you, Sir.

SMT. VIJAYA RAGHVENDER RAO (Chitapur).—I rise to support the demands that are before the House today. As we all know Agriculture and Veterinary go hand in hand. Although the main idea in planning has shifted to industries, agriculture continues to occupy an important place. Almost every crop in our agriculture deserves an important place in our planning. As regards foodgrains, more production is necessary because of the increasing population. More production of commercial crops is also necessary as it is important for the country's commercial plans. The Government has provided Rs. 185.56 lakhs for agricultural development.

Will it not be beneficial to a farmer to popularise the poultry development along with agriculture ? Specially the principle of co-operation is of a vital importance to quicken the economic development in the rural areas. Co-operative organisations provide finance for agriculture and poultry and for storing, processing and marketing produce and also in supplying the necessities of the cultivators for agriculture and poultry.

About 7 per cent of the budget estimates will be utilised for the development of Agriculture, Veterinary and Co-operation, which comes to about Rs. 332.26 lakhs. To facilitate yield out of this estimate the cross breeding of animals in poultry and that of plants in agriculture should be immediately introduced to have long term valuable yields. Small natural farms with a high yield per acre should not be converted into vast mechanised businesses for profit. Monocultivation only should be adopted for qualitatively better crops and not mixed cultivation for more stable gains. The poultry industry should be developed on the lines of artificial hatching of eggs on a large scale and rearing of chick and adult birds, in the incubation of eggs at a specific temperature and in keeping the records of the embryonic development of the chick embryo every day. I hope poultry centre will

(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No (B) 4770
ದಿನಾಂಕ Date.....

be opened in our Hyderabad Karnatak area. A provision of Rs. 17,200 is made for the year 1958-59 for its establishment charges.

Will the Government kindly take note of the associated question of awards for the development works? Any person who is apt and enthusiastic and achieves positive results must be able to see the fulfilment of his efforts. The usual way of providing such encouragements is to present them a useful machinery which will enable them to develop the industries better. For example, in Gulbarga District the Rotary Club of Gulbarga presented a plough to a person whose groundnut crop was the highest in the District. So, I believe the Government will take the necessary step as regards giving encouragement to persons engaged in the agricultural field and the development of poultry.

Now as regards the key village scheme, this scheme should be introduced all over the State. The scheme provides for intensive work in the castration of bulls and breeding operations controlled by artificial insemination centres. This scheme provides millions of improved bullocks and cows. I hope the Government will take steps to spread this facility all over the State.

Veterinary research also seeks an important place and the Budget provides Rs. 38,000 for this department. It not only controls contagious diseases of the animals but also functions as the centre for carrying out important researches on animal diseases. Some of the orthropodes are parasitic on cattle and some of the nematodes and platyhelminths such as tridinella spiralis and talina glossa, I am subject to correction, are parasitic on pigs and sheep. So the veterinary dispensaries in the State should have an attached veterinary research centre.

Lastly, the Government should take immediate steps to search some insecticides for the grain pests in the godowns. In this connection, I may quote an example. The grain pest, Alphetobins Diaperinus completely powders the wheat. They appear in battalions causing a tremendous loss to the total food produce qualitatively and quantitatively.

I hope the Government will kindly consider these points and take necessary action.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಈ ವ್ಯವಸಾಯದ ಡಿಮ್ಯಾಂಡನ್ನು ಸ್ವಾಗತಿಸುತ್ತ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಮಾನ್ಯ ಸದಸ್ಯರು ಈಗಾಗಲೇ ಮಾತನಾಡುತ್ತ ದೇಶದಲ್ಲಿ ಆಹಾರವನ್ನು ಹೆಚ್ಚಿಗೆ ಬೆಳೆಯಬೇಕೆಂದು ಹೇಳುತ್ತಿರುವುದೇನೋ ನಿಜವಾಗಿಯೂ ಸಾಧುವಾದುದೇ. ಆದರೆ ಬರೀ ಬಾಯಲ್ಲಿ ಆಹಾರವನ್ನು ಬೆಳೆಸುಬೇಕು ಎಂದು ಹೇಳುತ್ತ, ಬೆಂಗಳೂರು ಮತ್ತು ಮೈಸೂರು ಸಿಟಿಯ ಟಾರು ರೋಡುಗಳಲ್ಲಿ ಬೆಳೆಯನ್ನು ಬೆಳೆಯುವುದಕ್ಕಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಿ. ಬೆಳೆಯನ್ನು ಮುಖ್ಯವಾಗಿ ಬೆಳೆಯುವುದು ಹಳ್ಳಿಗಾಡುಗಳಲ್ಲಿ. ಈಗ ನಮ್ಮ ಹಳ್ಳಿಗಳಲ್ಲಿ ಭತ್ತ, ರಾಗಿ, ಜೋಳ, ಹತ್ತಿ, ನವಣೆ ಇತ್ಯಾದಿಗಳನ್ನೆಲ್ಲ ಬೆಳೆಯುತ್ತಾರೆ. ಇಂತಹ ಬೆಳೆಗಳನ್ನು ಬೆಳೆಯಲು ಹಳ್ಳಿಗಳಿಗೆ ಅವಶ್ಯಕವಾದ ಸೌಕರ್ಯಗಳನ್ನು ಮಾಡಿಕೊಡಬೇಕು. ಈಗ ನಮ್ಮ ಮುಂದೆ ಬಂದಿರುವ ಜತ್ತಿ ಸಮಿತಿಯ ಭೂಸುಧಾರಣೆಯ ವರದಿಯಲ್ಲಿ ಈ ವಿಚಾರವಾಗಿ ಏನೂ ಸೌಕರ್ಯಗಳನ್ನು ರೈತರಿಗೆ ಒದಗಿಸಲು ಸೂಚಿಸಿಲ್ಲ. ಹಳ್ಳಿಗಳಲ್ಲಿರುವ ದನಕರುಗಳನ್ನು ಅಭಿವೃದ್ಧಿಗೆ ತರಬೇಕು ಎಂದು ಬಾಯಲ್ಲಿ ಹೇಳುತ್ತಿದ್ದಾರೆಯೇ ಹೊರತು, ಈ ದನಗಳಿಗೆ ಮೇಯಲು ಅನುಕೂಲವಾದ ಭೂಮಿಯನ್ನು ಒದಗಿಸುತ್ತಿಲ್ಲ. ಎಂದರೆ ಗೋಮಾಳವನ್ನು ಒದಗಿಸುತ್ತಿಲ್ಲ. ಗೋಮಾಳವಿಲ್ಲದಿದ್ದರೆ ಈ ದನಗಳು ಮೇಯುವುದಾದರೂ ಹೇಗೆ? ಸಾಕಷ್ಟು ಹುಲ್ಲನ್ನು ಬೆಳೆಯಲು ಭೂಮಿಯೇ ಇಲ್ಲದೇ ಹೋದರೆ ಇವು ಮುಂದಕ್ಕೆ ಬದುಕುವುದು ಹೇಗೆ ಎಂಬುದನ್ನು ಸರಕಾರ ಪರಿಶೀಲನೆ ಮಾಡಬೇಕು.

ಇನ್ನೊಂದು ವಿಷಯ, ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾದುದು ಒಳ್ಳೆಯ ಎತ್ತುಗಳು, ಬೀಜ ಮತ್ತು ಗೊಬ್ಬರ. ಇವುಗಳನ್ನು ರೈತರಿ ಒದಗಿಸಬೇಕಾದುದು ಸರಕಾರದ ಅದ್ಯ ಕರ್ತವ್ಯವಾಗಿದೆ. ತಾವೇನೋ ಈ ರೆವೆನ್ಯೂ ಮ್ಯಾನ್ಯುಯೆಲ್ ರೂಲ್ಸ್‌ನ ಪ್ರಕಾರ ಒಂದು ಎಕರೆಗೆ ಮೂರು ಜಾನುವಾರುಗಳು ಮೇಯುವಷ್ಟು ಭೂಮಿಯನ್ನು ಒದಗಿಸಬೇಕೆಂದು ಹೇಳಿದ್ದೀರಿ. ಅದರೆ ಈ ರೀತಿ ಎಲ್ಲ ಗ್ರಾಮಗಳಲ್ಲಿಯೂ ಗೋಮಾಳ ವಿದೆಯೇ ಎನ್ನುವುದನ್ನು ಪರಿಶೀಲನೆ ಮಾಡಿದ್ದೀರಾ? ಹೀಗೆ ಅಂಕಿ ಸಂಖ್ಯೆಗಳಿಂದ ಇವನ್ನೆಲ್ಲ ಪರಿಶೀಲನೆ ಮಾಡಿ ತಾವು ಉತ್ತರವನ್ನು ಕೊಡುವಾಗ ಗೋಮಾಳ ಎಲ್ಲ ಕಡೆಗಳಲ್ಲಿಯೂ ಇದೆಯೇ ಇಲ್ಲವೇ ಎನ್ನುವುದನ್ನು ತಿಳಿಸಬೇಕು ಎಂದು ಸರ್ಕಾರದವರನ್ನು ಕೇಳುತ್ತೇನೆ.

ಇನ್ನು ಜನಕ್ಕೆ ಹೆಚ್ಚಿನ ಹಾಲು ದೊರೆಯುವಂತೆ ಮಾಡಬೇಕೆಂದು ಹೇಳುತ್ತಿದ್ದೀರಿ. ಇದರಿಂದ ಜನಗಳಿಗೆ ಹೆಚ್ಚಿನ ತುಪ್ಪ, ಬೆಣ್ಣೆ, ಸಿಗುವಂತೆ ಮಾಡಬೇಕು ಎಂದು ಹೇಳುತ್ತೀರಿ. ಆದರೆ ದನಕರುಗಳಿಗೆ ಹಳ್ಳಿಗಳಲ್ಲಿ ಮೇಯಲು ಹುಲ್ಲೇ ಸಿಗುತ್ತಿಲ್ಲ ಮತ್ತು ಗೋಮಾಳಗಳೇ ಇಲ್ಲದಿರುವಾಗ ಈ ದನಕರುಗಳ ಅಭಿವೃದ್ಧಿ ಹೇಗೆ ಆದೀತು, ಸ್ವಾಮಿ, ಯೋಚನೆ ಮಾಡಿ ನೋಡಿ. ಈಗ ಹೊರದೇಶಗಳಲ್ಲಿ ಎಂದರೆ, ಹಾಲೆಂಡು, ಬೆಲ್ಜಿಯಂ, ಈ ಕಡೆಗಳಲ್ಲಿ ಉತ್ತಮವಾದ ಡೈರಿಫಾರಂಗಳನ್ನು ಮಾಡಿ ದನಕರುಗಳನ್ನು ಅಭಿವೃದ್ಧಿಮಾಡಿ ಹೊರದೇಶಗಳಿಗೆ ಹಾಲು ತುಪ್ಪ ಮುಂತಾದುವನ್ನು ಕಳುಹಿಸುತ್ತಿದ್ದಾರೆ. ಆದರೆ ಹೀಗೆ ನಮ್ಮ ದೇಶದಲ್ಲಿ

(ಶ್ರೀ ಕುಂದೂರು ರುದ್ರಪ್ಪ)

ದನಕರುಗಳನ್ನು ಮುಂದಕ್ಕೆ ತರಲು ಯಾವ ಕಾರ್ಯಕ್ರಮವನ್ನೂ ಮಾಡುತ್ತಿಲ್ಲ. ದನ ಬಹಳ ಮುಖ್ಯವಾದ ಸಂಪತ್ತು. ರೈತರಿಗೆ ಬೇಕಾದುದು. ಅದರಿಂದ ಸರಕಾರ ಈಗಲಾದರೂ ಈ ದನಕರುಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು.

ಸ್ವಾಮೀ, ರೈತರಿಂದ ವ್ಯವಸಾಯಾಭಿವೃದ್ಧಿಯಾಗಬೇಕು, ಇದು ಬಹಳ ಮುಖ್ಯವಾದುದು ಮತ್ತು ಮೊದಲನೆಯ ಐಟಂ ಎಂದು ನಮ್ಮ ವ್ಯವಸಾಯ ಇರಾಖೆಯ ಮಂತ್ರಿಗಳೂ ಹೇಳುತ್ತಿದ್ದಾರೆ. ನಮ್ಮ ಮಂತ್ರಿಗಳು ವ್ಯವಸಾಯದಲ್ಲಿ ಚೆನ್ನಾಗಿ ಅನುಭವವಿರುವರೂ ಆಗಿರುವುದರಿಂದ ಜಮೀನಿಲ್ಲದವರಿಗೆ ಜಮಿನನ್ನು ಸಹಾ ಕೊಡುತ್ತಿದ್ದಾರೆ. ಆದರೆ ಈಗ ಏನಾಗಿದೆ ಎಂದರೆ, ಕೊಟ್ಟಿರುವ ಜಮೀನಿನಲ್ಲಿ ಬೆಳೆಯೇ ಆಗದೆ ನಿರಾಶೆಯಾಗಿದೆ. ಈ ವಿಚಾರದಲ್ಲಿ ರೈತರಿಗೆ ಸಾಕಷ್ಟು ಪ್ರೋತ್ಸಾಹ ನೀಡಿ ಅವರನ್ನು ಮುಂದಕ್ಕೆ ತರಬೇಕಾದುದು ಸರಕಾರದ ಕರ್ತವ್ಯ. ನಮ್ಮ ಹಳ್ಳಿಗಳ ಕಡೆ ರೈತರಿಗೆ ನಾಟಾಗಳನ್ನು ಕೂಡ ಸರಿಯಾಗಿ ಸರಬರಾಜು ಮಾಡುತ್ತಿಲ್ಲ. ದುಡ್ಡು ಕೊಟ್ಟು ಕೊಳ್ಳೋಣವೆಂದರೂ ರೈತರಿಗೆ ನಾಟಾಗಳು ಸಿಕ್ಕುತ್ತಿಲ್ಲ. ಡಿಪೋಗಳಲ್ಲಿದೆ ಎಂದು ಹೇಳುತ್ತಾರೆ. ಆದರೆ ಅಲ್ಲಿಗೆ ಹೋಗುವುದರೊಳಗೆ ಅಲ್ಲಿ ಏನೂ ಸಿಕ್ಕುವುದಿಲ್ಲ. ಇವನ್ನೆಲ್ಲ ಸರಿಯಾಗಿ ಪರಿಶೀಲನೆಮಾಡಿ ನಮ್ಮ ರೈತರಿಗೆ ಅನುಕೂಲ ಮಾಡಿ ಕೊಡಬೇಕು. ನಮ್ಮ ಮಾನ್ಯ ಸಚಿವರು ನಮ್ಮ ತಾಲ್ಲೂಕಿನ ಭಾಗಗಳಲ್ಲಿ ಪ್ರವಾಸ ಮಾಡುತ್ತಿದ್ದಾಗ ಅವರ ಗಮನಕ್ಕೆ ಕೂಡ ಈ ವಿಚಾರಗಳನ್ನೆಲ್ಲ ತಂದು ಹೇಳಿದ್ದೆವು. ಆಗಲೂ ಸಹ ಅವರು ತಕ್ಕ ಪರಿಹಾರವನ್ನು ಕೊಡುತ್ತೇವೆ ಎಂದು ಹೇಳಿದ್ದರೂ ಏನೂ ಕಾರ್ಯರೂಪದಲ್ಲಿ ಆಗಿಲ್ಲ. ಈ ರೀತಿಯಾದ ಸತ್ಕಾರ್ಯಗಳನ್ನು ರೈತರಿಗೆ ಕೊಡಬೇಕೆಂದು ನಾನು ಪದೇ ಪದೇ ಈ ಮಹಾನಭೆಯಲ್ಲಿ ಹೇಳುತ್ತಲೇ ಇದ್ದೇನೆ. ಅಲ್ಲದೆ ನಾನು ರೈತರ ಪ್ರತಿನಿಧಿಯಾಗಿ ಈ ಮಹಾ ಸಭೆಗೆ ಬಂದಿದ್ದೇನೆ. ಅದರಿಂದ ನಾನು ಹೇಳುತ್ತೇನೆ ರೈತರಿಗಾಗಿ ಹೆಚ್ಚು ದುಡ್ಡುಕೊಟ್ಟು ಸಾಗುವಳಿ ಮಾಡಲು ಸರಕಾರ ಸಾಕಷ್ಟು ಅನುಕೂಲಗಳನ್ನು ಮಾಡಿಕೊಡಬೇಕು. ಇದಕ್ಕೊಸ್ಕರ ನಮ್ಮ ಸರಕಾರ ಮೀನ ಮೇಷ ಏಕೆ ನೋಡುತ್ತಾರೆ? ಈಗ ನಾಟಾ ಡಿಪೋಗಳಲ್ಲಿ ಸಿಗುತ್ತೆ ಎಂದು ಹೇಳಿದಾಗ ಹೋಗಿ ನೋಡಿದರೆ ಎಲ್ಲ ನಾಟಾಗಳೂ ಹರಾಜಾಗಿ ಹೋಗಿರುತ್ತವೆ. ಇದು ಬಹಳ ವಿಷಾದವಾದ ಸಂಗತಿ. ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾಗಿರುವುದು ಎತ್ತುಗಳು ಮತ್ತು ವ್ಯವಸಾಯದ ಸಾಮಾನುಗಳು, ಎಂದರೆ, ಕುಡುಗೋಲು, ಮಚ್ಚುಗಳು, ಗುಳ, ಪಟ್ಟಿ ಇತ್ಯಾದಿ. ಇದಕ್ಕೊಸ್ಕರ ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ಸೊಸೈಟಿಗಳನ್ನು ಮಾಡಿ ಅದರಿಂದ ರೈತರಿಗೆ ಸುಲಭ ದರಗಳಲ್ಲಿ ಈ ವ್ಯವಸಾಯೋಪಕರಣಗಳು ದೊರೆಯುವಂತೆ ಮಾಡಬೇಕಾದುದು ಅಗತ್ಯ. ಇದರಿಂದ ಉಳುಮೆ ಮಾಡುವ ರೈತರಿಗೆ ಅನುಕೂಲವಾಗುತ್ತದೆ. ಈಗೇನಾಗಿದೆ ಎಂದರೆ, ಗುಳ ಮುಂತಾದ ಸಾಮಾನುಗಳು ಬೇಕೆಂದು ತರಲು ಹೋದರೆ ಡಿಪೋಗಳಲ್ಲಿ ಸಾಮಾನುಗಳೇ ಇರುವುದಿಲ್ಲ. ಹೀಗೆ ಒಂದಕ್ಕೊಂದು ಸಂಬಂಧವಿಲ್ಲದಂತೆ ಆಗಿದೆ. ನಾಟಾ ವಗೈರೆಗಳೆಲ್ಲವನ್ನೂ ಸೊಸೈಟಿಗಳ ಮುಖಾಂತರ ನಪ್ಪೈ ಮಾಡುವಂತೆ ತಾವು ಒಂದು ವ್ಯವಸ್ಥೆ ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ರೈತರಿಗೆ ಜಾನುವಾರುಗಳು ಒಂದು ಕುಟುಂಬ ಇದ್ದಹಾಗೆ. ರೈತನ ಬಳಿ ಇರುವ ಒಂದು ಜೊತೆ ಎತ್ತುಗಳಲ್ಲಿ ಒಂದು ನತ್ತು ಹೋದರೆ ಅವನ ಕೈ ಮುರಿದಂತೆ ಆಗುತ್ತದೆ. ರೈತನ ಆಸ್ತಿಯೆಲ್ಲ ದನಕರುಗಳನ್ನು ಅವಲಂಬಿಸಿದೆ. ಒಂದು ಜೊತೆ ಒಳ್ಳೆಯ ಎತ್ತುಗಳು ಬೇಕಾದರೆ 1,200 ರೂಪಾಯಿ ಕೊಟ್ಟು ತರಬೇಕು. ಇಷ್ಟು ಹಣವನ್ನು ಕೊಡಬೇಕಾದರೆ ಅವನಿಗೆ ಬಹಳ ಕಷ್ಟವಾಗುತ್ತದೆ. ರೈತನು ತನ್ನಲ್ಲಿರುವ ಹಣವನ್ನೆಲ್ಲ ಜಾನುವಾರುಗಳ ಮೇಲೆ ಹಾಕಿರುತ್ತಾನೆ. ದನಗಳಿಗೆ ಚಪ್ಪೆರೋಗ, ಕೊಳ್ಳೆರೋಗ ಬರುತ್ತದೆ. ದನಗಳ ಆಸ್ಪತ್ರೆಗಳಿಗೆ ಹೋದರೆ ಔಷಧಿ ಇಲ್ಲ. ಔಷಧಿಗಳನ್ನು ಕಳುಹಿಸಲು ಸಂಬಂಧಪಟ್ಟವರಿಗೆ ಬರೆದಿದ್ದೇವೆಂದು ಹೇಳುತ್ತಾರೆ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಪ್ರತಿ ಆಸ್ಪತ್ರೆಗೂ ಬೇಕಾಗಿರುವಷ್ಟು ಔಷಧಗಳನ್ನು ಸರಬರಾಜು ಮಾಡಬೇಕು. ಅಧಿಕಾರ ಮಾಡಬೇಕಾದರೆ ಜಬರ್ದಸ್ತಿನಿಂದ ಮಾಡಬೇಕು. ಸಂಬಂಧಪಟ್ಟ ಮಂತ್ರಿಗಳು ಬಹಳ ತೀವ್ರವಾಗಿ ಇದಕ್ಕೆ ಗಮನಕೊಡಬೇಕು.

ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ರೈತರಿಗೆ ಸಹಾಯ ಮಾಡಬೇಕು. ಬೀಜದ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ದೊಡ್ಡ ದೊಡ್ಡ ರೈತರಿಗೆ ಏಕೆ ಸಹಾಯ ಮಾಡಬಾರದು? ಕೊನೆಯ ಪಕ್ಷ ಒಂದೊಂದು ಹೋಬಳಿಗೆ ಒಂದನ್ನಾದರೂ ಬೀಜದ ಹೋರಿ ಕೊಡಬೇಕು.

ಪಶುವೈದ್ಯ ಶಾಲೆಗಳ ವಿಚಾರದಲ್ಲಿ ಹೇಳಬೇಕಾದರೆ ನಮ್ಮ ತಾಲ್ಲೂಕಿನಲ್ಲಿ ಬನವಾಸಿ ಪಟ್ಟಣ ಹೋಬಳಿ ಹೆಡ್ ಕ್ವಾರ್ಟರ್ಸ್ ಮತ್ತು ಅದರ ಸಮೀಪದಲ್ಲಿ ಎಲ್ಲಿಯೂ ಒಂದು ಪಶುವೈದ್ಯ ಶಾಲೆಇಲ್ಲ. ಇಲ್ಲಿ ಶೀಘ್ರವಾಗಿ ಒಂದು ಆಸ್ಪತ್ರೆಯನ್ನು ತೆರೆಯಬೇಕು.

ಚನ್ನಗಿರಿ ತಾಲ್ಲೂಕು ಹೊನಹಳ್ಳಿಯಲ್ಲಿ ಒಂದು ಎಣ್ಣೆ ಸಂಶೋಧನಾ ಕೇಂದ್ರವನ್ನು ತೆರೆಯಬೇಕೆಂದು ಇಂಡಿಯಾ ಸರ್ಕಾರದವರು ತೀರ್ಮಾನಿಸಿದ್ದಾರೆ. ಮೂರು ವರ್ಷಗಳಿಂದಲೂ ಮಾಡದೆ ಇರುವುದು ಬಹಳ ಆಶ್ಚರ್ಯವಾಗಿದೆ. ಕೂಡಲೇ ಇದನ್ನು ಕಾರ್ಯರೂಪಕ್ಕೆ ತರಬೇಕು.

ಚನ್ನಗಿರಿ ತಾಲ್ಲೂಕಿನಲ್ಲಿ ಮಳಾಳ ಫಾರೆಸ್ಟ್ ಮತ್ತು ಒನಕೆಬಂಡೆ ಫಾರೆಸ್ಟ್ ಇವನ್ನು ರಿಲೀಸ್ ಮಾಡಿ ದನಗಳಿಗೆ ಮತ್ತು ಜಾನುವಾರುಗಳಿಗೆ ಗೋಮಾಳವನ್ನು ಒದಗಿಸಿಕೊಟ್ಟು ಅನುಕೂಲ ಮಾಡಿ ಎಂದು ಕಳೆದ ಅಧಿವೇಶನದಲ್ಲಿ ಹೇಳಿದ್ದೆ. ಇದು ಏನಾಗಿದೆಯೋ ತಿಳಿಯದು. ದಯವಿಟ್ಟು ಈಗಲಾದರೂ ತಕ್ಷಣ ಫೈಲನ್ನು ತರಿಸಿ ಆರ್ಡರ್ ಮಾಡಬೇಕು. ಏಕೆ ನಿಧಾನ ಮಾಡುತ್ತಿದ್ದಾರೆಂಬುದು ಗೊತ್ತಾಗುವುದಿಲ್ಲ. ಜಾಗ್ರತೆಯಾಗಿ ಈ ಫಾರೆಸ್ಟ್ ಪ್ರದೇಶವನ್ನು ರಿಲೀಸ್ ಮಾಡಬೇಕು.

ಮಲೆನಾಡು, ಅದರಲ್ಲಿಯೂ ನಮ್ಮ ಶಿವಮೊಗ್ಗ ಜಿಲ್ಲೆ, ಭತ್ತದ ಕಣಜವೆಂದು ಹೆಸರುವಾಸಿಯಾಗಿರುವ ಜಿಲ್ಲೆ. ಈ ಜಿಲ್ಲೆಯ ಮಾನ್ಯ ದಿವಂಗತ ಎಚ್. ಸಿದ್ದಯ್ಯನವರು, ಮತ್ತು ಶ್ರೀ ಎಲ್. ಸಿದ್ದಪ್ಪನವರು, ಮಂತ್ರಿಗಳಾಗಿದ್ದರು. ಶ್ರೀಯುತ ಕಡಿದಾಳ್ ಮಂಜಪ್ಪನವರು ಮಂತ್ರಿಗಳಾಗಿಯೂ, ಮುಖ್ಯ ಮಂತ್ರಿಗಳಾಗಿಯೂ ಇದ್ದರು. ಈಗ ನಮ್ಮ ರೈತರ ಹೊಟ್ಟೆಯಲ್ಲಿ ಹುಟ್ಟಿದವರಾದ, ರೈತರಾಗಿರತಕ್ಕ ಶ್ರೀಯುತ ಎಚ್. ಎಸ್. ರುದ್ರಪ್ಪನವರೇ ಮಂತ್ರಿಗಳಾಗಿದ್ದಾರೆ. ನಾಲ್ಕು ಜನ ಮಂತ್ರಿಗಳಾಗಿದ್ದಾರೆ. ನಾಲ್ಕು ಜನ ಮಂತ್ರಿಗಳಾಗಿ ಆಡಳಿತ ನಡೆಸಿದರೂ ಎಲ್ಲ ಡಿಸ್ಟ್ರಿಕ್ಟ್‌ಗಳೂ ಹೇಗೆ ಅಭಿವೃದ್ಧಿಯಾಗಿವೆಯೋ ಹಾಗೆ

ಶಿವಮೊಗ್ಗ ಜಿಲ್ಲೆಯೂ ಅಭಿವೃದ್ಧಿಯಾಗದೆ ಏಕೆ ಹಿಂದುಳಿದಿದೆ ಎಂಬುದನ್ನು ಯೋಚನೆ ಮಾಡಿಲ್ಲ. ನಿಮಗೆ ಶಕ್ತಿ ಇಲ್ಲದೆ ಇದ್ದರೆ ಬಂದುಬಿಡಿ. ಬೇರೆಯವರಿಗೆ ಶಕ್ತಿ ಇದ್ದರೆ ಮಾಡುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ವ್ಯವಸಾಯದ ಕಾಲೇಜನ್ನು ತೆರೆಯಬೇಕೆಂದು ಹೇಳಿದರೆ ಅದನ್ನು ಮಾಡಿಸುವುದಕ್ಕೆ ಆಗಿಲ್ಲ. ನೀವು ಮಂತ್ರಿ ಮಂಡಲದಲ್ಲಿ ಈ ಬಗ್ಗೆ ಜಗಳ ಮಾಡಿ. ನಾವುಗಳು ನಿಮಗೆ ಬೆಂಬಲವಾಗಿದ್ದೇವೆ. ನೀವು ರೈತರ ಹೊಟ್ಟೆಯಲ್ಲಿ ಹುಟ್ಟಿದವರು, ರೈತರಿಗಾಗಿ ಹೊಡೆದಾಡಬೇಕು, ಶಾಂತಿಯಿಂದ ಇರಬಾರದು ಎಂದು ನೊಂದ ಮನಸ್ಸಿನಿಂದ ಹೇಳುತ್ತೇನೆ. ಹೋದ ಸಾರಿ ಹೇಳಿದೆವು, ಕಾರ್ಯರೂಪಕ್ಕೆ ಬರಲಿಲ್ಲ. ಈ ವರ್ಷವಾದರೂ ಇದಕ್ಕೆ ಗಮನಕೊಟ್ಟು ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ವ್ಯವಸಾಯದ ಕಾಲೇಜನ್ನು ತೆರೆಯಲು ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

ಚನ್ನಗಿರಿ ತಾಲ್ಲೂಕಿನಲ್ಲಿ B.R.B. Channel ಬಂದು, ಒಂದು-ಒಂದೂಕಾಲು ಲಕ್ಷ ಎಕರೆ ಜಮೀನು ನೀರಾವರಿಯಾಗತಕ್ಕ ಒಂದು ದೊಡ್ಡ ಯೋಜನೆಯನ್ನು ಮಾಡಿದ್ದಾರೆ. ಈ ಪ್ರದೇಶದಲ್ಲಿ ಕಬ್ಬಿನ ಬೆಳೆ ಹೆಚ್ಚಿಗೆ ಆಗುತ್ತದೆ. ಇಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿ ಕಬ್ಬಿನ ವ್ಯವಸಾಯಕ್ಕೆ ಪ್ರೋತ್ಸಾಹ ಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

[Sri L. B. BIRJE spoke in Marathi]

3-30 P.M.

ಶ್ರೀ ಎಚ್. ಎ. ವೀರೇಗೌಡ (ಮುಳಬಾಗಿಲು).—ಮಾನ್ಯ ಸಭಾಪತಿಗಳೇ, ಈ ದಿವಸ ವ್ಯವಸಾಯ ಖಾತೆಗೆ ಸಂಬಂಧಪಟ್ಟಂತೆ ಇರುವ 2,14,27,000 ರೂಪಾಯಿಗಳ ಬೇಡಿಕೆಯನ್ನು ಬಹಳ ಸಂತೋಷದಿಂದ ಅನುಮೋದಿಸುತ್ತಾ ಬೇಸಾಯಕ್ಕೆ ಸಂಬಂಧಿಸಿದಂತೆ ಒಂದೆರಡು ಸಲಹೆಗಳನ್ನು ಮಾಡುವುದಕ್ಕೆ ಇಚ್ಛೈಪಡುತ್ತೇನೆ.

ಸ್ವಾಮಿ, ಇಂಡಿಯಾದೇಶವು, ಸುಮಾರು ನೂರಕ್ಕೆ ಎಂಭತ್ತು ಜನ ಬೇಸಾಯದ ಕೆಲಸದಲ್ಲಿ ತೊಡಗಿರತಕ್ಕ ಒಂದು ದೇಶ. ಯಾವುದೇ ದೇಶದ ಆರ್ಥಿಕಸ್ಥಿತಿ ಉತ್ತಮವಾಗಬೇಕಾದರೆ ಆ ದೇಶದಲ್ಲಿ ಯಾವ ಕಸುಬನ್ನು ಹೆಚ್ಚಿನ ಜನ ಅವಲಂಬಿಸಿದ್ದಾರೋ ಆ ಕಸುಬನ್ನು ಉತ್ತಮ ರೀತಿಯಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡದೆ ಇದ್ದರೆ ಅಂಥ ದೇಶದ ಆರ್ಥಿಕಸ್ಥಿತಿ ಉತ್ತಮವಾಗಲಾರದು. ಈ ದೃಷ್ಟಿಯಿಂದ, ಶೇಕಡ 83ರಷ್ಟು ಜನ ಬೇಸಾಯದ ಕೆಲಸದಲ್ಲಿ ತೊಡಗಿರುವ ಈ ದೇಶದಲ್ಲಿ ಬೇಸಾಯದ ಕೆಲಸಕ್ಕೆ ಹೆಚ್ಚಿನ ನಿಗಾಕೊಡಬೇಕು. ಇದರಿಂದ ದೇಶದ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಲ್ಲದೆ, ಬೇಸಾಯವೂ ಅಭಿವೃದ್ಧಿಯಾಗಿ ತನ್ಮೂಲಕ ಈಗಿರತಕ್ಕ ಆಹಾರದ ಕೊರತೆ ನಿವಾರಣೆಯಾಗುವುದಕ್ಕೆ ಅವಕಾಶವಾಗುತ್ತದೆ.

ಇಂದು ಪ್ರತ್ಯಕ್ಷವಾಗಿ 2 ಕೋಟಿ 14 ಲಕ್ಷ ಚಿಲ್ಲರೆ ರೂಪಾಯಿಗಳು ವ್ಯವಸಾಯದ ಖಾತೆಯಲ್ಲಿ ಬೇಸಾಯಕ್ಕಾಗಿ ಒದಗಿಸಿರುವುದು ಕಂಡು ಬಂದರೂ ಅಪ್ರತ್ಯಕ್ಷವಾಗಿ ಇನ್ನೂ ಅನೇಕ ರೀತಿಯಲ್ಲಿ ದುಡ್ಡನ್ನು ಒದಗಿಸಿದ್ದಾರೆಂದು ಹೇಳಬಲ್ಲೆ. ಇದು ನಿಜವಾಗಿಯೂ ಸಂತೋಷದ ವಿಚಾರ. ಸಹಕಾರ ಸಂಘಗಳ ಮುಖೇನ ಬೇಸಾಯದ ಅಭಿವೃದ್ಧಿಗಾಗಿ ಅಲ್ಪಕಾಲಾವಧಿ, ಮಧ್ಯಕಾಲಾವಧಿ, ದೀರ್ಘಕಾಲಾವಧಿ ಸಾಲಗಳನ್ನು ಕೊಡುವುದರ ಮುಖೇನ ಕೋಟ್ಯಾಂತರ ರೂಪಾಯಿಗಳ ಸಹಾಯ ಮಾಡುವವರಾಗಿದ್ದಾರೆ. ಇದು ಬೇಸಾಯಗಾರರಿಗೆ ಅತಿ ಮುಖ್ಯವಾದ ಸಹಾಯವಾಗಿದೆ. ಈಗ ಕೊಡುತ್ತಿರತಕ್ಕ ಧನಸಹಾಯ 100ಕ್ಕೆ ಹತ್ತು ಭಾಗಕ್ಕಿಂತ ಹೆಚ್ಚಿರಲಾರದು. ಅಂಥದರಲ್ಲಿ ಎಲ್ಲರಿಗೂ ಈ ಸಹಾಯ ದೊರೆಯುವುದಾದರೆ ನಮ್ಮ ದೇಶದ ಜನತೆಗೆ ಬಹಳ ಅನುಕೂಲ ಮಾಡಿದಂತಾಗುತ್ತದೆ.

ಇನ್ನೊಂದು ಸಲಹೆ ಮಾಡುವುದಕ್ಕೆ ನಾನು ಇಷ್ಟ ಪಡುತ್ತೇನೆ. ಈಗ ವ್ಯವಸಾಯದ ಇಲಾಖೆ ದೇಶದಲ್ಲಿ ಬೇಸಾಯಗಾರರಿಗೆ ಏನೇನು ಒದಗಿಸಿಕೊಡಬೇಕೋ ಅದನ್ನೆಲ್ಲಾ ಒದಗಿಸುವುದಕ್ಕೆ ಸಾಧ್ಯವಿಲ್ಲದ್ದಾಗಿದೆ. ವ್ಯವಸಾಯ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿಯೂ ಜಿಲ್ಲಾಕೇಂದ್ರಗಳಲ್ಲಿಯೂ ಇದ್ದಾರೆ. ಆದರೂ ಉತ್ತಮ ರೀತಿಯಲ್ಲಿ ವ್ಯವಸಾಯ ನಡೆಯಬೇಕಾದರೆ, ಯಾವುದೇ ತಮ್ಮ ಯೋಜನೆ ಫಲಕಾರಿಯಾಗಬೇಕಾದರೆ ದೇಶದ ರೈತಾಪಿ ಜನರನ್ನು ಮೊದಲು ತಯಾರುಮಾಡಬೇಕು. ಜನರನ್ನು ತಯಾರುಮಾಡದೆ ಅಧಿಕಾರಿಗಳೇ ನುಮ್ಮನೆ ಪ್ರಚಾರಮಾಡಿ ವ್ಯವಸಾಯವನ್ನು ಉತ್ತಮಸ್ಥಿತಿಗೆ ತರುವುದು ಕನಸಿನ ಮಾತು. ಒಂದು ಲಕ್ಷ ಒಂದೂವರೆ ಲಕ್ಷ ರೈತಾಪಿ ಜನರು ಇರುವ ಒಂದು ತಾಲ್ಲೂಕಿನಲ್ಲಿ ಒಬ್ಬ Agricultural Inspector, ಒಬ್ಬ field man ಇಟ್ಟು ಅವರು ಪ್ರಚಾರಮಾಡಿ ಹೊಸ ರೀತಿಯ ಬೆಳೆ ಮಾಡುವುದಕ್ಕೆ ಅವಕಾಶ ಮಾಡುತ್ತಾರೆಂಬುದು ಬಹಳ ಕಷ್ಟ. ಸರ್ಕಾರದ ಪ್ರಜಾ ಪ್ರಭುತ್ವ ರೀತಿಯನ್ನು ಪ್ರತಿಯೊಂದು ಕ್ಷೇತ್ರದಲ್ಲೂ ಜಾರಿಗೆ ತರಬೇಕು. ಎಲ್ಲ ಕಡೆಯಲ್ಲೂ ವ್ಯವಸಾಯ ಸಂಘಗಳನ್ನೂ ಬತ್ತನೆ ಬೆಳೆಗಾರರ ಸಂಘಗಳನ್ನೂ ಸ್ಥಾಪನೆ ಮಾಡುವುದಕ್ಕೆ ತ್ವರಿತ ಪ್ರಯತ್ನ ಮಾಡಬೇಕು. ಆ ಸಂಘಗಳಿಗೆ ಏನೇನು ಸಹಾಯ ಬೇಕೋ ಅದನ್ನು ಒದಗಿಸಿಕೊಟ್ಟು ಅಲ್ಲಿ ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರೂ, ಫೀಲ್ಡ್‌ಮೆನ್‌ಗಳೂ ಅದರಲ್ಲಿ ಸದಸ್ಯರಾಗಿರುವಂತೆ ಮಾಡಿ, ಆ ಸಂಘಗಳು ಮಾಡುವ ತೀರ್ಮಾನವನ್ನು ಕಾರ್ಯರೂಪಕ್ಕೆ ತರುವಂತೆ ಮಾಡಿದರೆ ಉತ್ತಮ ರೀತಿಯಲ್ಲಿ ಕೆಲಸವಾಗುವುದಕ್ಕೆ ಅನುಕೂಲವಾಗುತ್ತದೆಂದು ನಂಬಿದ್ದೇನೆ.

ಬೆಳೆಯತಕ್ಕಂಥ ಬತ್ತನೆ ಬೀಜವನ್ನು ಸಕಾಲದಲ್ಲಿ ಸರಬರಾಯಿ ಮಾಡುತ್ತಿಲ್ಲ. ನಾನು ಯಾವ ಅಧಿಕಾರಿಗಳನ್ನಾಗಲೀ, ಸರ್ಕಾರವನ್ನಾಗಲೀ ಆಕ್ಷೇಪಣೆ ಮಾಡುತ್ತಾ ಇದ್ದೇನೆಂದು ಭಾವಿಸಬಾರದು. ಯಾವ ಸರ್ಕಾರವಿದ್ದರೂ, ಶೇಕಡಾ 83 ಜನ ಬೇಸಾಯ ಮಾಡತಕ್ಕಂಥ ದೇಶದಲ್ಲಿ ಎಲ್ಲರಿಗೂ ಸಮರ್ಪಕವಾಗಿ ಬೀಜವನ್ನು ಸಕಾಲದಲ್ಲಿ ಒದಗಿಸುವುದಕ್ಕೆ ಆಗುವುದಿಲ್ಲವೆಂದು ಮನಗಂಡು, ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಬತ್ತನೆ ಬೀಜದ ಬೆಳೆಗಳ ವ್ಯವಸ್ಥೆಮಾಡಬೇಕು. ಇಲಾಖೆಯ ಮುಖೇನ ಮತ್ತು ಸಂಘದ ಮುಖೇನ ಬೇಸಾಯಗಾರರಿಗೆ ಬತ್ತನೆ ಬೀಜಗಳು ಒದಗುವಂತೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಬೆಳೆಗಳಿಗೆ ರೋಗರುಜಿನಗಳು ಬಂದು ರೈತರು ಕಷ್ಟಕ್ಕೀಡಾಗುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಅವರು ಬಹಳ ಮುತುವರ್ಜಿಯಿಂದ ನಡೆಯುತ್ತಾ ಇಲ್ಲ ಎಂದು ನಾನು ವಿಷಾದದಿಂದ ಹೇಳುತ್ತೇನೆ. ಯಾವುದಾದರೂ ಒಂದು ಕಾಯಿಲೆ ಬೆಳೆಗೆ ಬಂದರೆ, ಅದನ್ನು ರಿಪೋರ್ಟ್ ಮಾಡಿದ ತಕ್ಷಣ ಇಲಾಖೆಯವರಿಂದ ಪರಿಹಾರ ದೊರೆಯದೆ ಇದ್ದರೆ, ಏನು ಪ್ರಯೋಜನ ಎನ್ನುವುದನ್ನು ತಾವು ಯೋಚನೆಮಾಡಬೇಕು. ಯಾವ ರೋಗ ಬಂದರೂ, ಸ್ಥಳಕ್ಕೆಬಂದು ಪರಿಶೀಲನೆ ಮಾಡುವ ಅಧಿಕಾರಿಗಳಿಗೇ ಯಾವ ರೋಗ ಬಂದಿದೆ ಎಂದು

(ಶ್ರೀ ಎಚ್. ಎ. ವೀರೇಗೌಡ)

ಗೊತ್ತಾಗದಿದ್ದರೆ, ಬೆಳೆಗಳ ರಕ್ಷಣೆಗೆ ಏನಾದರೂ ಪ್ರಯೋಜನವಾಗುತ್ತದೆಯೇ ? ಯಾರಾದರೂ ಎಕ್ಸ್ ಪರ್ಟ್‌ಗಳನ್ನು ಯಾವ ರೋಗ ಬಂದಿದೆ ಎಂದು ಕಂಡು ಹಿಡಿಯುವ ಸಾಮರ್ಥ್ಯವಿರುವವರನ್ನು ಸ್ಥಳಕ್ಕೆ ಕಳುಹಿಸಿ, ರೋಗರುಜಿನಗಳು ಕೂಡಲೆ ನಿವಾರಣೆಯಾಗುವ ಹಾಗೆ ಮಾಡಬೇಕು. ಇಲ್ಲದೇ ಹೋದರೆ ರೈತರು ಬೆಳೆದಂಥ ಬೆಳೆಗಳು ಹಾಳಾಗಿ, ಅವರು ಬಹಳ ಕಷ್ಟಕ್ಕೆ ಈಡಾಗುತ್ತಾರೆ.

ಇನ್ನೊಂದು ವಿಷಯ. ವ್ಯವಸಾಯ ಇಲಾಖೆಯ ಮುಖ್ಯಾಧಿಕಾರಿಗಳೂ, ಅಧಿಕಾರ ವರ್ಗದವರೂ ಇಲ್ಲಿದ್ದಾರೆ. ಆದರೆ ನಾನು ಅವರಿಗೆ ನೇರವಾಗಿ ಪ್ರಾರ್ಥನೆ ಮಾಡುವುದಿಲ್ಲ. ತಮ್ಮ ಮುಖೇನ ಅವರಿಗೆ ಹೇಳುವುದೇನೆಂದರೆ, ಅವರು ತಾಲ್ಲೂಕುಗಳಿಗೆ, ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಿಗೆ ಪ್ರವಾಸ ಹೋದಾಗ ರೆಲ್ಲಾ ಮುಂಚಿತವಾಗಿ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿರತಕ್ಕಂಥ ವ್ಯವಸಾಯ ಶೋಧಕ ಸಂಘಗಳಿಗೆ ಅಸಿಸ್ಟೆಂಟ್ ಡೈರೆಕ್ಟರುಗಳ ಮುಖೇನ ಅವರ ಪ್ರವಾಸದ ವಿಚಾರ ಪ್ರಕಟ ಮಾಡಿ, ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ರೈತರ ಕಷ್ಟ ಸುಖ ವಿಚಾರಮಾಡಿ, ತಮ್ಮ ಅಮೂಲ್ಯ ಸಲಹೆಗಳನ್ನು ಅವರ ಮುಂದಿಡಬೇಕು. ಸಂಘದ ಮುಖಾಂತರ ಇದನ್ನು ವ್ಯವಸ್ಥೆ ಮಾಡಬೇಕು. ಇವತ್ತಿನವರೆಗೆ ಈ ವ್ಯವಸ್ಥೆ ಇಲ್ಲ. ಇನ್ನು ಮುಂದೆ ಹಾಗೆ ಮಾಡಬೇಕು.

ಬೇಸಾಯ ಅಭಿವೃದ್ಧಿಯಾಗಬೇಕು, ಆಹಾರದ ಅಭಾವ ಹೋಗಲೇಬೇಕೆಂದು ಎಲ್ಲಾ ಕಡೆಗಳಲ್ಲಿಯೂ ಹೇಳುತ್ತಿದ್ದಾರೆ; ಅನೇಕ ಪದನ್ಯರೂ ಭಾಷಣ ಮಾಡುತ್ತಿದ್ದಾರೆ. ಜಮೀನುಗಳಲ್ಲಿ ಬೆಳೆ ಮಾಡಿದರೆ ಆಹಾರೋತ್ಪತ್ತಿ ಜಾಸ್ತಿ ಮಾಡುವುದು ಸಾಧ್ಯ. ಅದಿಲ್ಲದೆ ಈ ಸಭೆಯಲ್ಲಿ ಜಾಸ್ತಿ ಬೆಳೆಯಾಗಬೇಕೆಂದು ಭಾಷಣ ಮಾಡಿದರೆ, ಹೆಚ್ಚಿನ ಬೆಳೆ ಆಗಲಾರದು. ನೂರು ವರ್ಷಗಳಾದರೂ ಆಹಾರದ ಕೊರತೆ ಹೋಗಲಾರದು. ಹೆಚ್ಚುಬೆಳೆ ಬೆಳೆಯಲು ಇರುವ ಅನೇಕ ಕುಂದು ಕೊರತೆಗಳನ್ನು ಸರ್ಕಾರದವರಾಗಲೀ, ಇಲಾಖೆಯವರಾಗಲೀ, ಪರಿಹರಿಸದೇ ಇದ್ದರೆ, ಇದೆಲ್ಲಾ ಬರಿಯ ಭಾಷಣದಲ್ಲಿ ಮುಗಿದು ಹೋಗುತ್ತದೆ.

ಹಿಂದೆ ವ್ಯವಸಾಯ ಇಲಾಖೆಯಲ್ಲಿ ಗೊಬ್ಬರ, ಕೃತಕ ಗೊಬ್ಬರಗಳನ್ನು ಮಾರಾಟ ಮಾಡುವಾಗ, ಡ್ರೈಯೇಜ್ ಲೀಕೇಜ್, ವೇಸ್ಟೇಜ್ ಎಂದು ಹೇಳಿ ಸರ್ಕಾರದವರು 'ವೇವ್' ಮಾಡುತ್ತಾ ಇದ್ದರು. ಇಲಾಖೆಯವರ ಕೈತಪ್ಪಿಸಿ, ಸಹಕಾರ ಸಂಘಗಳು ತೆಗೆದುಕೊಂಡು ಮಾರಾಟಮಾಡುವಾಗ ಡ್ರೈಏಜ್ ಇಲ್ಲ, ಲೀಕೇಜ್ ಇಲ್ಲ, ವೇಸ್ಟೇಜ್ ಇಲ್ಲ. ಎಲ್ಲಾ ನಾವು ಕೊಡಬೇಕಾಗುವುದು. ಎಷ್ಟು ಪ್ರೋತ್ಸಾಹ ಸಹಕಾರ ಸಂಘಗಳಿಗೆ ಕೊಡುತ್ತಾ ಇದ್ದೀರಿ ಎನ್ನುವುದನ್ನು ಯೋಚನೆ ಮಾಡಬೇಕು. ನನ್ನ ಸಲಹೆ ಒಂದಿದೆ. ಬೇಸಾಯದ ಇಲಾಖೆಗೆ, ಮತ್ತು ಸಹಕಾರದ ಇಲಾಖೆಗೆ ಒಬ್ಬರೇ ಮಂತ್ರಿಗಳು ಇದ್ದರೆ ಒಳ್ಳೆಯದು. ಏಕೆಂದರೆ ನೀವು ಹೇಳತಕ್ಕದ್ದು ಅವರಿಗೆ ಹಿಡಿಯುವುದಿಲ್ಲ, ಅವರು ಹೇಳುವುದು ನಿಮಗೆ ಹಿಡಿಯುವುದಿಲ್ಲ. ನಿಮ್ಮಿಬ್ಬರ ಮಧ್ಯದಲ್ಲಿ ಒಂದನ್ನೂ ದೇಶದಲ್ಲಿ ಜಾರಿಗೆ ತರುವುದಕ್ಕಾಗುವುದಿಲ್ಲ. ಆರ್. ಆರ್. ಮೂಲಕ ಗೊಬ್ಬರವನ್ನು ತರಿಸಿಕೊಂಡು ಹಂಚತಕ್ಕ ಕೆಲಸದಲ್ಲಿ ಸರ್ಕಾರದ ಜವಾಬ್ದಾರಿ ಪೂರ್ಣ ಇದೆ. ಹಿಂದೆ ರೈಲ್ವೆ ಸೆಂಟ್ರಲ್ ಗೋಡೌನ್‌ನಲ್ಲಿ ಸಹಕಾರ ಸಂಘಗಳಿಗೆ ತೂಕಮಾಡಿ ಕೊಟ್ಟಿದ್ದಾರೆ. ಈಗ ಅದನ್ನು ತಪ್ಪಿಸಿದ್ದಾರೆ. ಸಹಕಾರ ಸಂಘಗಳಿಗೆ ಬರತಕ್ಕಂಥ ಲಾಭವೇ ಕಡಮೆ. ಅಂತಹದರಲ್ಲಿ ತೂಕವಾದದೆ ಕೊಟ್ಟು ಗೊಬ್ಬರದ ಡಿಫಿಷಿಯನ್ಸಿಯನ್ನು ಮೇಕ್-ಅಪ್ ಮಾಡುವುದು ಕಷ್ಟವಾಗಿದೆ. ವ್ಯಾಪಾರ ಮಾಡುವುದನ್ನೇ ಬಿಡಬೇಕಾದ ಸಂದರ್ಭ ಸಹಕಾರ ಸಂಘಗಳಿಗೆ ಬರುತ್ತಾ ಇದೆ. ಇದನ್ನೆಲ್ಲಾ ಪರಿಶೀಲನೆಮಾಡಿ, ಬೇಸಾಯ ಉತ್ತಮ ಸ್ಥಿತಿಗೆ ಬರುವಂಥ ಒಂದು ಯೋಜನೆಯನ್ನು ತಯಾರು ಮಾಡಬೇಕು. ಮುಕ್ಕಿಕಮುಕ್ಕಿ ಎಂದು ಹಿಂದಿನದನ್ನು ನೋಡಿಕೊಂಡು ಮುಂದುವರಿಸಿಕೊಂಡು ಹೋದರೆ, ದೇಶಕ್ಕೆ ದಿಪ್ರಯೋಜನವಾಗುವುದಿಲ್ಲ. ತಜ್ಞರು ಇದ್ದಾರೆ; ಬುದ್ಧಿವಂತರಿದ್ದಾರೆ. ಇವರುಗಳ ನೆಲಹೆಯನ್ನು ತೆಗೆದುಕೊಂಡು ಒಂದು ಯೋಜನೆಯನ್ನು ಹಾಕಬೇಕು.

ಕಾಲಾವಕಾಶವಿಲ್ಲದಿರುವುದರಿಂದ, ನಾನು ಹೆಚ್ಚಿಗೆ ಮಾತನಾಡಲು ಇಚ್ಛೆಪಡುವುದಿಲ್ಲ. ಸಮಯ ತೆಗೆದುಕೊಂಡು ತಮ್ಮ ಹತ್ತಿರ ಮತ್ತು ಇಲಾಖೆ ಅಧಿಕಾರಿಗಳ ಹತ್ತಿರ ಮಾತನಾಡಲು ಅವಕಾಶವಿದೆ. ಈ ಒಂದು ಬೇಡಿಕೆಯನ್ನು ಬಹಳ ನಂತೋಷದಿಂದ ಅನುಮೋದಿಸಿ, ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಕೆ. ಟಿ. ದಾನಪ್ಪ (ಹಾನನ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದಿಟ್ಟಿರುವ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯಲ್ಲಿ 2,14,27,000 ರೂಪಾಯಿ ನಮೂದು ಮಾಡಿದ್ದಾರೆ. ಈ ಹಣ ಬಹಳ ಕಡಮೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ನಮ್ಮ ದೇಶದಲ್ಲಿ ವ್ಯವಸಾಯ ಪ್ರಾಮುಖ್ಯವಾದ ಕಸುಬೆಂದು ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ಆದರೂ ಇಷ್ಟು ಕಡಮೆ ಹಣ ಈ ವ್ಯವಸಾಯದ ಇಲಾಖೆಗೆ ಒದಗಿಸಿರುವುದು ಬಹಳ ವಿಷಾದಕರ ಎಂದು ಹೇಳಬೇಕಾಗಿದೆ. ವ್ಯವಸಾಯಕ್ಕೆ ಪ್ರತಿಯೊಬ್ಬರೂ ಉತ್ತೇಜನ ಕೊಡಬೇಕೆಂದು ಹೇಳುತ್ತಿದ್ದೀರಿ. ಆದರೆ ಸರ್ಕಾರದಿಂದ ವ್ಯವಸಾಯಕ್ಕೆ ಅಷ್ಟಾಗಿ ಉತ್ತೇಜನ ದೊರಕುತ್ತಿಲ್ಲವೆಂದು ಈ ಬಜೆಟ್ ನೋಡಿ, ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಹಳ್ಳಿಯವರಿಗೆ ಬುಲ್‌ಡೋಜರ್, ಟ್ರಾಕ್ಟರುಗಳನ್ನು ಒದಗಿಸುತ್ತಿದ್ದೇವೆಂದು ಹೇಳುತ್ತಾ ಇದ್ದೀರಿ. ಆದರೆ ಒಂದು ಅಪ್ಲಿಕೇಷನ್ ಹಾಕಿ, ಒಂದು ಬುಲ್‌ಡೋಜರ್, ಟ್ರ್ಯಾಕ್ಟರ್ ಪಡೆಯಬೇಕಾದರೆ ಸುಮಾರು ಮೂರು-ನಾಲ್ಕು ತಿಂಗಳುಗಳಾಗುತ್ತವೆ. ಇಂತಹ ಕಷ್ಟವನ್ನು ಕಣ್ಣಾರೆ ಕಂಡಿದ್ದೇನೆ. ಇವುಗಳನ್ನು ಸರಿಯಾದ ದರದಲ್ಲಿ ಒದಗಿಸಬೇಕು. ಹಿಂದೆ ಒಂದು ಟ್ರ್ಯಾಕ್ಟರಿಗೆ, ಬುಲ್‌ಡೋಜರಿಗೆ ಒಂದು ಘಂಟೆಗೆ ಐದು ರೂಪಾಯಿ ಇತ್ತು. ಇವತ್ತಿನ ದಿವಸ ಅದನ್ನು 20 ರೂಪಾಯಿವರೆಗೆ ಹೆಚ್ಚುಮಾಡಿದ್ದಾರೆ. ಹಿಂದೆ ಮಂತ್ರಿಗಳು ಜಮೀನನ್ನು ಉಳಿಸುವ ಕಾಲದಲ್ಲಿ ಐದು ರೂಪಾಯಿ ಇದ್ದಿತು. ಈಗ ಬೇರೆಯವರು ಉಳಿಸಬೇಕಾದರೆ 18–20 ರೂಪಾಯಿ ಆಗುತ್ತಾ ಇದೆ. ಇದು ಬಹಳ ಅನ್ಯಾಯ. ಇದನ್ನು ಆದಷ್ಟು ಕಡಿಮೆ ಮಾಡಬೇಕು, ಎಂದು ನಾನು ನಿಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಗೊಬ್ಬರ ಹೊರಿಸುವುದಕ್ಕೋಸ್ಕರ ಲಾರಿಯನ್ನು ಹಿಂದೆ ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿನಿಂದ ಬಾಡಿಗೆಗೆ ಕೊಡುತ್ತ ಇದ್ದರು. ಯಾವ ಕಾರಣದಿಂದಲೋ ಈಗ ಎರಡು ವರ್ಷಗಳಿಂದ ಇದನ್ನು ನಿಲ್ಲಿಸಿಬಿಟ್ಟಿದ್ದಾರೆ. ರೈತರಿಗೆ ಈ ರೀತಿಯಲ್ಲಿ ಲಾರಿಗಳನ್ನು ಕೊಡುತ್ತಿದ್ದುದು ಬಹಳ ಅನುಕೂಲವಾಗಿತ್ತು. ಲಾರಿಗಳಲ್ಲಿ ಗೊಬ್ಬರವನ್ನು ತಮ್ಮ ಜಮೀನುಗಳಿಗೆ ಸುಲಲಿತ

ವಾಗಿ ತೆಗೆದುಕೊಂಡು ಹೋಗುತ್ತಾ ಇದ್ದರು. ಈ ಪದ್ಧತಿಯನ್ನು ನಿಲ್ಲಿಸಿದ ಕಾರಣ ಗೊತ್ತಾಗಿಲ್ಲ. ಹಿಂದೆ ಯಾವ ರೀತಿಯಲ್ಲಿ ರಿಯಾಯಿತಿ ದರದಲ್ಲಿ ಗೊಬ್ಬರವನ್ನು ಸಾಗಿಸುವುದಕ್ಕೆ ಲಾರಿಗಳನ್ನು ಬಾಡಿಗೆಗೆ ಕೊಡುತ್ತಿದ್ದರೋ, ಈಗಲೂ ಅಗ್ರಿಕಲ್ಚರಲ್ ಇಲಾಖೆ ಕೊಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಹಾನನ ಡಿಸ್ಟ್ರಿಕ್ಟಿನಲ್ಲಿ ಆಲೂಗಡ್ಡೆ ಬೆಳೆಯುತ್ತ ಇದ್ದೆವು. ಹೋದಸಾರಿ ಆಲೂಗಡ್ಡೆಗೆ ರೋಗ ಬಂದಿತು. ಸುಮಾರು ಮೂರು-ನಾಲ್ಕು ಲಕ್ಷ ರೂಪಾಯಿಯಷ್ಟು ಆಲೂಗಡ್ಡೆ ನಷ್ಟವಾಯಿತು. ಎಕ್ಸ್‌ಪೆರಿಮೆಂಟ್ ಮಾಡಿ, ಅದಕ್ಕೆ ಏನು ಔಷಧಿ ಕೊಡಬಹುದು ಎಂದು ಹೇಳುವ ಶಕ್ತಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನವರಿಗಿಲ್ಲ. ಇದೇ ರೀತಿ ಅನೇಕ ಮನವಿಗಳನ್ನು ಮಾಡಿದ್ದೇವೆ. ಚಿಕ್ಕಬಳ್ಳಾಪುರದ ಆಲೂಗಡ್ಡೆಯನ್ನು ಹೋದ ಸಾರಿ ಕೆಲವರು ಹಾನನ ಡಿಸ್ಟ್ರಿಕ್ಟಿನಲ್ಲಿ ಹಾಕಿ ಸುಮಾರು ನಾಲ್ಕು-ಐದು ಲಕ್ಷ ರೂಪಾಯಿ ನಷ್ಟ ಹೊಂದಿದ್ದಾರೆ.

ಇದಕ್ಕೆ ತಕ್ಕ ಪರಿಹಾರವನ್ನು ಮಾಡಿಕೊಟ್ಟು ಅವರಿಗೆ ಗೆಲ್ಲುತ್ತೇಜನ ಕೊಡಬೇಕು. ಹಾನನದಲ್ಲಿ ಸಂಶೋಧನಾ ಕೇಂದ್ರವನ್ನು ಏರ್ಪಾಡು ಮಾಡಬೇಕೆಂದು ಸರ್ಕಾರದಲ್ಲಿ ವಿನಯದಿಂದ ಪ್ರಾರ್ಥಿಸುತ್ತೇನೆ.

ರೈತರಿಗೆ ಸಕಾಲದಲ್ಲಿ ಗೊಬ್ಬರವನ್ನು ಕೊಡಬೇಕು. ಸರ್ಕಾರದಿಂದ ಸಕಾಲದಲ್ಲಿ ಕೆಲವರಿಗೆ ಸಿಕ್ಕುತ್ತದೆ, ಕೆಲವರಿಗೆ ಸಿಕ್ಕುವುದಿಲ್ಲ. ಬಡರೈತರಿಗೆ ಸಿಕ್ಕುವುದು ಕಷ್ಟ; ಅನುಕೂಲಸ್ಥರಿಗೆ ಮತ್ತು ಶಿಫಾರಸು ಇರುವವರಿಗೆ ಸಿಕ್ಕುತ್ತದೆ. ಇದನ್ನು ತಪ್ಪಿಸಿ ರೈತರಿಗೆ ಉಪಯೋಗವಾಗುವ ರೀತಿಯಲ್ಲಿ ಗೊಬ್ಬರವನ್ನು ಸಹಕಾರ ಸಂಘಗಳ ಮೂಲಕ ರೈತರಿಗೆ ಒದಗಿಸಬೇಕೆಂದು ವಿನಯದಿಂದ ಹೇಳುತ್ತೇನೆ.

ಬಿತ್ತನೆಯ ಬೀಜ ಸರಿಯಾದ ರೀತಿಯಲ್ಲಿ ಒಳ್ಳೆಯ ಬೀಜ ದೊರೆಯುತ್ತಿಲ್ಲ. ಇದರಿಂದ ವ್ಯವಸಾಯ ಉತ್ಪತ್ತಿ ಕಡಮೆಯಾಗುವುದಲ್ಲದೆ ರೈತ ಲಾಭ ಪಡೆಯುವುದಕ್ಕಾಗುವುದಿಲ್ಲ. ಈಗಾಗಲೇ ಈ ಸಂಬಂಧವಾಗಿ ಅನೇಕ ಸದಸ್ಯರು ಸಲಹೆ ಮಾಡಿದ್ದಾರೆ. ಪ್ರತಿ ತಾಲ್ಲೂಕಿನಲ್ಲಿಯೂ ವ್ಯವಸಾಯದ ಇಸ್ಪೆಕ್ಟರಿರುತ್ತಾರೆ, ಆದರೂ ಎಲ್ಲಕಡೆಯೂ ಅವರೇಹೋಗಿ ಸಲಹೆ ಕೊಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಆದುದರಿಂದ ಅವರ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಉತ್ತಮ ಬೀಜವನ್ನೂ ಸರಿಯಾದ ಸಲಹೆಯನ್ನೂ ರೈತರಿಗೆ ಕೊಟ್ಟರೆ ಒಳ್ಳೆಯ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಅಲ್ಲದೆ ರೈತರಿಗೆ ಉಳುಮೆಗೆ ಬೇಕಾದ ಕಬ್ಬಿಣವೂ ಸಹಕಾರ ಸಂಘಗಳ ಮೂಲಕವೂ ವ್ಯವಸಾಯ ಡಿಪೋಗಳ ಮೂಲಕವೂ ಸಕಾಲದಲ್ಲಿ ಸಿಕ್ಕುವಹಾಗೆ ಏರ್ಪಾಡುಮಾಡಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ನಮ್ಮ ರಾಜ್ಯದಲ್ಲಿ ವ್ಯವಸಾಯದ ಸ್ಕೂಲಿದೆ. ಇದರಲ್ಲಿ ವಿದ್ಯಾರ್ಥಿಗಳಿಗೆ ಸೀಟುಗಳು ಸಿಕ್ಕುವುದು ಕಷ್ಟವಾಗಿದೆ. ಒಂದು ಸೀಟಿಗಾಗಿ ಎಷ್ಟೋ ಶಿಫಾರಸು ಬೇಕಾಗಿದೆ. ಸರ್ಕಾರದವರು ವ್ಯವಸಾಯವನ್ನು ಜಾಸ್ತಿಮಾಡಬೇಕೆಂದು ಅನೇಕ ಕಡೆ ಹೇಳುತ್ತಾರೆ. ಆದರೆ ವ್ಯವಸಾಯದ ಸ್ಕೂಲಿನಲ್ಲಿ ಸೀಟುಗಳು ಸಿಕ್ಕುವುದೇ ಕಷ್ಟವಾಗಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಯಾವ ಸ್ಕೂಲು?

ಶ್ರೀ ಕೆ. ಟಿ. ದಾನಪ್ಪ.—ಬೆಂಗಳೂರು ಅಗ್ರಿಕಲ್ಚರಲ್ ಕಾಲೇಜು. ಇಂಥ ಕಾಲೇಜುಗಳನ್ನು ಇನ್ನೂ ಬೇರೆ ಬೇರೆ ಎರಡು ಮೂರು ಕಡೆಗಳಲ್ಲಿ ತೆರೆಯಲಿ.

ಶ್ರೀ ಎಚ್. ಎಸ್. ರುದ್ರಪ್ಪ.—ಯಾರಿಗೆ ಸೀಟು ಕೊಡಬೇಕು?

ಶ್ರೀ ಕೆ. ಟಿ. ದಾನಪ್ಪ.—ವ್ಯವಸಾಯಗಾರರ ಮಕ್ಕಳಿಗೇ ಕೊಡಬೇಕು. ಈ ಕಾಲೇಜಿನಿಂದ ವ್ಯಾಸಂಗ ಮಾಡಿ ಉತ್ತೀರ್ಣರಾಗಿ ಬಂದಮೇಲೆ ಯಾವುದೋ ಕೆಲಸಕ್ಕೆ ಹೋಗುತ್ತಾರೆ. ಆದಕಾರಣ ಒಂದು ಷರತ್ತನ್ನು ಹಾಕಬೇಕು. ವ್ಯವಸಾಯಗಾರರ ಮಕ್ಕಳಿಗೆ ಸೀಟುಗಳನ್ನು ಕೊಟ್ಟು ಅವರು ಬೇರೆ ಕೆಲಸಗಳಿಗೆ ಹೋಗಬಾರದು, ವ್ಯವಸಾಯಕ್ಕೇ ಹೋಗಬೇಕೆಂದು ಷರತ್ತು ಹಾಕಬೇಕು.

ಅನೇಕ ವಿದ್ಯಾರ್ಥಿಗಳನ್ನು ನಮ್ಮ ದೇಶದಿಂದ ಹೊರದೇಶಗಳಿಗೆ ಶಿಕ್ಷಣ ಪಡೆದು ಬರಲು ಕಳುಹಿಸುತ್ತಾರೆ. ಅವರು ಅಲ್ಲಿಂದ ಬಂದು ಜನರಿಗೆ ಏನು ಸಹಾಯ ಮಾಡುತ್ತಾರೆ? ಏನು ಸಲಹೆ ಕೊಡುತ್ತಾರೆ? ಯಾವುದನ್ನೂ ಮಾಡುತ್ತಿಲ್ಲ. ನಮ್ಮನ್ನೆ ನಮ್ಮ ದೇಶದ ಹಣ ಖರ್ಚಾಗುತ್ತದೆ. ಅಂಥವರು ನಮ್ಮ ರೈತರಿಗೆ ಸಲಹೆಗಳನ್ನು ಕೊಡುವುದಕ್ಕೆ ಅನೇಕ ಕೇಂದ್ರಗಳನ್ನು ಏರ್ಪಾಡು ಮಾಡಬೇಕು. ಅವರು ಸಂಚಾರಮಾಡಿ, ಸಲಹೆಗಳನ್ನು ರೈತರಿಗೆ ಕೊಡುವುದು ಬಹಳ ಅಗತ್ಯ.

ಪಶುವೈದ್ಯಶಾಲೆಗಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಹಳ್ಳಿಗಳಲ್ಲಿ ರೈತರಿಗೆ ಸಾಕಷ್ಟು ಔಷಧಿ ಸಿಕ್ಕುತ್ತಿಲ್ಲ. ಹಸುಗಳು ಅಥವ ಎತ್ತುಗಳನ್ನು ಆಸ್ಪತ್ರೆಗೆ ಹೊಡೆದುಕೊಂಡುಬಂದರೆ, ನಮ್ಮಲ್ಲಿ ಔಷಧಿ ಇಲ್ಲ, ಹಣಕೊಟ್ಟು ನೀವೇ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಸರ್ಕಾರದಿಂದ ಇಷ್ಟು ಹಣ ಕೊಡುತ್ತಿದ್ದರೂ ಆದರಿಂದ ರೈತರಿಗೆ ತಕ್ಕಷ್ಟು ಪ್ರಯೋಜನವಾಗುತ್ತದೆಯೆ ಎನ್ನುವುದನ್ನು ನೋಡಿಕೊಳ್ಳಬೇಕು.

ಶ್ರೀ ಕೆ. ಎ. ಬೈರೇಗೌಡ (ಬೆಂಗಳೂರು ಉತ್ತರ).—ಮಾನ್ಯ ಅಧ್ಯಕ್ಷರೆ, ವ್ಯವಸಾಯ ಮತ್ತು ಪಶುವೈದ್ಯ ಇಲಾಖೆಗಳಿಗಾಗಿ ಮಂಡಿಸಿರುವ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲವನ್ನು ಕೊಡುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ಸ್ವಾಮಿ, ಶ್ರೀಮಾನ್ ರುದ್ರಪ್ಪನವರು ವ್ಯವಸಾಯ ಮಂತ್ರಿಗಳಾದಾಗ ಜನ ಬಹಳ ಆಶಾಭರಿತರಾಗಿದ್ದರು. ಏಕೆಂದರೆ, ಅವರು ರೈತರ ಮಕ್ಕಳು ಮತ್ತು ರೈತವೃತ್ತಿಯನ್ನು ಅರಿತವರೆಂದು. ಆದರೆ ಅದು ಸಫಲವಾಗಿಲ್ಲ. ಇದರಲ್ಲಿ ಏನೋ ಮೂಲ ಭೂತ ತೊಂದರೆಯಿರಬಹುದು, ಇಲ್ಲದಿದ್ದರೆ ಸಾಕಷ್ಟು ಶಕ್ತಿ ಇವರಲ್ಲಿ ಎಂಬ ತೀರ್ಮಾನಕ್ಕೆ ಬಂದಿದ್ದೇನೆ. ಈ ಮಾನ್ಯ ಸಭೆಯಲ್ಲಿ ಸುಮಾರು ಸೇಕಡ 75 ರಷ್ಟು ಸದಸ್ಯರು ರೈತರು ಅಥವ ರೈತರ ಕಷ್ಟ ಸುಖಗಳನ್ನು ನೋಡಿರುವವರು ಮತ್ತು ಅವರಿಂದ ಚುನಾಯಿತರಾಗಿ ಬಂದಿರುವವರು ಇದ್ದೇವೆ. ಆದಕಾರಣ ವ್ಯವಸಾಯ ಮತ್ತು ಅದಕ್ಕೆ ಸಂಬಂಧಪಟ್ಟ ಇಲಾಖೆಗಳ ಕಡೆ ಹೆಚ್ಚುಗಮನವಿರಬೇಕಾದುದು ಸಹಜ. ಆದರೆ ದುರದೃಷ್ಟವಶಾತ್ ಇಲ್ಲಿಗೆ ಸದಸ್ಯರಾಗಿ ಬಂದ ಮೇಲೆ ನಮ್ಮ ಕರ್ತವ್ಯವೇನು ಎಂಬುದನ್ನು ಮರೆತು, ಸೇಕಡ 75 ರಷ್ಟು ಜನರು ನಮ್ಮನ್ನು ಆರಿಸಿ ಕಳುಹಿಸಿದವರ ಮೇಲ್ಮೈಗಾಗಿ ನಾವು ಕೆಲಸ ಮಾಡುತ್ತಿಲ್ಲ. ಇದಕ್ಕೆ ಕಾರಣ ಮಂತ್ರಿಗಳು ನಮ್ಮನ್ನು ಅವರ confidenceಗೆ ತೆಗೆದುಕೊಳ್ಳದೆಯಿರುವುದು. ವ್ಯವಸಾಯಕ್ಕೆ ಬೇಕಾದ ಸಾಧನ ಸಲಕರಣೆಗಳೇನು, ಸರಿಯಾದ ಸೌಲಭ್ಯಗಳಿವೆಯೆ ಎಂಬುದನ್ನು ಅಧಿಕಾರಿಗಳಿಂದ ತಿಳಿಯುವುದಲ್ಲದೆ ಖುದ್ದಾಗಿ ಅವರೇ ನೋಡಿ ತಿಳಿದು, ಇವುಗಳನ್ನು ಕೊಡಬೇಕು. ಇವರು ಈ ಶಕ್ತಿ ಸಾಮರ್ಥ್ಯವನ್ನು ಸಂಪಾದನೆ ಮಾಡದೇ ಹೋದರೆ ಯಾರನ್ನೂ

(ಶ್ರೀ ಕೆ. ಎ. ಬೈರೇಗೌಡ)

ದೂಷಣೆ ಮಾಡುವಹಾಗಿಲ್ಲ. ಈ ಹೊತ್ತು ದೀನದಲಿತ ರೈತರ ವಿಷಯದಲ್ಲಿ ಮಂತ್ರಿಗಳಿಗಿರುವ ಪ್ರೇಮ ಮತ್ತು ಮನೋಭಾವ ಅಧಿಕಾರಿಗಳಲ್ಲಿರಲು ಕಾರಣವಿಲ್ಲ. ಪ್ರಜಾ ಪ್ರಭುತ್ವದಲ್ಲಿ ಮಂತ್ರಿಯಾದ ಮೇಲೆ ಪ್ರಜೆಗಳು ತಮ್ಮ ಕಷ್ಟಸುಖಗಳನ್ನು ನೇರವಾಗಿ ಮಂತ್ರಿಗಳಿಗೆ ತಿಳಿಸುತ್ತಾರೆ. ಅಧಿಕಾರಿಗಳಿಗೆ ಹತ್ತಾರು ವರ್ಷಗಳ ಹಿಂದೆ ಯಾವ ಮನೋಭಾವವಿತ್ತೋ ಅದೇ ಮನೋಭಾವ ಈ ಹೊತ್ತು ಇದೆ. ದೇಶದಲ್ಲಿ ಆಗಬೇಕಾದ ಜನರ ಕೆಲಸ ಇಂಥಿಂಥಾದ್ದಿದೆ, ಅದನ್ನು ನೋಡಿ ತಿಳಿದು ಸರ್ಕಾರಕ್ಕೆ ನಾವು ಸೂಚನೆ ಕೊಡಬೇಕು ಎಂಬ ಮನೋವೃತ್ತಿ ಬೆಳೆದಿಲ್ಲ. ಹೆಚ್ಚು ಬೆಳೆಬೆಳೆಯುವ ಯೋಜನೆ ಎಂದು ಏನಿದೆಯೋ ಅದು ಹಾಸ್ಯಾಸ್ಪದವಾಗಿದೆ. ಪ್ಲಾನಿಂಗ್ ಕಮಿಷನ್, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ವರೆಗೆ ನ್ಯೂನತೆಯಿರುವುದು ಶೋಚನೀಯವಾಗಿದೆ. ಈ ದೇಶಕ್ಕೆ ಬೇಕಾದ ಆಹಾರ ಪದಾರ್ಥಗಳನ್ನೊದಗಿಸುವುದು ಸರ್ಕಾರದ ಧರ್ಮ. ಈಜಿಪ್ಟಿನಿಂದಲೋ ಬೇರೆ ದೇಶಗಳಿಂದಲೋ ಆಹಾರ ಧಾನ್ಯಗಳನ್ನು ತರಿಸುತ್ತಿದೇವೆ, ಅವರಿಗೆ ಹೆಚ್ಚು ಹಣವನ್ನು ಕೊಟ್ಟು ಆಹಾರ ಸಬ್‌ಸಿಡಿಕೊಡಲು ಸರ್ಕಾರ ಸಿದ್ಧವಾಗಿದ್ದಾರೆ. ಆದರೆ ಇದೇ ಹಣವನ್ನು ಈ ದೇಶದ ರೈತರಿಗೆ ಕೊಡುವುದಕ್ಕೆ ಪ್ಲಾನಿಂಗ್ ಕಮಿಷನ್ನಿಗಾಗಲೀ ರಾಜ್ಯಾಡಳಿತ ನಡೆಸುತ್ತಿರುವ ಜನರಿಗಾಗಲೀ ಶಕ್ತಿ ಇಲ್ಲ, ಇಷ್ಟವೂ ಇಲ್ಲ. ಅದು ನಮ್ಮ ದೇಶದ ದೌರ್ಭಾಗ್ಯ. ಇಲ್ಲಿ ಬೆಳೆದ ರೈತನಿಗೆ ಅವನು ಕೂಡುವ ಆಹಾರಧಾನ್ಯಗಳಿಗೆ ಸರಿಯಾದ ಬೆಲೆಯನ್ನು ಕೊಡಿ ಎಂದರೆ ಕೊಡುವುದಿಲ್ಲ. ರೈತನಿಗೆ ಅದೇ ಅಭ್ಯಾಸವಾಗಿ ಹೆಚ್ಚು ಹಣಧಿಂದ ಕೊಬ್ಬಿ ಅವನು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಾರೆ. ಪ್ಲಾನಿಂಗ್ ಕಮೀಷನ ಮಹಾಮುನಿಗಳೂ ಹೀಗೆಯೇ ಹೇಳುತ್ತಾರೆ. ನಾವು ಈ ಸಭಾಭವನದಲ್ಲಿ ಕುಳಿತಿದ್ದೇವೆ. ಇದಕ್ಕೆ ಸಹಾಯ ಮಾಡಿದ ಜನ ರೈತರು. ಅವರ ಪರಿಸ್ಥಿತಿಯೇನು, ಕಷ್ಟಸುಖಗಳೇನು ಎಂಬುದನ್ನು ನಾವು ನೋಡಬೇಕು.

ಒಂದು ಉದಾಹರಣೆ ಹೇಳುತ್ತೇನೆ. Insecticides ಎಂದರೆ, ಕ್ರಿಮಿನಾಶಕ ವನ್ನುಗಳನ್ನು ರೈತರಿಗೆ ಹಿಂದೆ ರಿಯಾಯಿತಿ ಬೆಲೆಯಲ್ಲಿ ಕೊಡುತ್ತಿದ್ದರು. ಈ ಸಂಬಂಧದಲ್ಲಿ ಸಾಕಷ್ಟು ಪ್ರಚಾರವಾಗಿದೆ, ರೈತರು ಇದರ ಉಪಯೋಗವನ್ನು ಚೆನ್ನಾಗಿ ಅರಿತಿದ್ದಾರೆ, ಇನ್ನು ಈ ರೀತಿ ಕೊಡಬೇಕಾಗಿಲ್ಲ ಎಂದು ಯಾರೋ ಮಹನೀಯರು ಸರ್ಕಾರಕ್ಕೆ ಹೇಳಿದರಂತೆ! ಬಾಕಿ ಕೆಲಸಗಳಿಗೆ ಕೊಟ್ಯಾಂತರ ರೂಪಾಯಿ ಖರ್ಚಾದರೂ ತೊಂದರೆಯಿಲ್ಲ, ಆದರೆ ಈ ದೇಶದ ಜನರಿಗೆ, ತಮ್ಮ ಸುಖವನ್ನು ತ್ಯಾಗಮಾಡಿ ಜನತೆಗೆ ಉಪಕಾರ ಮಾಡುವ ರೈತ ಜನರಿಗೆ ಈ ಅನುಕೂಲ ಕೊಟ್ಟರೆ ಕಷ್ಟವೆಂದು ಹೇಳುತ್ತಾರೆ! ಅಧಿಕಾರವರ್ಗಕ್ಕೆ ಎಲ್ಲಿಯವರೆಗೆ ಈ ಸಂಬಳಗಳನ್ನು ಮಿತಿಮೀರಿ ಕೊಡುತ್ತೇವೋ ಅಲ್ಲಿಯವರೆಗೆ ಅವರಿಗೆ ರೈತರ ವಿಷಯದಲ್ಲಿ ಅಭಿಮಾನ ಬರುವುದಿಲ್ಲ. ಟ್ರೈಜರಿ ಬೆಂಚಿನಲ್ಲಿರುವ ಮಂತ್ರಿಗಳು ಕನಿಷ್ಠ ಮತ್ತು ಪರಮಾವಧಿ ಸಂಬಳದ ಅಂತರ ಒಂದಕ್ಕೆ ಮೂವತ್ತಕ್ಕಿಂತ ಮೀರಿರಬಾರದೆಂದು ಹೇಳಿದರು. ಆದರೆ ಈಗಲೂ ಒಂದಕ್ಕೆ ನೂರರಷ್ಟಿದೆ. ಇದು ಅವರಿಗೆ ಸಂತೋಷವೆಂದು ಕಾಣುತ್ತದೆ. ಆದರೆ ಬೆಳೆಯತಕ್ಕ ರೈತರಿಗೆ ಸಹಾಯ ಮಾಡುವುದಕ್ಕೆ ಅವರಿಗೆ ಇಷ್ಟವಿಲ್ಲ

4 P.M.

ಎಲ್ಲಿಯವರೆಗೆ ಸರಿಯಾಗಿ ಮನಸ್ಸಿಟ್ಟು ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೆ ಸರಿಯಾದ ಕೆಲಸವಾಗುವುದಿಲ್ಲ. ಹಣ ಸಕಾಲದಲ್ಲಿ ಒದಗಿ ಅದು ಖರ್ಚಾಗಿ ಸದುಪಯೋಗ ವಾಗಬೇಕು. ಇಲ್ಲದಿದ್ದರೆ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಖರ್ಚು ಮಾಡಬೇಕಾಗಿರುವ ಕಾಲಾವಧಿಯೊಳಗೆ ಒದಗಿಸಿ ಪ್ರಜಾಪ್ರತಿನಿಧಿಗಳು ಹೇಳುವುದನ್ನು ಗಮನಿಸಿ ಕಾರ್ಯರೂಪಕ್ಕೆ ಅದನ್ನು ತರಬೇಕು. ಹಣ ಸಕಾಲದಲ್ಲಿ ಒದಗದಿದ್ದರೆ ಅದು ಸರ್ಕಾರಿ ಉದ್ಯೋಗಸ್ತರ ತಪ್ಪಲ್ಲ. ಸಾಕಷ್ಟು ಕಾಲಾವಕಾಶವಿದ್ದರೆ ಅವರು ಹಣ ಖರ್ಚುಮಾಡಿ ಕಾರ್ಯ ನಡೆಸುತ್ತಾರೆ. ಆಹಾರ ಉತ್ಪಾದನಾ ಶಾಖೆಯವರು, ವ್ಯವಸಾಯಾಭಿವೃದ್ಧಿ ಶಾಖೆಯವರು, ಪಂಚವಾರ್ಷಿಕ ಯೋಜನಾ ಶಾಖೆಯವರು ಕಷ್ಟ ಪಟ್ಟು ನಿಜಾಂಶ ತಿಳಿಸಿದ್ದಾರೆ. ಆದರೆ ಅದು ಕಾರ್ಯರೂಪಕ್ಕೆ ಬರಬೇಕು. ಫಿಜಿಕಲ್ಲಾಗಿ, ಫ್ರಾಕ್ಟಿಕಲ್ಲಾಗಿ ಅದನ್ನು ಇಂಪ್ಲಿಮೆಂಟ್ ಮಾಡುತ್ತಿದ್ದಾರೆಯೇ ಎಂಬುದನ್ನು ಅವಲೋಕಿಸಬೇಕು. ಬರೀ ಪುಸ್ತಕದಲ್ಲಿದ್ದರೆ ಪ್ರಯೋಜನವಿಲ್ಲ. ಸರಿಯಾಗಿ ಆಹಾರದ ಉತ್ಪನ್ನವಾಗುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ರೈತನಿಗೆ ಸಹಾಯವಾಗುವಂತೆ ಏನು ಏರ್ಪಾಡು ಬೇಕೋ ಅದನ್ನು ಮಾಡಬೇಕಾದದ್ದು ಸರ್ಕಾರದ ಕರ್ತವ್ಯ. ಅದಕ್ಕೆ ಸಾಕಷ್ಟು ಗಮನ ಕೊಡಬೇಕು.

ಈಗಾಗಲೇ ಜತ್ತಿನಮಿತಿ ವರದಿಯ ವಿಚಾರದಲ್ಲಿ, ಭೂನುಧಾರಣೆ ವಿಚಾರದಲ್ಲಿ ಅನೇಕರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಈ ಸಂಬಂಧದಲ್ಲಿ ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದು ಮಾತ್ರ ಹೇಳುತ್ತೇನೆ. ಬಾಕಿ ವಿಚಾರಗಳನ್ನು ಮುಂದೆ ಸಮಯಬಂದಾಗ ತಿಳಿಸುತ್ತೇನೆ. ಈ ದಿವಸ ಇಡೀ ಇಂಡಿಯಾದೇಶದಲ್ಲಿ ಶ್ರೀ ಪಂಜಾಬ್ ರಾವ್ ದೇಶ್‌ಮುಖ್‌ರವರು ರೈತಾಪಿಜನರ ಹಿತವನ್ನು ಸ್ವಲ್ಪಮಟ್ಟಿಗೆ ಕಾಯುತ್ತಿದ್ದಾರೆ. ಸಹಕಾರ ಮತ್ತು ವ್ಯವಸಾಯ ಇಲಾಖೆಗಳು ಒಬ್ಬ ಮಂತ್ರಿಗಳ ಖಾತೆಯಲ್ಲಿರಬೇಕು ಎಂದು ಒಬ್ಬಮಿತ್ರರು ಹೇಳಿದರು. ವ್ಯವಸಾಯದ ಬಾಬುಗಳು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದವರೆಗೂ ಮುಖ್ಯಮಂತ್ರಿಗಳ ಅಧೀನದಲ್ಲಿರಬೇಕು. ಅವರು ಖುದ್ದಾಗಿ ಆ ಬಾಬಿಗೆ ಗಮನ ಕೊಡಬೇಕು. ಈಗಿರುವ ಹಾಗೆ ವ್ಯವಸಾಯ ಮಂತ್ರಿಗಳಿಂದ ನಿರೀಕ್ಷಿಸುವಷ್ಟು ಕೆಲಸ ಮಾಡುವುದು ಕ್ಯಾಗುವುದಿಲ್ಲ. ಇದು ಈಗಾಗಲೇ ಗೊತ್ತಾಗಿದೆ. ಮಂತ್ರಿಯಾದವರು ಚೈತನ್ಯ ಪೂರ್ಣರಾಗಿರಬೇಕು, ಪೂರ್ಣವಾಗಿ ಮನಸ್ಸಿಟ್ಟು ಧೈರ್ಯವಾಗಿ ಕೆಲಸ ಮಾಡಬೇಕು.

ರಿಪರ್ಟ್ ಇಲಾಖೆ ಬಹಳ ಮುಖ್ಯವಾದ ಒಂದು ಭಾಗ. ಈ ದಿವಸ ನಾವು ದೇಶದಲ್ಲಿ ಯಾವರೀತಿ ಎಲ್ಲಾ ಬಾಬುಗಳಲ್ಲೂ ಮುಂದೆ ಹೋಗುತ್ತಿದ್ದೇವೋ ಅದೇ ರೀತಿ ವ್ಯವಸಾಯದಲ್ಲೂ ಮುಂದುವರಿಯದಿದ್ದರೆ ಗತ್ಯಂತರವಿಲ್ಲ. ಹತ್ತು ವರ್ಷದಿಂದ ಈ ವ್ಯವಸಾಯದ ಇಲಾಖೆ ಸ್ಪೆಷಲಿಫಿಕ್ ಸೆಕ್ಷನಲ್ಲಿ ಹೊಸ ರಿಪರ್ಟ್ ಏನಾಗಿದೆ, ಅದರಿಂದ ಜನರಿಗೇನು ಅನುಕೂಲವಾಗಿದೆ ಎಂಬುದನ್ನು ನೋಡಬೇಕು. ರಾಗಿ ವಿಷಯ ತೆಗೆದು ಕೊಂಡರೆ ಹಿಂದೆ ಯಾವರೀತಿ ಬೆಳೆಯುತ್ತಿತ್ತೋ ಈ ದಿವಸವೂ ಅದೇರೀತಿ ಬೆಳೆಯುತ್ತಿದೆ. ಕಡ್ಲೇಕಾಯಿ, ಎಣ್ಣೆ ಬೀಜಗಳು, ಕ್ಯಾಷ್ ಕ್ರಾಪ್ಸ್ ವಗೈರೆ ಸಾಕಷ್ಟು ಉತ್ಪತ್ತಿಯಾಗುತ್ತಿಲ್ಲ. ಬತ್ತ, ಕ್ಯಾಷ್ ಕ್ರಾಪ್ಸ್, ಮತ್ತು ಹಾರ್ಟಿಕಲ್ಚರ್‌ಗೆ ಸಾಕಾದಷ್ಟು ಗಮನ ಕೊಡಬೇಕು. ಇದಕ್ಕೆ ಪೂರ್ಣವಾಗಿ ಮನಸ್ಸು ಕೊಡದಿದ್ದರೆ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆ

ಯಶಸ್ವಿಯಾಗುವುದಿಲ್ಲ. ನಾನು ರೈತನಾಗಿ ನನ್ನ ಅನುಭವ ಹೇಳುತ್ತಿದ್ದೇನೆ. ಎಕನಾಮಿಕ್ ಡೆವಲಪ್‌ಮೆಂಟ್ ಆಗುವವರೆಗೆ ಸಾಕಾದಷ್ಟು ಪ್ರತಿಫಲ ಬರುವುದಿಲ್ಲ, ಸಾಕಾದಷ್ಟು ಆಹಾರ ಪದಾರ್ಥಗಳನ್ನು ಬೆಳೆದು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ವ್ಯವಸಾಯವನ್ನು ಲಾಭದಾಯಕವನ್ನಾಗಿ ಮಾಡಿದ ಹೊರತು ಆ ಉದ್ಯೋಗದಲ್ಲಿ ತೊಡಗಿರುವವರು ಉದ್ಧಾರವಾಗುವುದಿಲ್ಲ. ಆಹಾರ ಪದಾರ್ಥಗಳ ಬೆಳವಣಿಗೆಯಿಂದ ಸಾಕಷ್ಟು ವರಮಾನ ಬಾರದಿದ್ದರೆ ಸ್ವಲ್ಪ 'ಬಿಸಿನೆಸ್‌ಲೈಕ್' ಆಗಿ ಮಾಡಿ, ಹಾಕಿರುವ ಬಂಡವಾಳಕ್ಕೆ ತಕ್ಕಷ್ಟು ಪ್ರತಿಫಲ ಬಾರದಿದ್ದರೆ ಆಹಾರ ಪದಾರ್ಥಗಳನ್ನು ಬೆಳೆಯುವುದನ್ನು ನಿಲ್ಲಿಸಿ ಅದಾಯ ಬರುವ ಕಮರ್ಷಿಯಲ್ ಕ್ರಾಪ್ಸ್ ಬೆಳೆಯಿರಿ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಎಂದು ಜನರಿಗೆ ರೈತರ ಪ್ರತಿನಿಧಿಯಾಗಿ ನಾನು ಹೇಳಿದ್ದೇನೆ. ಹಾಗೆ ಹೇಳುವಾಗ ನನ್ನ ಮನಸ್ಸಿಗೆ ನೋವಾಯಿತು. ಈ ದಿವಸ ಹೊರದೇಶದಿಂದ ಆಹಾರ ಪದಾರ್ಥಗಳನ್ನು ತರಿಸುತ್ತಿರುವಾಗ ಈ ರೀತಿ ಜನರಿಗೆ ಹೇಳುವುದು ದೇಶದ್ರೋಹವೆಂದು ತಿಳಿದಿದ್ದರೂ ಕೂಡ ವಿಧಿಯಿಲ್ಲದೆ ಹಾಗೆ ಹೇಳಬೇಕಾಯಿತು. ವರ್ಷಕ್ಕೊಮ್ಮೆ ಕಂದಾಯ ಕೊಡುವುದಕ್ಕೆ ಕೂಡ ಯೋಗ್ಯತೆಯಿಲ್ಲದಿರುವವನ ಕಷ್ಟ ನೀಗದೆ ಆಹಾರದ ಬೆಳೆ ಬೆಳೆದು ಕೊಡಿ ಎಂದು ಹೇಳಿದರೆ ಹೇಗೆ ಬೆಳೆದು ಕೊಡುವುದು? ಈ ದಿವಸ ಮಂತ್ರಿಗಳಿಗೂ ಈ ವಿಚಾರ ಚೆನ್ನಾಗಿ ಗೊತ್ತಿದೆ. ಬೆಳೆಗಳ ಉತ್ಪತ್ತಿಗಾಗಿ ಖರ್ಚುಮಾಡುವ ಹಣ ಕೂಡ ಬಾರದಿದ್ದರೆ ಗತ್ಯಂತರವಿಲ್ಲ. ಅಷ್ಟಾದರೂ ಬರುವಹಾಗೆ ಮಾಡದಿದ್ದರೆ ಹೀನಸ್ಥಿತಿ ಇದ್ದೇ ಇರುತ್ತದೆ.

*ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣ ಬೆಳಗೊಳ).—ಸ್ವಾಮಿ, ನಾನು ರೈತನ ಮಗ. ಮುಖ್ಯವಾಗಿ ನಾವು ಮುಂದೆ ಬರಬೇಕಾದರೆ ರೈತರು ಬೆಳೆಯುವ ಪದಾರ್ಥಗಳ ವಿಚಾರದಲ್ಲಿ ಹೆಚ್ಚಾಗಿ ರಿಸರ್ಚ್ ಮಾಡಲು ಅವಕಾಶ ಮಾಡಬೇಕು ಮತ್ತು ಹಣ ಸಹಾಯ ಸಾಕಷ್ಟು ಒದಗಿಸಬೇಕು. ನಮ್ಮ ಹಣಕಾಸಿನ ಮಂತ್ರಿಗಳೂ ಸಹ ರೈತರ ಮಕ್ಕಳು. ಅವರು ನಮಗೆ ಎರಡುಕೋಟಿ ರೂಪಾಯಿಗಳನ್ನು ಕೊಟ್ಟರೂ ವ್ಯವಸಾಯಕ್ಕೆ ಅದು ಬಹಳ ಕಡಮೆ. ವ್ಯವಸಾಯಕ್ಕೆ, ವ್ಯವಸಾಯದ ಸಂಶೋಧನೆಗೆ ರೈತರ ಪುರೋಭಿವೃದ್ಧಿಗೆ, ಹೊಸ ಮಾದರಿ ವ್ಯವಸಾಯಕ್ಕೆ ಸುಮಾರು ಹತ್ತುಕೋಟಿ ರೂಪಾಯಿಗಳನ್ನಾದರೂ ಕೊಡಬೇಕೆಂದು ಹಿಂದಿನ ವರ್ಷವೇ ಹೇಳಿದೆ. ವ್ಯವಸಾಯ ಮಂತ್ರಿಗಳ ಜೊತೆಗೆ ಹಣಕಾಸಿನ ಮಂತ್ರಿಗಳೂ ಸೇರಿ ಇಬ್ಬರೂ ಸಹಾಯ ಮಾಡಿದರೆ ರೈತರು ಮುಂದುವರಿಯುವುದಕ್ಕೆ ಸಾಧ್ಯ. ಈಗ ಬಹಳ ದಿವಸಗಳಿಂದ ಎರಡು ಕೋಟಿ ಚಿಲ್ಲರೆಯನ್ನೇ ಒದಗಿಸುತ್ತಿದ್ದಾರೆ. ಹಣ ಕಡಮೆ ಕೊಟ್ಟರೆ ವ್ಯವಸಾಯಾಭಿವೃದ್ಧಿ ಮಾಡುವುದಕ್ಕೆ ಹೇಗೆ ಸಾಧ್ಯವೆಂಬುದು ಅರ್ಥವಾಗುತ್ತಿಲ್ಲ. ನಾವು ವ್ಯವಸಾಯದಲ್ಲಿ ಬಹಳ ಹಿಂದುಳಿದಿದ್ದೇವೆ. ದೇಶದಲ್ಲಿ ಖರ್ಚು ಜಾಸ್ತಿಯಾಗುತ್ತಿದೆ, ಆದಾಯ ಕಡಮೆಯಾಗುತ್ತಿದೆ. ವ್ಯವಸಾಯದಲ್ಲಿ ನಿರತನಾಗಿರುವ ರೈತನ ಬೆನ್ನು ಮೂಳೆ ಕೆಲಸ ಮಾಡಿ ಸಣ್ಣದಾಗುತ್ತಿದೆ. ರೈತ ಆಹಾರವನ್ನು ಉತ್ಪತ್ತಿ ಮಾಡಲು ಶಕ್ತಿಯಿಲ್ಲದೆ ಸಾಲ ಮಾಡಿ ಬಹಳ ಹೀನಸ್ಥಿತಿಗೆ ಬರುತ್ತಿದ್ದಾನೆ. ಅಮೇರಿಕಾದಲ್ಲಿ ಈ ದಿವಸ ಬೇಕಾದಷ್ಟು ರಿಸರ್ಚ್ ಮಾಡಿ, ಎಲ್ಲ ರೀತಿಯ ಸಹಾಯವನ್ನೂ ನೀಡಿ ವ್ಯವಸಾಯಗಾರರಿಗೆ ಬಡ್ಡಿ ಇಲ್ಲದೆ ಸಾಲವನ್ನೊದಗಿಸುತ್ತಿದ್ದಾರೆ. ಅಲ್ಲಿನ ವ್ಯವಸಾಯಗಾರರು ಇಡೀ ಅಮೇರಿಕಾಕ್ಕೆ ಆಗುವಷ್ಟು ಬೆಳೆದು ನಮಗೂ ಸಹ ಒದಗಿಸುವಷ್ಟು ಶಕ್ತಿವಂತರಾಗುವದಕ್ಕೆ ಕಾರಣವಾಗಿದೆ. ಅಲ್ಲಿ ಪ್ರತಿಯೊಂದು ಭಾಗದಲ್ಲೂ ಪೂರ್ಣವಾಗಿ ಸಹಾಯ ಮಾಡುತ್ತಿದ್ದಾರೆ. ಅದೇ ಇಲ್ಲಿ ನಮಗೆ ಸಾಲ ಕೊಟ್ಟರೆ ಅದಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಉದಾಹರಣೆ ಹೇಳುವುದಾದರೆ ಮಧ್ಯವರ್ತಿ ಸಾಲಕ್ಕೆ ಶೇಕಡ 6¼ ರೂಪಾಯಿಗಳ ಬಡ್ಡಿ ಕೊಡಬೇಕು. ಈಗ ಅಪೆಕ್ಸ್ ಬ್ಯಾಂಕ್ ಇದೆ. ಅದರಿಂದ ನಮಗೆ ಸಹಾಯ ಒದಗಿಸಬೇಕಾಗಿಲ್ಲ. ರಿಸರ್ವ್ ಬ್ಯಾಂಕ್ ಶೇಕಡ 1½ ಯಂತೆ ಕೊಡುವುದನ್ನು ಡಿಸ್ಟ್ರಿಕ್ಟ್ ಬ್ಯಾಂಕಿಗೆ ಕೊಡಿ. ಆ ಬ್ಯಾಂಕಿನವರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆ. ಅದರಿಂದ ರೈತರಿಗೆ ಹೆಚ್ಚು ಸಾಲ ಸಿಕ್ಕಿ ಕಡಮೆ ಬಡ್ಡಿ ಬೀಳುತ್ತದೆ. ಈಗ ಮಧ್ಯೆ ಏಜೆಂಟರೇಕೆ? ಅಪೆಕ್ಸ್ ಬ್ಯಾಂಕ್ ಮೂಲಕ ರಿಸರ್ವ್ ಬ್ಯಾಂಕ್ ಏಕೆ ಹಣ ಸಹಾಯ ಒದಗಿಸುವುದು? ಈಗ 19 ಡಿಸ್ಟ್ರಿಕ್ಟ್ ಗಳಿವೆ, 19 ಡಿಸ್ಟ್ರಿಕ್ಟ್ ಬ್ಯಾಂಕುಗಳಿವೆ. ಅವುಗಳ ಮೂಲಕ ನಮಗೆ ಸಾಲವನ್ನೊದಗಿಸಿ. ಮಧ್ಯವರ್ತಿ ಸಾಲ ಐದು ವರ್ಷಗಳಿಗೆ ಇದೆ. ಅದನ್ನು ಕನಿಷ್ಟಪಕ್ಷ ಹತ್ತು ವರ್ಷಗಳಾದರೂ ಕೊಡಬೇಕು. ಆ ರೀತಿ ಸಾಲ ಕೊಟ್ಟರೆ ಒಳ್ಳೆಯದು. ಎತ್ತುಗಳನ್ನು ಕೊಳ್ಳುವುದಕ್ಕೆ, ಜಮೀನು ಆಬಾದುಮಾಡುವುದಕ್ಕೆ ಬಡ್ಡಿಯಿಲ್ಲದೆ ಸಹಾಯ ಮಾಡಬೇಕು. ಹಾಗೆ ಮಾಡಿದರೆ ಆಗ ಜನ ಮುಂದೆ ಬರುತ್ತಾರೆ. ಅವರಿಗೆ ಉತ್ಸಾಹ ಬರುತ್ತದೆ. ಬಡ್ಡಿ ಹೊರೆ ಹೆಚ್ಚು ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ರಿಸರ್ಚ್‌ಗಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ರಿಸರ್ಚ್ ಫಾರಂ ತೆರೆಯಬೇಕು. ಅದರಿಂದ ಸುತ್ತುಮುತ್ತಲಿರುವ ರೈತರನ್ನು ವರ್ಷಕ್ಕೆ ಎರಡುಸಲವಾದರೂ ಕರೆಸಿ ಅವರಿಗೆ ಹೊಸ ಮಾದರಿ ವ್ಯವಸಾಯ ವಿಧಾನವನ್ನು ತಿಳಿಸಿ ಅದರಂತೆ ಮಾಡಲು ಅನುಕೂಲ ಮಾಡಬಹುದು. ಮುಂದಿನ ವರ್ಷ ವ್ಯವಸಾಯ ಬಾಬಿಗೆ 2,14,27,000 ರೂಪಾಯಿ ಬಜೆಟ್ಟಿನಲ್ಲಿ ಒದಗಿಸಲಾಗಿದೆ. ಆದರೆ ಇದನ್ನು ಕನಿಷ್ಠ ಐದುಕೋಟಿ ರೂಪಾಯಿಗಳನ್ನಾದರೂ ಮಾಡಬೇಕು. ಇನ್ನೊಂದು ಹೆಚ್ಚು ಮಹತ್ವದ ವಿಷಯ ಎಂದರೆ ವ್ಯವಸಾಯ ಇನ್‌ಷ್ಯೂರನ್ಸ್ ಅವಶ್ಯವಾಗಿ ಮಾಡಬೇಕು. ಇನ್‌ಷ್ಯೂರನ್ಸ್ ಸ್ಕೀಮ್ ಮಾಡದೇ ಇದ್ದರೆ ಖಂಡಿತವಾಗಿ ವ್ಯವಸಾಯ ಮುಂದೆ ಬರಲಿಕ್ಕೆ ಆಗುವುದಿಲ್ಲ. ಇದಕ್ಕೆ ರೈತರು ಖಂಡಿತವಾಗಿ ಒಪ್ಪಿಕೊಳ್ಳುತ್ತಾರೆ. ದಯವಿಟ್ಟು ಮಾಡಬೇಕು ಎಂದು ನಾನು ಹೇಳುತ್ತೇನೆ. ಇನ್ನು ಫಿಷರೀಸ್ ಅಂದರೆ ಮೀನುಗಾರಿಕೆಯ ವಿಷಯದಲ್ಲಿ ಹೇಳುವದಾದರೆ, ಈ ಶಾಖೆ ಇನ್ನೂ ವಿಸ್ತಾರವಾಗಿ ಬೆಳೆಯಬೇಕು. ಈ ವರ್ಷ 17 ಲಕ್ಷ ರೂಪಾಯಿ ಒದಗಿಸಲಾಗಿದೆ. ಇನ್ನೂ ಹೆಚ್ಚು ಹಣ ಒದಗಿಸಬೇಕು. Non-gazetted superintendent post ನ್ನು Gazetted officer ನ್ನಾಗಿ ಮಾಡಬೇಕು. ಇನ್ನೂ ಹೆಚ್ಚು ಜವಾಬ್ದಾರೀ ವಹಿಸಿ ರಿಸರ್ಚ್ ಕೆಲಸ ಮಾಡಲು ಅನುಕೂಲಮಾಡಿ ಕೊಡಬೇಕು.

ಶ್ರೀ ಎಚ್. ಎಸ್. ರುದ್ರಪ್ಪ.—ಗೆಜೆಟೆಡ್ ಆಫೀಸರ್ ಮಾಡಿದರೆ ಹೆಚ್ಚು ಮೀನುಗಳು ದೊರೆಯುತ್ತವೇನು?

ಶ್ರೀ ಎನ್. ಜಿ. ನರಸಿಂಹೇಗೌಡ.—ಇನ್ನು ಸೀನಿಯಾರಿಟಿ ವಿಷಯ ಹೇಳಬೇಕಾಗಿದೆ. ಸೀನಿಯಾರಿಟಿಯನ್ನು ಸರಿಯಾಗಿ ಗೊತ್ತುಮಾಡಿ ಆ ಅಧಿಕಾರಿಯನ್ನು ಗೆಜೆಟೆಡ್ ಆಫೀಸರ್ ಮಾಡಬೇಕು. ಫಿಷರೀಸ್ ಶಾಖೆಗೆ ಹೆಚ್ಚು ಉತ್ತೇಜನ ಕೊಟ್ಟು ಈ ಶಾಖೆಯನ್ನು ವಿಸ್ತರಿಸಬೇಕು. ಮಾನ್ಯ ಮಂತ್ರಿಗಳು ನಿಗಾ ಕೊಡುತ್ತಾರೆಂದು ನಾನು ನಂಬಿದ್ದೇನೆ.

(ಶ್ರೀ ಎಚ್. ಜಿ. ನರಸಿಂಹೇಗೌಡ)

ಇನ್ನು ವೆಟೆರಿನರಿ ವಿಷಯ. ಅಗ್ರಿಕಲ್ಚರ್ ಮತ್ತು ವೆಟೆರಿನರಿ ಎರಡೂ ಕೂಡಿ ನಡೆಯಬೇಕಾಗುತ್ತದೆ. ವ್ಯವಸಾಯಕ್ಕೆ ದನಗಳು ಮುಖ್ಯವಾಗಿ ಬೇಕು. ಮೊದಲು ಒಳ್ಳೆಯ ವ್ಯವಸಾಯ ಮಾಡುವುದಕ್ಕೆ ದನಗಳ ಯೋಗಕ್ಷೇಮ ತೆಗೆದುಕೊಳ್ಳಲಿಕ್ಕೆ ಬೇಕು. ನಮ್ಮ ದೇಶದಲ್ಲಿ ದನಗಳ ಹೊಸ ತಳಿ ಜಾಸ್ತಿಯಾಗಬೇಕು. ಅಮೃತ ಮಹಲ್ ಕಾವಲದಲ್ಲಿ ಒಬ್ಬ ರಿನರ್ಟ್ ಆಫೀಸರ್ ಇದ್ದಾರೆ. ಅವರು ಹೊರದೇಶಕ್ಕೆ ಹೋಗಿ ಬಂದು ಯಾವ ಪ್ರಾಮೀಣ್ಯತೆಯನ್ನೂ ತೋರಿಸಿಲ್ಲ. ದನಗಳೂ ಸಹ ಮನುಷ್ಯನಹಾಗೆ ಆರೋಗ್ಯದಿಂದ ಇರಬೇಕು. ನಮ್ಮ ದೇಶದಲ್ಲಿ ವೆಟೆರಿನರಿ ಆಸ್ಪತ್ರೆಗಳು ಬಹಳ ಕಡಿಮೆ ಇವೆ. ಪ್ರತಿಯೊಂದು ಡಿಪ್ಟ್ರಿಕ್ಟಿನಲ್ಲಿ ಪ್ರತಿಯೊಂದು ತಾಲ್ಲೂಕು, ಪ್ರತಿಯೊಂದು ಹೋಬಳಿಗೆ ಒಂದು ವೆಟರಿನರಿ ಆಸ್ಪತ್ರೆಯನ್ನು ಕಡ್ಡಾಯವಾಗಿ ಕೊಡಬೇಕು. ಹಾಗಾದರೆ ಈ ಮೂಕ ಪ್ರಾಣಿಗಳ ಕಾಯಿರೆ ನಿರ್ಮಾಲ ಮಾಡಲು ಅವಕಾಶ ವಾಗುತ್ತದೆ. ಎಷ್ಟೋ ಆಸ್ಪತ್ರೆಗಳಲ್ಲಿ ಇಂಜೆಕ್ಷನ್ ಇರುವುದಿಲ್ಲ. ಅವಶ್ಯವಿರುವ ಇಂಜೆಕ್ಷನ್ ದೊರೆಯುವ ಹಾಗೆ ವ್ಯವಸ್ಥೆ ಮಾಡಬೇಕು. ವೆಟೆರಿನರಿ ಆಸ್ಪತ್ರೆಗಾಗಿ ಬಾಗೂರ ಜನರು ಕಟ್ಟಡ ಕೊಡುತ್ತೇವೆಂದು ಒಪ್ಪಿದ್ದಾರೆ. ಆದ್ದರಿಂದ ದಯವಿಟ್ಟು ಒಂದು ವೆಟೆರಿನರಿ ಆಸ್ಪತ್ರೆಯನ್ನು ಬಾಗೂರಿಗೆ ಕೊಡಬೇಕೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಸಿ. ಎಸ್. ಹುಲಕೋಟಿ (ಮುಂಡರಗಿ).— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಭೆಯಮುಂದೆ ಡಿಬೇರ್ಟಿಗೆ ಬಂದಿರುವ ಡಿಮ್ಯಾಂಡ್ 25 ಮತ್ತು ಡಿಮ್ಯಾಂಡ್ 23 ಇವುಗಳಲ್ಲಿ ವ್ಯವಸಾಯದ ಮಹತ್ವದ ಬಗ್ಗೆ ಅನೇಕ ಮಿತ್ರರು ಈಗಾಗಲೇ ಮಾತನಾಡಿದ್ದಾರೆ. ವ್ಯವಸಾಯ ಮಾಡತಕ್ಕ ಬಹಳ ಜನರು ನಮ್ಮ ದೇಶದಲ್ಲಿ ಇದ್ದಾರೆ ಎಂದು ನನ್ನ ಮಿತ್ರರು ಹೇಳಿದ್ದಾರೆ. ಈಬಗ್ಗೆ ಹೆಚ್ಚು ಮಾತನಾಡಲು ನನಗೆ ಇಚ್ಛೆಯಿಲ್ಲ. ಮುಖ್ಯವಾಗಿ ನಮಗೆ ವ್ಯವಸಾಯ ಖಾತೆಗಳ ಮಾಹಿತಿ ಪುಸ್ತಕಗಳನ್ನು ಓದಗಿಸಿ ಕೊಟ್ಟರೆ ಬಹಳ ಚೆರೋ ಆಗುತ್ತದೆಂದು ನನಗೆ ಅನಿಸುತ್ತದೆ. ಬಡ್ಜೆಟ್ ಪುಸ್ತಕದಲ್ಲಿ 168ನೇ ಪುಟದಿಂದ 248ನೆಯ ಪುಟದವರೆಗೆ ಸಾಕಷ್ಟು ಮಾಹಿತಿ ಕೊಟ್ಟು ಎಲ್ಲ ಸಂಗತಿಗಳನ್ನೂ ವಿವರಿಸಿದ್ದಾರೆ. Food production, agricultural development ಇದರ ಬಗ್ಗೆ ಅಂಕಿ ಅಂಶಗಳನ್ನು ಪುಸ್ತಕದಲ್ಲಿ ಕೊಟ್ಟಿದ್ದಾರೆ. ನಕಾಶೆ ಸಹ ಓದಗಿಸಿದ್ದಾರೆ. ಎಷ್ಟು ಎಕರೆ ಸಾಗುವಳಿಯಾಗಿದೆ ಎಂಬುದನ್ನು ತೋರಿಸಿದ್ದು ನಂತೋಷ. ಇಷ್ಟೇಅಲ್ಲದೆ Mysore Agricultural Calendar 1957-1958 ಸಹ ಓದಗಿಸಿರುತ್ತಾರೆ. ಇದು ಬಹಳ ನಂತೋಷದ ಸಂಗತಿ. ಈ ಪುಸ್ತಕವನ್ನು ನಾನು ಓದಿ ನೋಡಿದ್ದೇನೆ. ಧಾನ್ಯ ಮತ್ತು ಇತರ ವಿಷಯಗಳ ಸಲುವಾಗಿ ಸಾಕಷ್ಟು ಮಾಹಿತಿ ಕೊಟ್ಟಿದ್ದಾರೆ. ಒಂದೇ ಒಂದು ವಿಷಯ ಮಾತ್ರ ವ್ಯವಸಾಯ ಖಾತೆಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಇದಕ್ಕೆ ವ್ಯವಸಾಯ ಖಾತೆ ಹೆಚ್ಚು ಗಮನ ಕೊಟ್ಟಂತೆ ನನಗೆ ಕಾಣುವದಿಲ್ಲ. ಈ ಪುಸ್ತಕದಲ್ಲಿ ಆಹಾರ ಧಾನ್ಯಗಳ ಮಾಹಿತಿ ವಿಷಯ ಇದೆ. ನಮ್ಮ ಭಾಗದಲ್ಲಿ ಗೋಧಿಬೆಳೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತದೆ. ಧಾರವಾಡ ಜಿಲ್ಲೆಯ ಪೂರ್ವಭಾಗದಲ್ಲಿ ಬಹಳ ದೊಡ್ಡ ಬೆಳೆಬರುತ್ತದೆ. ವಿಜಾಪೂರ ಜಿಲ್ಲೆಯಲ್ಲಿಯೂ ಬರುತ್ತದೆ ಬೆಳಗಾಂವ ಜಿಲ್ಲೆಯ ಪೂರ್ವಭಾಗ ಹಾಗೂ ರಾಯಚೂರು ಜಿಲ್ಲೆ, ಗುಲಬರ್ಗಾ ಜಿಲ್ಲೆಯಲ್ಲಿ ಗೋಧಿಯ ಬೆಳೆ ದೊಡ್ಡ ಪ್ರಮಾಣದಲ್ಲಿ ಬರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸ್ವಲ್ಪ ಇರಬಹುದೆಂದು ನನಗೆ ಅನಿಸುತ್ತದೆ. ಬಳ್ಳಾರಿಯಲ್ಲಿಯೂ ಇದೆ. ಶಿವಮೊಗ್ಗಾ ಜಿಲ್ಲೆಯಲ್ಲಿಯೂ ಇದೆ. ಗೋಧಿ ಒಂದು ದೊಡ್ಡ ಮತ್ತು ಮಹತ್ವದ ಪೀಕು ಆಗಿದೆ. ಆಹಾರಧಾನ್ಯಗಳಲ್ಲಿ ಬಹಳ ಸತ್ವಯುಕ್ತವಾದ ಪೀಕ ಆಗಿದೆ. ಇದರ ಅಂಕಿ ಅಂಶಗಳನ್ನು ಹೇಳಬೇಕಾಗಿದೆ. ಮೈಸೂರು ವ್ಯವಸಾಯದ ಪಂಚಾಂಗ 1957-58, ಪುಟ ನಾಲ್ಕರಲ್ಲಿ ಈ ವಿಷಯ ಕೊಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಗೋಧಿ ಬೆಳೆಯತಕ್ಕ ಎಷ್ಟು ಎಕರೆ ಭೂಮಿ ಎಂಬುದನ್ನು ಕೊಟ್ಟಿಲ್ಲ. ಧಾರವಾಡ ಜಿಲ್ಲೆಯಲ್ಲಿ 2,71,000 ಎಕರ ಎಂದು ಕೊಟ್ಟಿದೆ. ಬೆಳಗಾಂ ಜಿಲ್ಲೆಯ ಅಂಕಿ ಅಂಶ ವಿವರಿಸಿಲ್ಲ. ಬಿಜಾಪುರ ಜಿಲ್ಲೆಯಲ್ಲಿ 2,10,339 ಎಕರೆಗಳು ಎಂದು ಕೊಟ್ಟಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಗೋಧಿ ಬೆಳೆಯುತ್ತದೆ ಎಂಬುದು ನನಗೆ ಗೊತ್ತಿದೆ. ಆದರೆ ಅಂಕಿ ಅಂಶ ಕೊಟ್ಟಿಲ್ಲ. ಗುಲ್‌ಬುರ್ಗಾ 82,498 ಬೀದರ್, 24,678, ಬಳ್ಳಾರಿ 6,581 ಎಕರೆ ಎಂದು ಕೊಡರಾಗಿದೆ. ಇವು 1956-57ನೇ ಸಾಲಿಗೆ ಸಂಬಂಧಪಟ್ಟ ಅಂಕಿ ಅಂಶಗಳು ಆಗಿವೆ. 1957-58ನೇ ವರ್ಷದ ಬಗ್ಗೆ ಅಂಕಿಗಳು ದೊರೆತಿಲ್ಲ. ಅವುಗಳನ್ನು ದೊರಕಿಸಲು ಪ್ರಯತ್ನ ಮಾಡಬೇಕು. ರಾಯಚೂರ್ ಮತ್ತು ಬೆಳಗಾಂವ ಜಿಲ್ಲೆಗಳಲ್ಲಿ ನರ್ವೆಮಾಡಿ ಅಂಕಿ ಅಂಶಗಳನ್ನು ಓದಗಿಸಲು ಪ್ರಯತ್ನಮಾಡ ಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. 1956-57 ರವರೆಗೆ ಗೋಧಿ ಬೆಳೆಯತಕ್ಕ ಭೂಮಿಯ ಒಟ್ಟು ವಿಸ್ತೀರ್ಣ 7,27,009 ಎಕರೆಗಳು ಮತ್ತು 6,26,23 ಟನ್ ಉತ್ಪತ್ತಿ ಬರುತ್ತದೆಂದು ವಿವರಿಸಲಾಗಿದೆ. ಅದೇ ರೀತಿಯಾಗಿ ಈ ಪುಸ್ತಕದಲ್ಲಿ ಹತ್ತಿ, ರಾಗಿ, ಭತ್ತ, ಶೆಂಗಾ ಇವುಗಳ ವಿವರಗಳನ್ನು ನಕಾಶೆ ಸಹ ಕೊಟ್ಟು ಸ್ಪಷ್ಟವಾಗಿ ವಿವರಿಸಲಾಗಿದೆ. ಆದರೆ ಗೋಧಿಯ ಬಗ್ಗೆ ಏಕೆ ವಿವರಿಸಿಲ್ಲ ಎಂಬುದು ನನಗೆ ತಿಳಿಯುವುದಿಲ್ಲ. ಆದುದರಿಂದ ಗೋಧಿಯ ಬಗ್ಗೆ ಅಂಕಿ ಅಂಶಗಳನ್ನ ನಕಾಶವನ್ನ ಕೊಟ್ಟು ವಿವರಣೆ ಕೊಡಬೇಕೆಂದು ನಾನು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದಸಂಗತಿ ಇದೆ. ಬಡ್ಜೆಟ್ಟಿನಲ್ಲಿ Agricultural Experiment and Research ಸಲುವಾಗಿ 23,57,500 ರೂಪಾಯಿ ಓದಗಿಸಲಾಗಿದೆ. ಗೋಧಿಯ ಬಗ್ಗೆ ರಿನರ್ಟ್ ಏನೂ ಇಲ್ಲ. ಡೆವಲಪ್‌ಮೆಂಟ್ ಸ್ಕೀಮ್ ಇಲ್ಲ. ಇದು ಬಹಳ ವಿಷಾದದ ಸಂಗತಿ ಎಂದು ನನಗೆ ಅನಿಸುತ್ತದೆ. ಧಾರವಾಡ ಜಿಲ್ಲೆಯಲ್ಲಿ ಗದಗ ತಾಲ್ಲೂಕಿನಲ್ಲಿ ಬೆಳೆಯುವ ಹತ್ತಿ ಬಹಳ ಉತ್ತಮ ದರ್ಜೆಯದಾಗಿದೆ ಹಾಗೂ ಪ್ರಸಿದ್ಧವಿದೆ. ಹತ್ತಿ ಬೆಳೆಯನ್ನು ಸುಧಾರಿಸುವದಕ್ಕಾಗಿ ರಿನರ್ಟ್ ಮಾಡುವದಕ್ಕಾಗಿ ಕೆಲವು ತಜ್ಞರನ್ನು ನೇಮಕ ಮಾಡಬೇಕೆಂದು ನಾನು ಬಹಳ ಕಳಕಳಿಯಿಂದ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಗೋಧಿ ಬೆಳೆಯು ಪಂಥ ಪ್ರದೇಶಗಳಲ್ಲಿ ಎರಡು ವರ್ಷಕ್ಕೆ, ಮೂರು ವರ್ಷಕ್ಕೆ, ನಾಲ್ಕು ವರ್ಷಕ್ಕೆ ಒಂದು ತರಹದ ಭಂಡಾರ ರೋಗ ಅಥವಾ ಕುಂಕುಮ ರೋಗ ವೆಂದು ಗೋಧಿಯ ಬೆಳೆಗೆ ಬರುತ್ತದೆ. ಆಗ ಗೋಧಿಯ ಬೆಳೆಯಿಂದ ಯಾವ ಆದಾಯವೂ ಬರುವುದಿಲ್ಲ. ಹೀಗಾಗಿ ಯಾವ ತರಹದ ಎಷ್ಟುಕಾಳೂ ಬರುವುದಿಲ್ಲ. ಪೂರಾ ಬೆಳೆ ನಷ್ಟವಾಗುತ್ತದೆ. ಇಂತಹ ಕಂಟಕಗಳನ್ನು ನಿವಾರಣೆಮಾಡಲು ಒಂದು ರಿನರ್ಟ್ ಡೆವಲಪ್

ಮೆಂಟ್ ಸ್ಕೀಮನ್ನು ಕೈಗೊಳ್ಳುವುದು ಯುಕ್ತವೆಂದು ನನಗನ್ನಿಸುತ್ತದೆ. ಈ ಭಂಡಾರದ ರೋಗವನ್ನು ನಿವಾರಣೆಮಾಡಲು ಒಂದು ದೊಡ್ಡ ರಿನರ್ಟ್‌ಸ್ಪೇಷನ್ನನ್ನು ಜಾಗ್ರತೆ ತೆಗೆಯುವುದು ಬಹಳ ಒಳ್ಳೆಯದೆಂದು ನನಗನ್ನಿಸುತ್ತದೆ. ಮುಂಬೈರಾಜ್ಯದಲ್ಲಿ ಒಂದು ರಿನರ್ಟ್ ಸ್ಪೇಷ್ ಇತ್ತು. ನಾನಾತರಹದ ಗೋಧಿಗಳಿಗೆ ನಾನಾ ತರಹದ ರೋಗಗಳು ತಗುಲಿ ಅನೇಕ ಪ್ರಕಾರ ನಂಶೋದನೆಗೊಳಗಾಗಿದ್ದರೂ, ಈ ಒಂದು ರಿನರ್ಟ್ ಸ್ಪೇಷ್‌ನಿಂದ ಹೆಚ್ಚು ಉಪಯೋಗವಾಯಿತು. ಇಂಥಾದ್ದಕ್ಕೆ ಈ ವರ್ಷದಲ್ಲಿ ಬಡ್ಜೆಟ್ಟಿನಲ್ಲಿ ಹೆಚ್ಚು ಹಣವನ್ನು ಒದಗಿಸಿಲ್ಲ. ಏಷ್ಟೋ ಇಂತಹ ಮಹತ್ವವಾದಂಥ ಆಹಾರ ಧಾನ್ಯದ ರಿನರ್ಟ್ ಬಗ್ಗೆ ಸರ್ಕಾರದವರು ಇಷ್ಟು ಅಲಕ್ಷ್ಯ ಮಾಡಿದ್ದು ಅನ್ಯಾಯವೆಂದು ನನಗನ್ನಿಸುತ್ತದೆ. ವ್ಯವಸಾಯದ ನಲುವಾಗಿ ಎರಡು ಕೋಟಿ 14ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಗೋಧಿಯ ಬೆಳೆಯ ರಿನರ್ಟ್‌ನಬಗ್ಗೆ ಏನೂ ಹಣ ಒದಗಿಸಿಲ್ಲ. ಮುಂಬೈ ರಾಜ್ಯದ ಸಂಗತಿ ವಿಚಾರಮಾಡಬೇಕು.ನಮ್ಮಲ್ಲಿ ತುಂಗಭದ್ರಾ ರಿನರ್ಟ್‌ಸ್ಪೇಷ್ ಇತ್ಯಾದಿ ಅನೇಕ ರಿನರ್ಟ್ ಸ್ಪೇಷ್‌ಗಳಿವೆ. ಅಲ್ಲಿ ಇಂತಹ ಬೆಳೆಗೆ ಯಾವ ತರಹದ ರೋಗಗಳೂ ಬಾರದಂತೆ ಇನ್ನೂ ಹೆಚ್ಚಿನ ನಂಶೋಧನಾ ಕಾರ್ಯಗಳನ್ನು ಮಾಡಿಕೊಳ್ಳಬೇಕೆಂದು ನನ್ನ ವಿನಂತಿ. ನಮ್ಮ ಭಾಗದೊಳಗೆ ಗೋಧಿಬೆಳೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು.

ಇನ್ನು, ಲಕ್ಷ್ಮೆ ಕಾಟನ್ ಉತ್ಪತ್ತಿ ನಮ್ಮ ಭಾಗದಲ್ಲಿ ಹೆಚ್ಚು. ಅದರ ಬಗ್ಗೆ ಸಾಕಷ್ಟು ರಿನರ್ಟ್ ನಡೆದಿದೆ. ಅಲ್ಲಿ ಎರ್ಲಾ ಡೆವಲಪ್‌ಮೆಂಟ್ ಸ್ಕೀಮುಗಳಿವೆ. ಅದರಲ್ಲಿ ಜನರಲ್ ಏರಿಯಾ ರಿಜರ್ವ್ ಏರಿಯಾ ಎಂದು ಎರಡು ಭಾಗಮಾಡುತ್ತಾರೆ. ರಿಜರ್ವ್ ಏರಿಯಾದಲ್ಲಯೇ ಬಹಳ ಮಂದಿಗೆ ಹತ್ತಿ ಉತ್ಪತ್ತಿಮಾಡಬೇಕೆಂದು ಇಚ್ಛೆ ಇದೆ. ಅದಕ್ಕೆ ಸಾಕಷ್ಟು ಬೀಜದ ಕಾಳು ಸಿಕ್ಕುವುದಿಲ್ಲ. ಬೆಳೆದವರಿಗೆ ಕಾಳು ಒದಗಿಸುವುದಕ್ಕೆ ಸರ್ಕಾರದವರು ತಕ್ಕ ಅನುಕೂಲತೆಗಳನ್ನು ಮಾಡಿಕೊಡಬೇಕು ಎಂಬುದಾಗಿ ನಾನು ವಿನಂತಿಮಾಡಿಕೊಳ್ಳುತ್ತೇನೆ. ಜನರಲ್ ಏರಿಯಾದಲ್ಲಿ ಬೆಳೆಯುವ ಹತ್ತಿಗೆ ಯೋಗ್ಯವಾದ ಧಾರಣೆ ಸಿಕ್ಕುವುದಿಲ್ಲ. ಆದ್ದರಿಂದ ರಿಜರ್ವ್ ಏರಿಯಾದಲ್ಲಿ ಬೆಳೆಯುವ ಕಾಟನ್ ಮಾಲಿಗೂ ಮತ್ತು ಜನರಲ್ ಏರಿಯಾದಲ್ಲಿ ಬೆಳೆಯುವ ಕಾಟನ್ ಮಾಲಿಗೂ ಬೇರೆ ಬೇರೆಯಾಗಿ ಗ್ರೇಡ್‌ಮಾಡಿ ಹತ್ತಿಯನ್ನು ಮಾರುವುದಕ್ಕೆ ಏರ್ಪಾಡುಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಈ ವಿಷಯದ ಬಗ್ಗೆ ಸರ್ಕಾರದವರು ಲಕ್ಷ್ಯ ಕೊಡಬೇಕೆಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಅಲೂರು ಹನುಮಂತಪ್ಪ (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ವ್ಯವಸಾಯ ಮತ್ತು ಪಶುವೈದ್ಯ ಇಲಾಖೆಯ ಒಂದು ಬೇಡಿಕೆಯ ಸಂಬಂಧವಾಗಿ ನನ್ನ ಮಾನ್ಯ ಸ್ನೇಹಿತರನೇಕರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ವ್ಯವಸಾಯ ಕುಟುಂಬದಿಂದ ಬಂದಂಥವರು. ಅವರಿಗೆ ಸಕಲ ವಿಷಯಗಳೂ ಗೊತ್ತಿವೆ ಎಂದು ಕೆಲವರು ಹೇಳಿದರು. ವ್ಯವಸಾಯ ಇಲಾಖೆಗೋಸ್ಕರ ಎರಡುಕೋಟಿ 14ಲಕ್ಷ 27ಸಾವಿರ ರೂಪಾಯಿಗಳ ಬೇಡಿಕೆಯನ್ನು ಕೇಳಿದ್ದಾರೆ. ಇಷ್ಟು ಕಡಮೆ ಏತಕ್ಕೆಬಿತ್ತು ಎಂದು ನನಗನ್ನಿಸುತ್ತದೆ. ದೇಶದಲ್ಲಿ ಶೇಕಡ 80ಭಾಗ ವ್ಯವಸಾಯಗಾರರೇ ಇದ್ದಾರೆ. ಆದ್ದರಿಂದ ವ್ಯವಸಾಯ ಇಲಾಖೆಯ ಬೇಡಿಕೆ 20ಕೋಟಿ ರೂಪಾಯಿಗಳಿರಬೇಕಾಗಿತ್ತು. ವ್ಯವಸಾಯ ಇಲಾಖೆಯನ್ನು ನಾವು ಒಂದು ಮಾರದ ಬಾಡಕ್ಕೆ ಹೋಲಿಸಿದರೆ ಇತರ ಎರ್ಲಾ ಇಲಾಖೆಗಳನ್ನು ಆ ಮಾರದ ಕೊಂಬಿಗಳಿಗೆ ಹೋಲಿಸಬಹುದು. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶ್ರೀನಿವಾಸ ಶೆಟ್ಟಿಯವರೂ ಮತ್ತು ಶ್ರೀಮಾನ್ ಮಾದಪ್ಪನವರೂ ಹೇಳಿದ ಹಾಗೆ ವ್ಯವಸಾಯದ ಕೈಗಾರಿಕೆ ಕಡಮೆಯಾಗುತ್ತಾ ಹೋಗಿ ದಿನೇ ದಿನೇ ವ್ಯವಸಾಯಗಾರರು ನಿರುತ್ಸಾಹಿಗಳಾಗುತ್ತಿದ್ದಾರೆ. ಇದರಿಂದ ಈ ಇಲಾಖೆಯು ನಶಿಸಿಹೋಗಿದೆ. ಮಾನ್ಯ ಮಂತ್ರಿಗಳನ್ನು ಇದಕ್ಕೆ ಕಾರಣವೇನಿರಬಹುದೆಂಬುದನ್ನು ಕೇಳಬಹುದು. ಈಗ ತಜ್ಞರಿಂದ ಮಾಡುವ ಕಾರ್ಯ ಏಷ್ಟೋ ಇದ್ದರೂ ಅವರಿಂದ ಈಗ ಏನೂ ಅನುಕೂಲವಾಗುತ್ತಾ ಇಲ್ಲ. ಈ ಇಲಾಖೆಗೆ ಇದ್ದಂಥ ಅನೇಕ ಜವಾಬ್ದಾರಿಯುತವಾದ ಕೆಲಸಗಳನ್ನು ಕೋ-ಆಪರೇಟಿವ್ ಸೊಸೈಟಿಗಳಿಗೆ ಮತ್ತು ಎ. ಇ. ಎನ್. ಬ್ಲಾಕುಗಳಿಗೆ ಕೊಟ್ಟಿದೆ. ರೈತನಿಗೆ ನೇರವಾಗಿ ಅವನ ಜಮೀನಿಗೆ ಬೇಕಾಗುವಷ್ಟು ಗೊಬ್ಬರವನ್ನು ಕೊಡಬೇಕು. ಬಿತ್ತನೆ ಬೀಜವನ್ನು ಅಥವಾ ಜಪ್ತಿ ಮಾದರೀ ಬಿತ್ತನವನ್ನು ರೈತರಿಗೆ ಕೊಟ್ಟು ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಬೇಕು. ಆದರೆ ಈಗ ವ್ಯವಸಾಯ ಇಲಾಖೆಯಿಂದ ಯಾವರೀತಿಯಾದಂಥ ಪ್ರೋತ್ಸಾಹವೂ ಸಿಕ್ಕುತ್ತಿಲ್ಲ. ನುಮಾರು ಎರಡು ಮೂರು ವರ್ಷಗಳಿಂದ ಜಪ್ತಿ ಮಾದರೀ ಬಿತ್ತನೆಕ್ಕೆ ಒಳ್ಳೆಯ ಪ್ರೋತ್ಸಾಹವಿತ್ತು. ಇತ್ತೀಚೆಗೆ ಅದು ನಿಂತು ಹೋಗಿದೆ. ಕಾರಣವೇನೆಂಬುದನ್ನು ಮಾನ್ಯ ಮಂತ್ರಿಗಳನ್ನು ಕೇಳಬೇಕಾಗಿದೆ. ಅಮೋನಿಯಂ ಕೃತಕ ಗೊಬ್ಬರವನ್ನು ಹೆಚ್ಚು ಹೆಚ್ಚಾಗಿ ಒದಗಿಸಿದರೆ ಬೆಳೆಯುವುದಕ್ಕೆ ಅನುಕೂಲ ಅದನ್ನು ಕ್ಯಾಷ್‌ಕ್ರಾಪ್ಸ್‌ಗೆ ಅರ್ಧಬೆರೆಗೆ ಕೊಡುತ್ತಿದ್ದಾರೆ. ಈಗ ಆ ಸೌಕರ್ಯವನ್ನು ಅಲೂಗಡ್ಡೆಗೆ ಇಲಾಖೆಯವರು ನಿಲ್ಲಿಸಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಈಗಲೂ ಕೊಡುತ್ತಿದ್ದಾರೆ. ಹಾಗೇನೂ ನಿಲ್ಲಿಸಿಲ್ಲ.

ಶ್ರೀ ಅಲೂರು ಹನುಮಂತಪ್ಪ.—ಬೆಂಗಳೂರು ಜಿಲ್ಲೆಯಲ್ಲಿರುವ ವ್ಯವಸಾಯ ಪೋಷಕ ಸಂಘದವರು ಅನೇಕ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಆ ಬೇಡಿಕೆಗಳಲ್ಲಿ ಏನಾದರೂ ಕಾರ್ಯಗತವಾಗಿದೆಯೇ ಎಂದು ನೋಡಿದ್ದೇ ಆದರೆ ಶೇಕಡ ಒಂದು ಭಾಗವೂ ಆಗಿಲ್ಲ. ಜಿಲ್ಲಾವ್ಯವಸಾಯ ಸಂಘದ ಚಟುವಟಿಕೆಗಳು ನಮ್ಮ ವ್ಯವಸಾಯ ಇಲಾಖೆಗೊಳಪಟ್ಟಿವೆ. ಪಂಜಾಬ್‌ರಾವ್ ದೇಶಮುಖ್ ಅವರು ಆಲ್ ಇಂಡಿಯಾ ವ್ಯವಸಾಯ ಸಂಘಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ. ಅದೇ ರೀತಿ ವ್ಯವಸಾಯ ದೃಷ್ಟಿಯಿಂದ ಇಲ್ಲಿಯೂ ಕಾರ್ಯಗತಮಾಡಲು ಒಂದು ನಿರ್ಣಯ ನಮ್ಮಮುಂದೆ ಬರುತ್ತದೆ. ನಮ್ಮ ಇಲಾಖೆಯಿಂದ ಅಷ್ಟು ಪ್ರೋತ್ಸಾಹ ಸಿಕ್ಕುತ್ತಿಲ್ಲ. ನಮ್ಮ ಸರ್ಕಾರ ಈ ವಿಷಯದಲ್ಲಿ ಈ ವರ್ಷದ ನಿಜವಾದ ಬೇಡಿಕೆ ಏನೆಂಬುದನ್ನು ಗಮನದಲ್ಲಿಟ್ಟುಕೊಂಡಿಲ್ಲ. ಮುಂದೆ ತರಕಾರಿಬೆಳೆಯುವುದಾಗಲಿ ಹೆಚ್ಚು ಆಹಾರ ಉತ್ಪತ್ತಿಮಾಡುವುದಾಗಲಿ ಇನ್ನೂ ಗಮನಿಸಿಲ್ಲ. ಕಾಲಕ್ಕೆತಕ್ಕ ಹಾಗೆ ಜನರಿಗೆ ಬೇಕಾದಷ್ಟು ಸೌಕರ್ಯಗಳನ್ನು ಮಾಡಿಕೊಡುತ್ತಾ ಇಲ್ಲ. ಸದಸ್ಯರು ಹೇಳಿದ ಸಲಹೆಗಳನ್ನು ಕಾರ್ಯಗತಮಾಡುವುದಕ್ಕೆ ಸರ್ಕಾರದವರು ಖಂಡಿತ ಪ್ರಯತ್ನಮಾಡಿಲ್ಲ ಮತ್ತು ಇನ್ನೂ ಜಾಗ್ರತೆ ಪ್ರಯತ್ನಮಾಡುತ್ತಿಲ್ಲವೆಂದೂ ಸಹ ಹೇಳಬಹುದು. ಅದಕ್ಕಾಗಿಯೇ ಈ ರೀತಿಯಾಗಿ ಈ ಇಲಾಖೆ ನಶಿಸಿಹೋಗುತ್ತಿದೆಯೆಂದು ನಾನು ಹೇಳಬೇಕಾಗುತ್ತದೆ. ಫ್ರೂಟ್ ರಿನರ್ಟ್ ಸ್ಪೇಷ್‌ಮಾತ್ರ ಹೆಸರು ಘಟ್ಟದಲ್ಲಿ ಯಶಸ್ವಿಯಾಗಿ ನಡೆಯುತ್ತಿದೆ. ಅದೇರೀತಿಯಾಗಿ ಅನೇಕ ತಾಲ್ಲೂಕುಗಳಲ್ಲಿಯೂ ಈ ವಿಷಯದಲ್ಲಿ

(ಶ್ರೀ ಆಲೂರು ಹನುಮಂತಪ್ಪ)

ಸರ್ಕಾರದವರು ಪ್ರೋತ್ಸಾಹ ಕೊಡಬೇಕಾಗುತ್ತದೆ.

4-30 P.M.

ಇಕ್ವಿಸೈಡ್ ವಿಷಯವಾಗಿ ಒಂದು ಮಾತು ಹೇಳುತ್ತೇನೆ. ಕ್ರಿಮಿ ಕೀಟಗಳಿಂದ ರೈತರಿಗೆ ಬಹಳ ನಿರುತ್ಸಾಹವುಂಟಾಗುತ್ತದೆ. ಅವರು ಇಟ್ಟಂಥ ಫಸಲು ಎಲ್ಲಾ ಕೆಟ್ಟು ಹೋಗುತ್ತದೆ. ಇದಕ್ಕೆ ತಕ್ಕ ವ್ಯವಸ್ಥೆ ಮಾಡಿಲ್ಲ. ಇದ್ದರೂ ಕೂಡ ಅದು ಸಮರ್ಪಕವಾಗಿ ನಡೆಯುತ್ತಿಲ್ಲ.

ಇರಿಗೇಷನ್ ಪಂಪ್ ಸೆಟ್ಟನ್ನು ಹೈರ್ ಪರ್ಚೇಸ್ ಸಿಸ್ಟಂ ಮೇರೆ ಕೊಡಿಸಲು ಇಲಾಖಾ ಡೈರೆಕ್ಟರು ಯಾವ ಯಾವ ತಾಲ್ಲೂಕಿಗೆ ಹೋಗುತ್ತದೆ ಅಲ್ಲೆಲ್ಲಾ ಯಾರ್ಯಾರು ಅಪೇಕ್ಷಿಸುತ್ತಾರೆ ಅವರಿಗೆ ಕೊಡಿಸಲು ಏಕೆ ಕಾರ್ಯಕ್ರಮ ತೆಗೆದುಕೊಳ್ಳಬಾರದೆಂದು ತಮ್ಮನ್ನು ಕೇಳುತ್ತೇನೆ.

ತಾವು ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಕೊಡತಕ್ಕ ಗೊಬ್ಬರ—ಎಷ್ಟು ಕೋಟಾ ಕೊಡುತ್ತೀರಿ ಎಂಬುದನ್ನು ನೋಡುತ್ತೀರೇ ಏನಾ ಯಾವ ಜಮೀನಿಗೆ ಯಾವ ಗೊಬ್ಬರ ಕೊಟ್ಟರೆ ಸರಿಹೋಗುತ್ತದೆ ಎಂಬುದನ್ನು ನೋಡುವುದಿಲ್ಲ. ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ಜಮೀನಿನ ಭೂಗುಣ ಹೇಗಿದೆಯೋ ಅದಕ್ಕೆ ತಕ್ಕ ಗೊಬ್ಬರ ನರಬರಾಯಿ ಮಾಡಬೇಕಾದ್ದು ತಮ್ಮ ಕರ್ತವ್ಯವಾಗಿದೆ. ಅದಕ್ಕೆ ಸಾಯಿಲ್ ಕ್ಲಾಸಿಫಿಕೇಷನ್ ಆಗಬೇಕು.

ಬೆಂಗಳೂರು ಜಿಲ್ಲೆಯಲ್ಲಿ ಅನೇಕ ಚಿಕ್ಕ ಚಿಕ್ಕ ಕೆರೆಗಳು ಇವೆ. ಈ ಮೈನರ್ ಕೆರೆಗಳು ಇವತ್ತು ಇರುವ ಸ್ಥಿತಿಯಲ್ಲಿ ನಾಲ್ಕು ಸಾರಿ ನೀರು ತುಂಬಿದರೂ ಸಹ ಬೆಳೆಗೆ ಸಾಕಾಗದ ರೀತಿಯಲ್ಲಿ ಇವೆ. ಇದಕ್ಕೂ ಸಹ ವ್ಯವಸಾಯದ ಇಲಾಖೆಯವರು ನಿಗಾ ಕೊಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ಕೆರೆಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ.

ಬೆಂಗಳೂರು ಪಟ್ಟಣದಲ್ಲಿ 11-12 ಲಕ್ಷ ಜನಸಂಖ್ಯೆ ಇದೆ. ಇಂಥ ಪಟ್ಟಣದಲ್ಲಿ ನಾನಾ ಭಾಗಗಳಿಗೆ ತರಕಾರಿ ಸಾಗಾಣಿಕೆಗೂ ಮತ್ತು ಹಾಲು ಮಾರಾಟಕ್ಕೂ ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕಾಗಿ ಸಾವಿರಾರು ರೂಪಾಯಿ ಇನ್‌ವೆಸ್ಟ್ ಮಾಡಿದರೂ ಸಹ ಕೊಳ್ಳುವವರ ದೃಷ್ಟಿಯಿಂದಲೂ ಮತ್ತು ಬೆಳೆಯುವವರ ದೃಷ್ಟಿಯಿಂದಲೂ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ರೈತರಿಗೆ ನಿಬ್ಬಡಿ ಕೊಡತಕ್ಕ ವಿಚಾರ ಅನೇಕ ಮಾನ್ಯ ಮಿತ್ರರು ಹೇಳಿದ್ದಾರೆ. ಈ ವಿಷಯದಲ್ಲಿ ನಾನು ಹೆಚ್ಚಿಗೆ ಏನೂ ಹೇಳಲಿಚ್ಛಿಸುವುದಿಲ್ಲ. ಇದಕ್ಕೆ ಹೆಚ್ಚು ಅನುಕೂಲ ಮಾಡಿಕೊಟ್ಟಿದ್ದೇವೆ. ಆದರೆ ಹೆಚ್ಚು ಆಹಾರ ಬೆಳೆಯುವುದಕ್ಕೆ ಮತ್ತು ರೈತನ ಆರ್ಥಿಕ ಸ್ಥಿತಿ ಉತ್ತಮವಾಗುವುದಕ್ಕೆ ಸಹಾಯವಾಗುತ್ತದೆಂದು ಹೇಳುತ್ತೇನೆ.

ಮೈಸೂರು ವ್ಯವಸಾಯದ ಸಂಘಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಅಲ್ಲಿ ತೀರ್ಮಾನವಾದ ಅನೇಕ ನಿರ್ಣಯಗಳನ್ನು ಕಾರ್ಯಗತ ಮಾಡಿದರೆ ವ್ಯವಸಾಯಗಾರರ ದೃಷ್ಟಿಯಿಂದ ಬಹಳ ಉತ್ತಮವಾಗುತ್ತದೆ ಎಂದು ಹೇಳಿ ವ್ಯವಸಾಯದ ಇಲಾಖೆಯನ್ನು ಪುನರುಜ್ಜೀವನ ಗೊಳಿಸಿ ಅಲ್ಲಿಗೆ ದಕ್ಷರಾದ ಅಧಿಕಾರಿಗಳನ್ನು ಮತ್ತು ಅಗತ್ಯವಾಗಿ ಬೇಕಾದಷ್ಟು ಸಿಬ್ಬಂದಿಯನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ವ್ಯವಸಾಯದ ವಿಚಾರದಲ್ಲಿ ಮಾತನಾಡುವಾಗ, ಹೆಚ್ಚಿನ ಸಂಖ್ಯೆ ಜನಗಳು ಇದರಲ್ಲಿ ಅನಕ್ಕೆ ವಹಿಸಿ ಮಾತನಾಡಿರುವುದನ್ನು ನೋಡಿದರೆ ನಿಜವಾಗಿಯೂ ವ್ಯವಸಾಯಗಾರರ ವಿಚಾರದಲ್ಲಿ ಸರ್ಕಾರ ಮತ್ತು ಜನತೆ ಎಷ್ಟರಮಟ್ಟಿನ ಕನಿಕರದ ಅಭಿಮತ ಇಟ್ಟುಕೊಂಡಿದ್ದಾರೆ ಎಂಬುದು ವೇದ್ಯವಾಗುತ್ತದೆ. ಇದು ಬಡ್ಜೆಟ್ ಪುಸ್ತಕ ಅಲ್ಲ, ಬೇಸರದ ಪುಸ್ತಕ ಎಂದು ಹಿಂದೆ ಆಗಲೇ ಹೇಳಿದ್ದೇನೆ. ಮೈಸೂರು ಸರ್ಕಾರದವರಿಗೆ ಎಷ್ಟರ ಮಟ್ಟಿನ ಉತ್ಸಾಹ ವ್ಯವಸಾಯಗಾರರ ವಿಷಯದಲ್ಲಿ ಇದೆ ಎಂದರೆ ರೈತ ದೇಶದ ಬೆನ್ನು ಮೂಳೆ, ಅವನು ಎಲ್ಲರಿಗೂ ಅನ್ನ ಹಾಕುವವನು ಎಂದು ಹೇಳುವುದೆಷ್ಟೋ ಅಷ್ಟೇ ಹೊರತು ಮತ್ತೇನೂ ಅಲ್ಲ. ನಾನು ಸರ್ಕಾರದವರಿಗೆ ಹೇಳಬೇಕೆಂದರೆ, ದಿನ ಹಾಡಿದ್ದೇ ಹಾಡಬೇಕಾಗುತ್ತದೆ. ಅದು ಪೇಪರ್‌ನವರಿಗೆ ಬೇಜಾರಾಗುತ್ತದೆ ಎಂದು ಕಾಣುತ್ತದೆ.

Mr. CHAIRMAN. —Please don't repeat what you have stated once before.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೋಡಿ, ವ್ಯವಸಾಯಗಾರನೇ ನಿಜವಾಗಿಯೂ ದೇಶದ ಮೂಳೆ ಎಂದು ತಿಳಿದುಕೊಂಡಿದ್ದೇವೆ. ಆದರೆ ಬೆಂಗಳೂರು ಪಟ್ಟಣದಲ್ಲಿ ಟಾರ್ ರಸ್ತೆ, ಎಲೆಕ್ಟ್ರಿಸಿಟಿ, ಮೋಟಾರ್ ಕಾರು, ನಿಮ್ಮ ಉತ್ಸವ, ಮೆರವಣಿಗೆ ನೋಡಿದರೆ ಇದೇ ರೀತಿ ಯಾವುದಾದರೂ ಹಳ್ಳಿಯಲ್ಲಿ ನಡೆಯುತ್ತದೆಯೇ ಎಂದರೆ ಖಂಡಿತವಾಗಿಯೂ ಇಲ್ಲ. ರೈತನ ಸ್ಥಿತಿ ಏನಾಗಿದೆ ಎಂದರೆ ಅವನಿಗೆ ವಾಸಕ್ಕೆ ಸರಿಯಾದ ಮನೆ ಇಲ್ಲ. ಅವನು ವಾಸವಾಗಿರುವ ಯಾವ ಮನೆ ಇದೆಯೋ ಅದರೊಳಗೇ ಅವನ ದನಕರುಗಳು, ಅದಕ್ಕೆ ಬೇಕಾದ ಸೊಪ್ಪು, ಸದೆ, ಹುಲ್ಲು ಪ್ರತಿಯೊಂದೂ ಆಗಬೇಕು: ಪಟ್ಟಣಗಳಲ್ಲಿ ಒಳ್ಳೊಳ್ಳೆಯ ಎಕ್ಸ್‌ಚೇಷ್ಞ ಮಾಡಿ ಮನೆಗಳನ್ನು ಕಟ್ಟಿಸಿ ಕೊಡುತ್ತೀರಿ. ಅದೇ ಪ್ರಕಾರ ರೈತನಿಗೇನಾದರೂ ಯಾವುದಾದರೂ ಸೌಲಭ್ಯವನ್ನೊದಗಿಸಿದ್ದೀರಾ ಎಂಬುದನ್ನು ನಿಮ್ಮ ಉತ್ತರದಲ್ಲಿ ಹೇಳಬೇಕು. ಪ್ರತಿಯೊಬ್ಬ ರೈತನೂ ವಾಸ ಮಾಡುವ ಮನೆಯ ಪಕ್ಕದಲ್ಲೇ ಗೊಬ್ಬರದ ಗುಂಡಿ ಬಿದ್ದಿರುತ್ತದೆ. ಸಾಲದ್ದಕ್ಕೆ ಬಚ್ಚಲು ನೀರು ಹರಿಯುತ್ತಿರುತ್ತದೆ. ಅದರ ಜೊತೆಗೆ ಹುಲ್ಲನ ಮೆದೆ ಹಾಕಿರುತ್ತಾರೆ. ಬೆಂಕಿ ಬಿದ್ದರೆ ಆಯಿತು, ಅವನ ಗತಿ. ಹೊಸದಾಗಿ ಮನೆ ಕಟ್ಟಬೇಕಾದರೆ ರೈನ್ಡಸ್ ಬೇಕು. ಅನೇಕ ತಕರಾರುಗಳನ್ನು ಹಾಕುತ್ತಾರೆ. ಅವನ್ನೆಲ್ಲಾ ಸರಿಪಡಿಸಬೇಕಾದರೆ ಲಾಯರು ಸಾಹೇಬರಿಗೆ ಕೈಮುಗಿಯಬೇಕು. ಅವಿದ್ಯಾವಂತರನ್ನು ಅವರು ಹೆದರಿಸುತ್ತಾರೆ; ಅದು ತಮಗೆ ಗೊತ್ತಿದೆಯೋ ಇಲ್ಲವೋ. ಆದ್ದರಿಂದ ತಿಪ್ಪೆಗಳನ್ನು ಊರಿನಿಂದ ಆಚೆಗೆ ಸಾಗಿಸಿ, ಅಲ್ಲಿ ಅದಕ್ಕೆ ಜಾಗ ಕೊಟ್ಟು ಕಂಪೋಸ್ಟ್ ಮೆನ್ಯೂರ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಸಂಚಾರ ಸೌಲಭ್ಯದ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ರೈತನೇ ದೇವರು, ರೈತನೇ ಅನ್ನ ಹಾಕತಕ್ಕವನು ಎಂದು ಹೇಳಿಕೊಂಡು ಯಾರು ಅವನನ್ನು ಸ್ಮರಣೆ ಮಾಡುವುದಿಲ್ಲವೋ ಅವನಿಗೆ ನರಕ ಸ್ಯಾಮಿ (ಸಭೆಯಲ್ಲಿ ನಗು!)

ಬೇರೆ ಜನಗಳು ಯಾವ ರೀತಿಯಲ್ಲಾದರೂ ಬುದ್ಧಿ ಶಕ್ತಿ ಉಪಯೋಗಿಸಿ ಜನರಿಗೆ ಜೋಪಿ ಹಾಕಿ ಯಾವ ರೀತಿಯಲ್ಲಾದರೂ ಹಣ ಸಂಪಾದನೆ ಮಾಡಬಹುದು.

[MR. SPEAKER in the Chair.]

ಆದರೆ ರೈತನ ವಿಚಾರ ಹಾಗಲ್ಲ. ಆತ ತನ್ನ ಮೈಲಿರುವ ಬೆವರು, ಶರೀರದಲ್ಲಿರುವ ರಕ್ತವನ್ನು ಸುರಿಸಿ, ಬೆಳೆದಂಥ ಧಾನ್ಯವನ್ನು ನಾವೆಲ್ಲರೂ ಈ ದಿವಸ ಊಟ ಮಾಡುತ್ತಿದ್ದೇವೆ. ಹೀಗಿರುವಾಗ ಈ ದಿವಸ ನಿಜವಾಗಿಯೂ ದೇಶಕ್ಕೆಲ್ಲ ರೈತನೇ ದೇವರು ಎಂಬ ಭಾವನೆ ನಮ್ಮೆಲ್ಲರಲ್ಲಿಯೂ ಇರಬೇಕಾದದ್ದು ಸಹಜ. ಹೀಗೆ ನಾವೆಲ್ಲರೂ ಆತನಿಗೊಂದು ಮಾನ್ಯತೆಯನ್ನು ಕೊಡಬೇಕಾಗಿರುವಾಗ ನಾವು ಈ ಮಾರ್ಗವನ್ನು ಬಿಟ್ಟು ಆ ರೈತ ಏನಾದರೂ ತಾಲ್ಲೂಕ್ ಹೆಡ್ ಕ್ವಾರ್ಟರ್ಸಿಗೆ ಬಂದರೆ "ಖೇಡೇವಾಲ ಆಕೋ ಹೈಜಿ" ಎಂದು ಹೇಳಬಹುದೆ! ಈ ರೀತಿಯಾಗಿ ಹೇಳತಕ್ಕ ಜನ ಆ ಓಟಿಂಗ್ ಕಾಲ ಬಂತೆಂದರೆ ಹೇಗೆ ಕೈಮುಗಿಯುತ್ತೀರಿ! ಆ ಓಟಿಂಗ್ ಕಾಲ ಮುಗಿದ ಕೂಡಲೆ ನೀವು ಎಂದಿಗೂ ಅವರಿಗೆ ಕೈ ಮುಗಿಯುವುದಿಲ್ಲ. ಅವರನ್ನು ಮೈಲಿಗಟ್ಟಲೆ ದೂರದಲ್ಲಿಟ್ಟುಬಿಡುತ್ತೀರಿ. ಈ ಒಂದು ದಾಖಲೆಯಾದರೂ ಇನ್ನಾದರೂ ನೀವು ಸರಿಯಾಗಿ—ನ್ಯಾಯವಾಗಿ ನಡೆದುಕೊಂಡು ಬಂದರೆ ನೀವು ನಿಜವಾಗಿಯೂ ಸ್ವರ್ಗಕ್ಕೆ ಹೋಗುವಿರಿ. ಹಿಂದಿನ ಕಾಲದಲ್ಲಿದ್ದ ಸರ್ಕಾರ ರೈತನ ಅನುಕೂಲಕ್ಕಾಗಿ ಸಂಚಾರ ಸೌಲಭ್ಯಗಳನ್ನು ಬಹಳ ಎಚ್ಚರಿಕೆಯಿಂದ ಒದಗಿಸುತ್ತಿದ್ದರು. ಆಗಿನ ಕಾಲದಲ್ಲಿದ್ದಂಥಾ ಸರ್ಕಾರ. ದೇಶದಲ್ಲಿ ಯಾರು ಧರ್ಮಿಷ್ಠರಾಗಿದ್ದಾರೆ, ಯಾರು ಶ್ರೀಮಂತರಾಗಿದ್ದಾರೆ, ಯಾರು ಜನಾನುರಾಗಿಗಳಾಗಿದ್ದಾರೆಂಬುದನ್ನು ಕಂಡುಹಿಡಿದು ಅವರನ್ನು ಬೆನ್ನು ತಟ್ಟಿ, ಅವಂಗೆ ಪ್ರೋತ್ಸಾಹದ ಮಾತುಗಳನ್ನಾಡಿ ಜನತೆಗೆ ಅನುಕೂಲವಾದಂಥಾ ರಸ್ತೆಗಳನ್ನು, ಗುಂಡು ತೋಪುಗಳನ್ನು, ಸ್ಕೂಲು, ಆಸ್ಪತ್ರೆ ಇತ್ಯಾದಿಗಳನ್ನು ಮಾಡಿಸುತ್ತಿದ್ದರು. ಆ ಹಳೆಯ ಕಾಲದಲ್ಲಿ ಅಂಥ ಒಂದು ಪದ್ಧತಿ ಇತ್ತು. ಈ ದಿವಸ ಅಧಿಕಾರ ಸ್ಥಾನಗಳನ್ನು ಹಿಡಿದು ಕುಳಿತಿರುವ ಪಾರ್ಟಿ ಅವರ ಪಾರ್ಟಿಯ ಜನರನ್ನು ಬಿಟ್ಟರೆ ಬೇರೆ ಯಾರಲ್ಲೂ ಅವರು ಒಂದು ಸಂಪರ್ಕವನ್ನಿಟ್ಟುಕೊಂಡಿಲ್ಲ. ಇತರರ ಕಡೆಗೆ ಅವರು ತಿರುಗಿ ಸಹ ನೋಡುತ್ತಿಲ್ಲ. ಆದರೆ ಇತ್ತೀಚೆಗೆ ಆ ಸರ್ಕಾರವೂ ಹೋಯಿತು—ಆ ಕೆಲಸಗಳೂ ನಿಂತು ಹೋದವು. ಹೀಗೆ ಈ ಅಧಿಕಾರ ಸ್ಥಾನ ಯಾರೊಬ್ಬರಿಗೂ ಸ್ಥಿರವಾದುದಲ್ಲ. ಆದಕಾರಣ ಈ ದಿವಸ ಅಧಿಕಾರದಲ್ಲಿರತಕ್ಕ ಪಾರ್ಟಿಯವರು ಯಾವುದಾದರೂ ಒಂದು ರೀತಿಯಿಂದ, ದಕ್ಷತೆಯಿಂದ ಕೆಲಸ ಮಾಡಬೇಕಾಗಿದೆ. ಕಾಗದ ಪತ್ರಗಳ ಫೈಲಾತಿಯನ್ನು ಬೇಗ ಬೇಗ ನಡೆಯುವಂತೆ ಮಾಡಿ. ಯಾವಾಗ್ಲೂ ನೀವು ನಿಮ್ಮ ಸೀಟುಗಳಿಗೆ ಅಂಟಿಕೊಂಡೇ ಇರಬಾರದು. ಅದನ್ನು ಸಾಧ್ಯವಾದಮಟ್ಟಿಗೂ ಬಿಟ್ಟು ದೇಶದಲ್ಲಿ ಜನರ ಕಷ್ಟಸುಖಗಳೇನೆಂಬುದನ್ನು ಅರಿಯಲು ಪ್ರಯತ್ನ ಮಾಡಿ. ಈ ದಿವಸ ನೀವು ಏನು ಮಾಡುತ್ತಿದ್ದೀರೆಂದರೆ ರೈತನು ಇನ್ನೇನು ಮಳೆ ಬಿದ್ದು ಭೂಮಿಗೆ ನೇಗಿಲನ್ನು ಹೂಡಬೇಕೆಂಬ ಸಮಯದಲ್ಲಿ ಆತನಿಗೆ ಬೇಕಾಗತಕ್ಕಂಥ ಗುಳ—ಗುದ್ದಲ, ಹಾರೆ ಇತ್ಯಾದಿ ಸಾಮಾನುಗಳಿಗೆ ಇಂಡೆಂಟ್ ಕಳುಹಿಸುತ್ತಿದ್ದೀರಿ. ಹೀಗಾಗಿ ನಿಮ್ಮ ಈ ಸೊಸೈಟಿಗಳಲ್ಲಿ ರೈತರಿಗೆ ವ್ಯವಸಾಯದ ಉಪಕರಣಗಳಾಗಲಿ, ಗೊಬ್ಬರ, ಬೀಜ ಇತ್ಯಾದಿಗಳ್ಯಾವೂ ಸಕಾಲದಲ್ಲಿ ಅವರಿಗೆ ದೊರೆಯುತ್ತಿಲ್ಲ. ಮಳೆಗಾಲ ಮುಗಿದ ನಂತರ ಸೊಸೈಟಿಗಳಲ್ಲಿ ಆ ಸಾಮಾನುಗಳಿದ್ದರೇನು ಪ್ರಯೋಜನವಾಯಿತು!

ಶ್ರೀ ಎಚ್. ಎಸ್. ರುದ್ರಪ್ಪ.—ಆ ರೀತಿ ನಿಮಗೆ ಯಾವ ಸೊಸೈಟಿಯವರು ಸಾಮಾನುಗಳಿಲ್ಲ ಎಂದು ಹೇಳಿದರು!

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಿಮ್ಮ ಆ ಸೊಸೈಟಿಗಳೂ ಸಾಕು, ನಿಮ್ಮ ಗೊಳ್ಳೂ ಸಾಕು. ಇತ್ತೀಚೆಗೆ ವ್ಯವಸಾಯದ ಉಪಕರಣಗಳಿಗೆಲ್ಲ ರೇಟನ್ನು ಜಾಸ್ತಿ ಮಾಡಿದ್ದೀರಿ. ಯಾವುದೋ ಒಂದು ವೇಳೆಯಲ್ಲಿ ಸೊಸೈಟಿಗೆ ಗುಳ-ಗುದ್ದಲ, ನೇಗಿಲು ಇತ್ಯಾದಿ ಸಾಮಾನುಗಳು ಬಂದಿರುತ್ತದೆಂದು ನಮ್ಮನೆ ಒಂದು ಗದ್ದಲ ಎಬ್ಬಿಸಿ ಬಿಡುತ್ತಾರೆ. ಎಲ್ಲೋ 10-20 ಜನರಿಗೆ ಅವರಿಗೆ ಬೇಕಾದವರಿಗೆ ಕೆಲವು ಸಾಮಾನುಗಳನ್ನು ಕೊಟ್ಟ ಕೂಡಲೆ ಅಲ್ಲಿ ಜನ ಜಾಸ್ತಿ ಸೇರಿ ದಬ್ಬಾಯ್ದಾಡುವುದಕ್ಕೆ ಪ್ರಾರಂಭವಾಗುತ್ತಲೆ ಸಾಮಾನುಗಳೆಲ್ಲ ಮುಗಿದುಹೋದವೆಂದು ಹೇಳಿಬಿಡುತ್ತಾರೆ. ಹಾಗೆ ನೀವು ಆ ಸೊಸೈಟಿಗಳಿಗೆ ಸಕಾಲದಲ್ಲಿ ಸಾಕಷ್ಟು ಸಾಮಾನುಗಳನ್ನು ಒದಗಿಸಿದ್ದರೆ ಅಲ್ಲಿ ದಬ್ಬಾಯ್ದಾಡುವುದಕ್ಕೆ ಕಾರಣವೆಲ್ಲಿತ್ತು? ಒಟ್ಟಿದಲ್ಲಿ ಹೇಳುವುದಾದರೆ ಅವರಿಗೆ ನೀವು ಒಂದು ಸರಿಯಾದ ಮೂಗುರಾಣಿ ಹಾಕಿಲ್ಲ. ಆಗಿಂದಾಗ್ಗೆ ಆ ಸೊಸೈಟಿಗಳು ಹೀಗೆ ಕೆಲಸ ಮಾಡುತ್ತಿವೆ ಎಂಬುದನ್ನು ಮರಾಮತ್ತಾಗಿ ಹೋಗಿ ಇನ್‌ಸ್ಪೆಕ್ಷನ್ ಮಾಡುತ್ತಿಲ್ಲ. ಹಿಂದಿಲ್ಲ ಕಾಲದಲ್ಲಿ ಸರ್ಕಾರದವರು ವೇಷ ಮರೆಸಿಕೊಂಡು ಊರುಗಳಲ್ಲಿ ಬರ್ತಿಲ್ಲ ಏನೇನು ಮಾತ ಕಥೆಗಳು ನಡೆಯುತ್ತಿವೆ ಎನ್ನುವುದನ್ನು ಹೇಗೆ ಅರಿತುಕೊಳ್ಳುತ್ತಿದ್ದರೋ ಹಾಗೆಯೇ ಈ ದಿವಸ ನೀವೂ ರಾತ್ರಿ ವೇಳೆಗಳಲ್ಲಿ ವೇಷ ಬದಲಾಯಿಸಿಕೊಂಡು ಈ ಸೊಸೈಟಿಗಳ ವಿಚಾರದಲ್ಲಿ ಎಲ್ಲೆಲ್ಲಿ ಜನರು ಏನೇನು ಮಾತನಾಡಿಕೊಳ್ಳುತ್ತಿದ್ದಾರೆಂಬುದನ್ನು ನೋಡಬೇಕು. ಆದರೆ ಆ ರೀತಿ ನೀವು ಮಾಡುತ್ತಿಲ್ಲ. ಈ ದಿವಸ ಮಂತ್ರಿಗಳಾಗಿರತಕ್ಕವರು ಎಲ್ಲ ಚಪ್ಪರಗಳನ್ನು, ತಮಗಾಗಿ ಹಾಕಿದ್ದಾರೆ, ಎಲ್ಲಿ ಜನರು ತಮ್ಮಗಾಗಿ ಹೂವಿನ ಹಾರಗಳನ್ನು ತರಿಸಿಟ್ಟಿದ್ದಾರೆ ಎಂಬ ಕಡೆಗೇ ಅವರ ಗಮನವೆಲ್ಲ ಹೋಗಿರುವಾಗ ಅವರು ಎಲ್ಲೆಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಹೇಗೆ ತಿಳಿದುಕೊಂಡಾರು! ಈ ರೀತಿ ಮಾಡಬಾರದು. ಈ ದಿವಸ ನೀವೂ ವೇಷ ಬದಲಾಯಿಸಿಕೊಂಡು ಜನರಿಗೆ ನಿಮ್ಮ ಪ್ರೋಗ್ರಾಂ ತಿಳಿಸದೆ ರಾತ್ರಿ ಕಾಲದಲ್ಲಿ ಚಾವಡಿಗಳ ಮತ್ತು ಛತ್ರ, ಊರು ಮುಂದಿನ ಸೇತುವೆ ಕಟ್ಟೆಗಳ ಮೇಲೆ ಕುಳಿತು ಜನರೂ ಭೂ ಸುಧಾರಣೆ ಬಗ್ಗೆ ಏನೇನು ಮಾತನಾಡಿಕೊಳ್ಳುತ್ತಿದ್ದಾರೆ, ಸೊಸೈಟಿಗಳ ಬಗ್ಗೆ ಏನು ಮಾತನಾಡಿಕೊಳ್ಳುತ್ತಿದ್ದಾರೆ, ರೈತರ ತೊಂದರೆಗಳೇನೇನಿರುತ್ತವೆ ಎನ್ನುವುದನ್ನು ತಿಳಿದು ನೋಡಿ. ಆಗ ನಿಮಗೆ ದೇಶದಲ್ಲಿರತಕ್ಕ ನಿಜಸ್ಥಿತಿ ತಿಳಿಯುವುದು. ಈ ದಿವಸ ರೈತನು ಕಷ್ಟಪಟ್ಟು ಬೆಳೆದಂಥಾ ದವಸ ಧಾನ್ಯಗಳನ್ನು ಮಾರಲು ಪೇಟೆಗೆ ತಂದ ಕೂಡಲೇ ಅವನಿಗೆ ನಾನಾ ತರಹೆಯ ಟ್ಯಾಕ್ಸ್‌ಗಳನ್ನು ಹಾಕಿ, ಅವನಿಂದ ವಸೂಲಾದ ದುಡ್ಡಿನಲ್ಲಿ ನಗರ ವಾಸಿಗಳು—ಟಾರ್ ರಸ್ತೆ, ನಲ್ಲಿ, ಎಲೆಕ್ಟ್ರಿಕ್ ದೀಪ, ಫ್ಯಾನ್ ಇತ್ಯಾದಿ ಸುಖಗಳನ್ನು ಪಡೆಯುತ್ತಿದ್ದೀರಿ. ಆದರೆ ಆ ರೈತನಿಗೆ ಈ ಸುಖಗಳೆಲ್ಲ ಎಲ್ಲಿವೆ! ಅವನು ಈ ದಿವಸ ನಿರ್ಗತಿಕನಾಗಿದ್ದಾನೆ. ಅವನಿಗೆ ನೀವೇನು ಸೌಲಭ್ಯಗಳನ್ನೊದಗಿಸಿ ಕೊಟ್ಟಿದ್ದೀರಿ? ಈ ದಿವಸ ತಿಪಟೂರು ಪೇಟೆಗೆ ಪ್ರತಿ ದಿನವೂ 60 ಸಾವಿರ ರೂಪಾಯಿಗಳ ಕೊಬ್ಬರಿ ಬರುತ್ತಿದೆ. ಆ ಬಗ್ಗೆ ವಿಶೇಷ ಟ್ಯಾಕ್ಸನ್ನು ವಸೂಲ್ಮಾಡಿಕೊಳ್ಳುತ್ತಿದ್ದೀರಿ. ಹಾಗೆ ಆ ರೈತನಿಂದ ಅಪಾರ ತೆರಿಗೆಯನ್ನು ವಸೂಲ್ಮಾಡಿಕೊಳ್ಳುತ್ತಿರುವಾಗ ಈ ಹೊತ್ತು ಸರ್ಕಾರದವರು ಆತನ ದನಗಳಿಗೆ ಕುಡಿಯುವ ನೀರಿಗೇನಾದರೂ ಒಂದು ಏರ್ಪಾಡನ್ನು ಇಲ್ಲಿಯವರೆಗಾದರೂ ಮಾಡಿಸಿ-

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ದ್ದೀರಾ? ಆದರೆ ಎಂದು ಹಿಂದಿದ್ದ ಸರ್ಕಾರ ಹೋಯಿತೋ, ಆ ದಿವಸವೇ ಈ ಅನುಕೂಲಗಳೆಲ್ಲ ಹೋದವು. ಹಾಗೇ ನೀವೂ ಒಂದು ದಿವಸ ಹೋಗುತ್ತೀರಿ. . . . . .

ಅಧ್ಯಕ್ಷರು.—ಹಾಗಾದರೆ ಇವರು ಅಧಿಕಾರದಿಂದ ಹೋಗಬೇಕೆಂದು ಹೇಳುತ್ತೀರಾ?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅಧ್ಯಕ್ಷರೇ, ದೇವರಾಣೆಗೂ ನನಗೆ ಇವರು ಅಧಿಕಾರದಿಂದ ಕೆಳಗಿಳಿಯಲಿ ಎಂಬ ಭಾವನೆ ನನಗಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ ರೈತನ ಅಭಿವೃದ್ಧಿಗಾಗಿ ಈ ದಿವಸ ನಮ್ಮ ಸರ್ಕಾರದವರು, ಕೇಂದ್ರ ಸರ್ಕಾರದವರು ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾವು ಐದು ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು ಏನೇನೋ ಹೇಳುತ್ತಿದ್ದಾರೆ. ಆದರೆ ನಮ್ಮ ತಾಲ್ಲೂಕಿನಲ್ಲಿ ರೈತರಿಗೇನೂ ಉಪಕಾರವಾಗಿಲ್ಲ. ಯಾರೇ ಆಗಲಿ ಅಧಿಕಾರ ಸ್ಥಾನದಲ್ಲಿರಬೇಕಾಗಿದ್ದರೆ ಅವರು ಸರಿಯಾಗಿ ಕೆಲಸ ಮಾಡಬೇಕು. ಈ ದಿವಸ ಕೇಂದ್ರ ಸರ್ಕಾರದವರು ಕೊಟ್ಟಿದ್ದಂಥಾ ಗ್ಯಾಂಟನ್ನು ಹಾಳು ಮಾಡುತ್ತಿದ್ದಾರಲ್ಲ! ಹೀಗಾದರೆ ಇವರು ಇನ್ನೇನು ಕೆಲಸ ಮಾಡುತ್ತಾರೆ? ಈ ದಿವಸ ಅನೇಕ ಮೈನರ್ ಇರಿಗೇಷ್ ಕಾಂಗಾರಿಗಳು, ಕೆರೆ-ಕಟ್ಟೆಗಳ ಜೀರ್ಣೋದ್ಧಾರ ಕಾರ್ಯ ಬಹಳವಾಗಿ ನಡೆಯಬೇಕಾದ್ದಿದೆ. ದನಗಳಿಗೆ ಅಲ್ಲಲ್ಲೇ ಗೋಮಾಳದ ಭೂಮಿ ಗಳಿಲ್ಲ. ಈ ವಿಚಾರಗಳನ್ನೆಲ್ಲ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ರೈತನಿಗೆ ಬೇಕಾದಂಥ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡಲು ತಕ್ಕ ಏರ್ಪಾಡುಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ಸ್ವಾಮಿ, ಈಗ ಸಭೆಯ ಮುಂದೆ ಇಟ್ಟಿರತಕ್ಕ ಎರಡು ಡಿಮ್ಯಾಂಡ್‌ಗಳ ಸ್ಕೈಕ್ ಮೊದಲನೆ ಡಿಮ್ಯಾಂಡಿನ ಬಗ್ಗೆ ಎರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಈಗಾಗಲೇ ನನ್ನ ಸ್ನೇಹಿತರನೇಕರು ಈ ಎರಡನೆಯ ಡಿಮ್ಯಾಂಡ್ ವಿಚಾರದಲ್ಲಿ ಬಹಳವಾಗಿ ಮಾತನಾಡಿದ್ದಾರೆ. ಆದರೆ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ವ್ಯವಸಾಯದ ಬಾಬಿನಲ್ಲಿ ಜಾಸ್ತಿ ಸಿಬ್ಬಂದಿಯನ್ನಿಟ್ಟುಕೊಂಡಿದ್ದಾರೆಂದು ಹೇಳಬೇಕಾಗಿದೆ. ಇಲ್ಲಿಯೇನೋ ಸರ್ಕಾರದವರು ನಮಗೆ ರೊಟ್ಟಿಯ ಮೇರೆ ತುಪ್ಪ ನವರಿದಂತೆ ವಿಚಾರಗಳನ್ನು ತಿಳಿಸಿಬಿಡುತ್ತಾರೆ. ಆದರೆ ಅಲ್ಲಿಗೆ ಹೋಗಿ ನೋಡಿದಾಗ ರೊಟ್ಟಿಯೂ ಇಲ್ಲ, ತುಪ್ಪದ ಪಾನನೆಯೂ ಇಲ್ಲ. ಅಲ್ಲಿ ಕೆಲಸ ಮಾಡತಕ್ಕ ಈ ಇಲಾಖೆಯ ನೌಕರ ವರ್ಗದಲ್ಲಿ ಕೋ-ಆಪರೇಷ್ ಆಗಲಿ ಮತ್ತು ಕೋ-ಆರ್ಡಿನೇಷ್ ಆಗಲಿ ಇರುವುದಿಲ್ಲ. ಒಂದು ಏರಿಗೆಳೆದರೆ ಮತ್ತೊಂದು ನೀರಿಗೆಳೆದಂತೆ ಕೆಲಸಗಳಾಗುತ್ತಿವೆ. ಹೀಗಾಗಿ ರೈತನಿಗೆ ಅತ್ಯಗತ್ಯವಾಗಿ ಆಗಬೇಕಾಗಿರುವಂಥಾ ಕೆಲಸ ಕಾರ್ಯಗಳೊಂದೂ ಜಾಗ್ರತೆಯಾಗಿ ಆಗುತ್ತಿಲ್ಲ. ಈ ವಿಚಾರದಲ್ಲಿ ನಾವೆಲ್ಲರೂ ಮಂತ್ರಿಗಳಿಗೆ ಬೇಕಾದಷ್ಟು ಹೇಳಿದ್ದೇವೆ. ರೈತರಿಗೆ ಸಬ್‌ಸಿಡಿ ಕೊಡತಕ್ಕ ವಿಚಾರದಲ್ಲಿ ನನ್ನ ಮಾನ್ಯ ಸ್ನೇಹಿತರ್ಯಾರೂ ಅಷ್ಟು ಹೇಳಿದಂತೆ ಕಾಣಲಿಲ್ಲ. ಈ ಬಗ್ಗೆ ಸರ್ಕಾರದವರು ರೈತನಿಗೆ ನೀರನ್ನೊದಗಿಸಲು ಬಾವಿಗಳಿಗಾಗಿ ಈ ದಿವಸ ಸಬ್‌ಸಿಡಿ ರೂಪದಲ್ಲಿ ಸಹಾಯ ಮಾಡುತ್ತಿದ್ದಾರೆ. ಇದು ಮುಂದೆ ದೇಶಕ್ಕೊಂದು ದೊಡ್ಡ ಆಸ್ತಿಯಾಗಿ ಉಳಿಯುತ್ತದೆ. ಇಂಥ ಒಂದು ಬಾಬನ್ನು ಅಭಿವೃದ್ಧಿಗೆ ತರಲು ಸರ್ಕಾರದವರೇಕೆ ಆಲಸ್ಯ ಮಾಡುತ್ತಿದ್ದಾರೋ ನನಗೆ ಅದು ತಿಳಿಯದಾಗಿದೆ. ಕೇಂದ್ರ ಸರ್ಕಾರದಿಂದಲೂ ಕೂಡ ಇದರ ಬಗ್ಗೆ ಒಂದು ಹೆಚ್ಚಿನ ಸಹಾಯ ಪಡೆಯಲು ಪ್ರಯತ್ನ ಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ಇಲಾಖೆಯ ನೌಕರರಿಗೆ ಕೆಲಸ ಮಾಡಲು ಅವರಲ್ಲಿ ದೇಶಾಭಿಮಾನವಿದ್ದಂತೆ ಕಾಣುತ್ತಿಲ್ಲ. "ದೇವರು ವರ ಕೊಟ್ಟರೂ ಪೂಜಾರಿ ಸುಮ್ಮನಿರುವುದಿಲ್ಲ" ಎನ್ನುವಂತೆ ಆ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಮೂರು ನಾಲ್ಕು ತಿಂಗಳುಗಳಾದರೂ ಒಂದು ಬಾವಿಯ ಹತ್ತಿರ ಹೋಗಿ ಆ ಕೆಲಸವೇನಾಯಿತೆಂಬುದನ್ನು ನೋಡುತ್ತಿಲ್ಲ. ಕಾಲ ಕಾಲಕ್ಕೆ ಸರಿಯಾಗಿ ಈ ಕೆಲಸ ಕಾರ್ಯಗಳಿಗೆ ಹಣವನ್ನೊದಗಿಸಿದರೆ ಮುಂದೆ ಅವರು ಈ ಕಾರ್ಯ ಮುಗಿಸದೆ ತಪ್ಪಿದರೆ ಆಗ ಅವರಿಂದ ಈ ಹಣವನ್ನು ವಾಪಸ್ಸು ಪಡೆಯಲು ಅವಕಾಶವಿದೆ. ಆದರೆ ರೈತನ ಉದ್ಧಾರವೊಂದೇ ಅಲ್ಲದೆ ಮುಂದೆ ದೇಶಕ್ಕೊಂದು ದೊಡ್ಡ ಆಸ್ತಿಯಾಗಿ ನಿಲ್ಲುವಂಥ ಈ ಕೆಲಸ ಕಾರ್ಯಗಳಲ್ಲಿ ಅಧಿಕಾರಿಗಳು ಹೀಗೆಲ್ಲಾ ತಾತ್ಸಾರ ಮಾಡಬಾರದು. ಈ ಬಾವಿಗಳ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಕೆಲಸ ನಡೆಸಬೇಕಾಗಿದೆ. ಯಾರು ಮೊದಲು ಬಾವಿಗಳನ್ನು ಪೂರ್ತಿಯಾಗಿ ತೆಗೆದಿರುತ್ತಾರೋ ಅಂಥವರಿಗೆ ಕೂಡಲೇ ಹಣ ಪಾವತಿ ಮಾಡುವಂಥ ಒಂದು ಏರ್ಪಾಡನ್ನು ಮಾಡಬೇಕು. ಈ ದಿವಸ ಒಂದು ಬಾವಿ ಮಾಡಿಸಬೇಕಾಗಿದ್ದರೆ ಎರಡು ಮೂರು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಆದರೆ ಈಗ ಸರ್ಕಾರದವರು 250 ರೂಪಾಯಿಗಳನ್ನು ಮಾತ್ರ ಸಬ್‌ಸಿಡಿ ರೂಪದಲ್ಲಿ ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ಎಲ್ಲಿ ಹೆಚ್ಚಿನ ಹಣದ ಅಗತ್ಯವಿದೆಯೋ ಆ ಸ್ಥಳಗಳಿಗೆ ಮೊದಲು ಈ ಅನುಕೂಲ ಕಲ್ಪಿಸುವಂತೆ ರೆವಿನ್ಯೂ ಇಲಾಖೆಯವರಿಗೆ ಸೂಕ್ತ ತಿಳುವಳಿಕೆಗಳನ್ನು ಕೊಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವ್ಯವಸಾಯದ ಇಲಾಖೆಯ ವಿಚಾರಕ್ಕೆ ಬಂದರೆ ಹಿಂದಿನ ಎರಡು ವರ್ಷಗಳಲ್ಲಿ ಈ ಇಲಾಖೆಗೆ ಬಜೆಟ್ಟಿನಲ್ಲಿ ಎಷ್ಟು ಹಣವನ್ನೊದಗಿಸಲಾಗಿತ್ತೋ ಈ ವರ್ಷವೂ ಅಷ್ಟೇ ಹಣವನ್ನೊದಗಿಸಲಾಗಿದೆ. ಈ ಇಲಾಖೆಯಲ್ಲಿ ಅಧಿಕಾರಿಗಳ ಸಂಖ್ಯೆ ಬಹಳ ಜಾಸ್ತಿಯಾಗಿದೆ. ಅನೇಕ ಅಸಿಸ್ಟೆಂಟ್ ಡೈರೆಕ್ಟರುಗಳಿದ್ದಾರೆ. ಅವರ ಮೇಲೆ ಡೆಪ್ಯುಟಿ ಡೈರೆಕ್ಟರುಗಳಿದ್ದಾರೆ. ಆನಂತರ ಡೈರೆಕ್ಟರು. ಹೀಗೆಲ್ಲಾ ಅನೇಕ ಆಫೀಸರುಗಳಿರುತ್ತಾರೆ. ಈ ದಿವಸ ನಮ್ಮ ತುಮಕೂರು ಜಿಲ್ಲೆಯಲ್ಲೂ ಸಹ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್‌ಚರ್ ಇರಬಹುದೆಂದು ಕಾಣುತ್ತದೆ. ಆದರೆ ಅವರು ಅಲ್ಲಿ ಏನು ಕೆಲಸ ಮಾಡುತ್ತಿದ್ದಾರೆಂಬುದೇ ನನಗೆ ಗೊತ್ತಾಗುತ್ತಿಲ್ಲ. ಇದೇ ರೀತಿ ಈ ದಿವಸ ಡಿವಿಜನಲ್ ಕಮಿಷನರ ಆಫೀಸುಗಳೂ ಸಹ ನಮಗೆ ಅನಗತ್ಯ ಖರ್ಚನ್ನು ಕಡಮೆ ಮಾಡಬೇಕೆಂಬ ದೃಷ್ಟಿಯಿಂದ ಇವುಗಳನ್ನೆಲ್ಲ ತೆಗೆದುಹಾಕತಕ್ಕದ್ದು ಅತ್ಯಗತ್ಯ. ಇವರಿಂದ ಕೆಲಸಗಳು ಬೇಗ ನಡೆಯುತ್ತಿಲ್ಲ. ಇವರ್ಯಾರೂ ಈ ದಿವಸ ರೈತನ ಅಭಿವೃದ್ಧಿಯ ವಿಚಾರದಲ್ಲಿ ಏನೂ ನಿಗಾ ಕೊಡುತ್ತಿಲ್ಲ. ನಿರರ್ಥಕವಾಗಿ ನಂಬಳ ತೆಗೆದುಕೊಳ್ಳುತ್ತಿದ್ದಾರೆಂದೂ, ಇವರಿಂದ ರೈತರಿಗೆ ಒಂದು ಕಾಸಿನ ಪ್ರಯೋಜನ ಕೂಡ ಆಗುತ್ತಿಲ್ಲವೆಂದೂ ನಾನು ಬಹಳ ವಿಷಾದದಿಂದ ತಿಳಿಸಬೇಕಾಗಿದೆ.

ಈಗ ಭತ್ತ ಒಂದನ್ನು ತೆಗೆದುಕೊಳ್ಳೋಣ. ಎಷ್ಟೋ ಕಡೆ ಹೋಗಿ ನೋಡಿದ್ದೇನೆ. ಭತ್ತದ ಬೆಳೆಗೆ ಏನೋ ಒಂದು ರೀತಿಯಾದ ಕಾಯಿಲೆ ಬಂದಿದ್ದರೆ ಅದನ್ನು ತಿಳಿಯಲು ಈ ಇಲಾಖೆಯ ಅಧಿಕಾರಿ

ಗಳಿಗೆ ಹೇಳಿದರೆ ಅವರು "fieldmanನ್ನನ್ನು ನೋಡಿ ಹೇಳಿದರೆ ಅವರಿಂದ ನರಿಪಡಿಸಲಾಗುವುದು" ಎಂದು ಹೇಳುತ್ತಾರೆ. ಆದರೆ ಈ fieldman ಎಲ್ಲಿರುತ್ತಾನೋ ಆ ಪರಮಾತ್ಮನಿಗೇ ಗೊತ್ತು. ಎಷ್ಟು ಜನ fieldman ಇದ್ದಾರೋ ಮತ್ತು ಇವರ ಜನ ಸಂಖ್ಯೆ ಎಷ್ಟಿದೆಯೋ ನನಗೆ ಗೊತ್ತಿಲ್ಲ. ಈ fieldman ಗಳನ್ನು ನಂಬಿಕೊಂಡಿದ್ದರೆ ಕೆಲವು ವೇಳೆ ರೈತರು ನಂಬಿಕೊಂಡಿರುವ ಬೆಳೆ ಕೂಡ ಕೆಟ್ಟು ಹೋಗುತ್ತದೆ.

ವ್ಯವಸಾಯದ ಇಲಾಖೆಯವರು ಪ್ರಚಾರ ಕಾರ್ಯವನ್ನೂ ಸಹ ಕೈಗೊಳ್ಳಬೇಕಾದ ಅವಶ್ಯಕತೆಯನ್ನು ನಾನು ಒತ್ತಿ ಹೇಳಬೇಕಾಗಿದೆ. ಸಣ್ಣ ಸಣ್ಣ ಬೀಡಿ ಮಾರಾಟ ಮಾಡುವವರು ತಮ್ಮ ಗುರುತಿನ ಬೀಡಿಗಳು ಸರಿಯಾಗಿ ಮಾರಾಟ ಮಾಡುವ ದೃಷ್ಟಿಯಿಂದ ಏರೋಪ್ಲೇನಿನಲ್ಲಿ ಕುಳಿತುಕೊಂಡು ಹೆಚ್ಚಿನ ಪ್ರಚಾರಗಳನ್ನು ನಡೆಸುತ್ತಾರೆ. ಇದೇ ರೀತಿಯಾಗಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಅಡಪರ್ಟೈಸು ಮೆಂಟುಗಳನ್ನು ಹೆಚ್ಚಿಗೆ ಮಾಡಿ ವ್ಯವಸಾಯ ಮಾಡುವ ರೈತಾಪಿ ಜನರ ಬೆಳೆಗಳಿಗೆ ಬರುವ ಕಾಯಿಲೆಗಳನ್ನು ಹೇಗೆ ತಪ್ಪಿಸಬೇಕು ಎನ್ನುವ ಬಗ್ಗೆ ಏರೋಪ್ಲೇನಿನಲ್ಲಿ ಹಾರಿಸಿ, ಬೇಕಾದರೆ ನಮ್ಮ ಮಂತ್ರಿಗಳೇ ಏರೋಪ್ಲೇನಿನಲ್ಲಿ ಕುಳಿತುಕೊಂಡು ಅಥವಾ ಡೈರೆಕ್ಟರ ವರ ಮುಖೇನ ಇಂತಿಂಥ ತತ್ವವನ್ನು ಜಾರಿಗೆ ತರಬೇಕು ಎಂದು ಎಲ್ಲ ಕಡೆಗಳಿಗೂ ಹೆಚ್ಚಿನ ಪ್ರಚಾರವಾಗುವಂತೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ನಮ್ಮ ಕಡೆಗೇನೋ ಒಬ್ಬ ಅಸಿಸ್ಟೆಂಟ್ ಡೈರೆಕ್ಟರೇನೋ ಇದ್ದಾರೆಂದು ಕೇಳಿದೆ. ಅವರಿಗೆ ಈ ಕಾಯಿಲೆಗಳನ್ನು ಹೇಗೆ ಹರಡದಂತೆ ತಡೆಯಬೇಕು, ರೈತರಿಗೆ ಯಾವ ರೀತಿ ಅನುಕೂಲಪಡಿಸಿಕೊಡಬೇಕು ಎನ್ನುವುದು ನಿಜವಾಗಿಯೂ ಗೊತ್ತಿಲ್ಲ. ನಮ್ಮ ಮಂತ್ರಿಗಳೇನೋ ಅವರೇ ಬೇಸಾಯಗಾರರು ಅವರಿಗೂ ಕೂಡ ಏನೇನೋ ಮಾಡಬೇಕೆಂಬ ಆಸೆ ಇದೆ. ಆದರೆ ಅದು ನಡೆಯುತ್ತಿಲ್ಲ. ಮತ್ತು ಅದಕ್ಕೆ ಜವಾಬ್ದಾರರಾಗಿರುವವರೂ ಆ ಅಧಿಕಾರಿಗಳು ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಆದರೆ ನಮ್ಮ ಕಡೆ ಇರುವ ಅಸಿಸ್ಟೆಂಟ್ ಡೈರೆಕ್ಟರಾಗಿರುವವರು ಬೆಳಗಾದ ತಕ್ಷಣ ಅವರಿಗೆ ಕೊಟ್ಟಿರುವ ವ್ಯಾನನ್ನು ಉಪಯೋಗಿಸಿಕೊಂಡು ತಿರುಗಿಕೊಂಡು ಬರುತ್ತಾರೆ. ಅನಂತರ ಆಫೀಸಿಗೆ ಬಂದು ಕುಳಿತುಕೊಂಡು ತಮಗೆ ಬೇಕಾದ ಸ್ನೇಹಿತರಿಗೋ ಇತರರಿಗೋ ಫೋನನ್ನು ಮಾಡುತ್ತ, ಅವರ ಸ್ನೇಹಿತರ ಅಥವ ತಮ್ಮ ಸಂಸಾರದ ವಿಚಾರಗಳನ್ನು ಚರ್ಚೆ ಮಾಡುತ್ತಿರುತ್ತಾರೆ. ಕೆಲವು ಕಡೆ ಆಫೀಸುಗಳಲ್ಲಿ ಹೀಗಾಗುತ್ತಿದೆ. ಇದರ ದೆಸೆಯಿಂದ ರೈತರಿಗೆ ತೊಂದರೆಯಾಗುತ್ತದೆ. ನಾನೇನೋ ಹೋಗಿ ಇಂತಹ ಆಫೀಸರನ್ನು ನೋಡಿಲ್ಲ. ಹೋಗಿದ್ದ ರೈತರುಗಳು ನೋಡಿ ಬಂದದ್ದು ನನ್ನ ಗಮನಕ್ಕೆ ಬಂದಿದೆ. ಅಲ್ಲದೇ ನಾನೇ ಒಂದು ಕಡೆ ಹೋಗಿದ್ದಾಗ ನೋಡಿದೆ, ಅವರು ಯಾರನ್ನೋ ಫೋನಿನಲ್ಲಿ "ನಿಮ್ಮ ಗ್ರೇಡು ಏನಾಯಿತು? ನಿಮ್ಮನ್ನು ಯಾವ ಊರಿಗೆ ವರ್ಗ ಮಾಡಿದರು" ಇಂಥ ಮಾತುಕತೆಗಳು ನಡೆಯುತ್ತಿದ್ದವು; ನಾನೇನೋ ಹೊರಗಡೆ ನಮ್ಮನೆ ರೈತನಂತೆ ಕುಳಿತಿದ್ದೆ. ಅವರಿಗೆ ನಾನು ಯಾರು ಎಂದು ತಿಳಿದಿರಲಾರದು. ಹೀಗೆ ಆಡಳಿತವನ್ನು ನಡೆಸುತ್ತಿದ್ದಾರೆ! ರೈತರಿಗೆ ಏನು ಅನುಕೂಲ ದೊರೆಯುತ್ತದೆ. ಅವರಿಗೆ ಯಾವ ರೀತಿಯಾಗಿ ಗೊಬ್ಬರ ಬೀಜಗಳು ಸಿಕ್ಕೀತು? ಇವತ್ತೇನೋ ಕೊಂಚ ರೈತರು ವಿದ್ಯಾಭ್ಯಾಸದಲ್ಲಿ ಹಿಂದುಳಿದಿರಬಹುದು. ಈಗ ಸ್ವಲ್ಪ ಹೆಚ್ಚಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇನ್ನು ಸ್ವಲ್ಪ ದಿವಸದಲ್ಲೇ ಇದರ ಪರಿಣಾಮ ಚೆನ್ನಾಗಿ ಕಾಣುತ್ತದೆ. ಈಗಲೂ ರೈತರೇನಾದರೂ ಈ ಗೊಬ್ಬರ ಹೇಗೆ ಕೊಡಬೇಕು, ಗುಳ ಏಕೆ ಕೊಡಬೇಕು ಎನ್ನುವ ವಿವರಗಳನ್ನು ಕೇಳಿದರೆ ಅದಕ್ಕೆ ತಕ್ಕ ಉತ್ತರವನ್ನು ಕೊಡಲು ಈಗಿರುವ ಅಧಿಕಾರಿಗಳಿಗೆ ಆಗುತ್ತಿಲ್ಲ. ಇವರ ಶಿಕ್ಷಣ ಈ ರೀತಿ ಇದೆ. ಈಗ ರೈತರಿಗೆ ಕೊಡುವ ಗುಳ ಎನ್ನುವುದನ್ನು ನೋಡಿ ಆ ಗುಳದ ಸ್ಯೆಜು ಎಷ್ಟು ಎಂದು ಕೇಳಿದರೆ ಅಲ್ಲರುವ ಅಧಿಕಾರಿಗೇ ಗೊತ್ತಿರುವುದಿಲ್ಲ. ಅವರೇನು ಹೇಳಾರು ನಾನು ಬೇಕಾದರೆ ಹೇಳುತ್ತೇನೆ. ಹೀಗೆ, ಅಗ್ರಿ ಕಲ್ಚರು ಡಿಪಾರ್ಟುಮೆಂಟಿನಲ್ಲಿ ತರಬೇತಾದ ಅಧಿಕಾರಿಗಳಿಲ್ಲದಿದ್ದರೆ ರೈತರಿಗೆ ಅವರ ವ್ಯವಸಾಯ ಪದ್ಧತಿಯನ್ನು ಹೇಗೆ ಮುಂದಕ್ಕೆ ತರಲು ಸಾಧ್ಯ? ಈಗ ಗುಳ ಎಂದರೆ ಎಂಥದನ್ನು ಕೊಡುತ್ತಿದ್ದಾರೆ ಎಂದರೆ ಯಾವುದೋ ಕಿಟಕಿಗೆ ಹಾಕುವ ಒಂದು ಪಟ್ಟೆಯಂತಹುದನ್ನು ಕೊಡುತ್ತಿದ್ದಾರೆ. ಅದನ್ನು ತೆಗೆದು ಕೊಳ್ಳದೆ ಹೋದರೆ ನಮಗೆ ಬೇರೆಲ್ಲೂ ಸಿಗುವುದಿಲ್ಲ. ಕೊಳ್ಳದಿದ್ದರೆ ಸಾಧ್ಯವಿಲ್ಲ. ಅದರಿಂದಾಗಿ ನಾವು ತೆಗೆದುಕೊಳ್ಳಬೇಕು. ಈ ಇಲಾಖೆಯ ಮಂತ್ರಿಗಳಾಗಿ ಹಿಂದೆ ಇದ್ದ ಡಾಕ್ಟರು ನಾಗನಗೌಡರು ಇದ್ದ ಕಾಲದಲ್ಲಿ ಎಷ್ಟೆಷ್ಟು ಕೊಟ್ಟಿದ್ದರೋ ಅದನ್ನೇ ನಮ್ಮ ಈಗಿನ ಮಂತ್ರಿಗಳೂ ಕೂಡ ಮುಂದುವರಿಸಿಕೊಂಡು ಬಂದಿದ್ದಾರೆ ಮತ್ತು ಅದಕ್ಕಿಂತ ಜಾಸ್ತಿ ಏನೂ ಕೊಟ್ಟಿಲ್ಲ. ಈಗಲೂ ಅಷ್ಟೇ ಇದೆ. ಅದರಿಂದ ಈ ಗುಳಗಳ ಪ್ರಶ್ನೆಯನ್ನು ನರಿಪಡಿಸಬೇಕು.

ಎರಡನೆಯದು, ನಮ್ಮ ಮಂತ್ರಿಗಳು ವ್ಯವಸಾಯದ ವಿಚಾರವಾಗಿ ಮಾತನಾಡುತ್ತ ಹೋದ ನಾರಿ ಪ್ರತಿ ಹಳ್ಳಿಗೂ ಒಂದೊಂದು ಹೋರಿಯನ್ನು ಕೊಡುತ್ತೇವೆಂದು ಹೇಳಿದ್ದರು. ಆ ರೀತಿಯಾಗಿ ಹೋರಿಗಳನ್ನು ಇದುವರೆಗೂ ಯಾವ ಹೋಬಳಿಗೂ ಕೊಟ್ಟಿಲ್ಲ. ಏಕೆ ಕೊಡಲಿಲ್ಲವೋ, ಏನೋ ಕಾರಣವೋ ತಿಳಿಯಲಿಲ್ಲ. ಹೀಗೆ ಹೋರಿಗಳನ್ನು ಕೊಡದೇ ಹೋದರೆ, ಈಗ ಹೋರಿಗಳನ್ನು ಇಟ್ಟುಕೊಂಡಿರುವವರಿಗಾದರೂ ಸ್ವಲ್ಪ ಮಟ್ಟಿನ ಸಹಾಯವನ್ನು ಸರಕಾರದವರು ಮಾಡಿದರೆ ಈಗಿರುವ ಹೋರಿಗಳನ್ನಾದರೂ ಚೆನ್ನಾಗಿ ಇಡುತ್ತಾರೆ.

ಇನ್ನೊಂದು ವಿಷಯ: ದನಕರುಗಳಿಗಾಗಿ ವೆಟರ್ನರಿ ಇನ್ಸ್‌ಪೆಕ್ಟರುಗಳಿರುತ್ತಾರೆಂದು ಆಡಳಿತದ ಪ್ರಕಟಣೆಯಲ್ಲಿ ಹೇಳಿದ್ದಾರೆ. ಆದರೆ ಹಳ್ಳಿಗಳಲ್ಲಿ ದನಕರುಗಳಿಗೆ ಕಾಯಿಲೆ ಬಂದರೆ ಮೊದಲು ಯಾರಿಗೆ ಕಾಗದ ಬರೆಯಬೇಕು, ಎನ್ನುವುದೇ ಸರಿಯಾಗಿ ತಿಳಿಯುವುದಿಲ್ಲ. ಹಳ್ಳಿಗಳಲ್ಲಿರುವ ಇನ್ಸ್‌ಪೆಕ್ಟರಿಗೆ ಸುದ್ದಿ ಕೊಡಬೇಕು, ಅವರು ಔಷಧಿಗಳನ್ನು ತರಿಸಿ ಕೊಡಬೇಕು. ಇವೆಲ್ಲವನ್ನೂ ಮಾಡಿ ಬರುವಷ್ಟರಲ್ಲಿ ಎಷ್ಟೋ ದನಕರುಗಳು ಸತ್ತು ಹೋಗುತ್ತವೆ. ಇದರಿಂದ ಈ ದನಕರುಗಳನ್ನು ನೋಡಿ ಕೊಳ್ಳಲು ತಕ್ಕಷ್ಟು ವೆಟರ್ನರಿ ಆಸ್ಪತ್ರೆಗಳನ್ನು ನೇಮಿಸುವುದು ಅಗತ್ಯ.

ಹೊನ್ನುಡಿಕೆ ಎಂಬ ಊರು ನಮ್ಮ ತಾಲ್ಲೂಕಿನಲ್ಲಿದೆ. ಅಲ್ಲಿ ಒಂದು ದೊಡ್ಡ ಜಾತ್ರೆ ಪ್ರತಿ ವರ್ಷವೂ ನಡೆಯುತ್ತದೆ ಅಲ್ಲಿಗೆ ಸಾವಿರಾರು ದನಕರುಗಳು, ಇತರ ಜಾನುವಾರುಗಳೂ ಬರುತ್ತವೆ. ಅಲ್ಲಿಯ ಜನ ಅಲ್ಲಿಗೆ ಒಂದು ವೆಟರ್ನರಿ ಆಸ್ಪತ್ರೆ ಬೇಕೆಂದು ಕೇಳುತ್ತಿದ್ದಾರೆ. ಇದನ್ನು ಹಿಂದೆ ಇದ್ದ ಮಂತ್ರಿಗಳೂ ಕೂಡ ಕೊಡುತ್ತೇವೆಂದು ಹೇಳಿದ್ದರು. ಈಗಿರುವ ಮಂತ್ರಿಗಳೂ ಕೊಡಿಸಿಕೊಡುತ್ತೇನೆಂದು ಹೇಳಿದ್ದಾರೆ. ಆದರೂ ಇನ್ನೂ ಕೊಟ್ಟಿಲ್ಲ. ಇದರಿಂದ ದನಕರುಗಳಿಗೆ ಬಹಳ ತೊಂದರೆಯಾಗುತ್ತಿದೆ. ಅದಷ್ಟು ಬೇಗ ಈ

(ಶ್ರೀ ಕೆ. ಎಲ್. ನರಸಿಂಹಯ್ಯ)

ವೆಟರ್ನರಿ ಆಸ್ಪತ್ರೆಯನ್ನು ಕೊಡಿಸಿಕೊಡಬೇಕೆಂದು ಹೇಳಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರು ಈಗಾಗಲೇ ಹೇಳಿರುವ ಪ್ರಕಾರ ಆಹಾರದ ಬೆಳೆಗಳನ್ನು ಬೆಳೆಯುವ ವ್ಯವಸಾಯದ ಇಲಾಖೆಯು ಬಹಳ ಪ್ರಾಮುಖ್ಯವಾದುದು. ವ್ಯವಸಾಯವನ್ನೇ ನಮ್ಮಾರು ಎಷ್ಟೆತ್ತು ಭಾಗ ಜನಗಳು ಅವಲಂಬಿಸಿರುವುದರಿಂದ, ವ್ಯವಸಾಯದ ದೃಷ್ಟಿಯಲ್ಲಿ ಇಲಾಖೆಯು ಸ್ವಯಂಪೂರ್ಣತೆಯನ್ನು ಪಡೆಯುತ್ತೇವೆಂದು ತಿಳಿದುಕೊಂಡಿದ್ದೆವು. ಕಳೆದ ಹತ್ತಾರು ವರ್ಷಗಳಿಂದ ಅನೇಕ ಆಶೋತ್ತರಗಳನ್ನು ಕೊಟ್ಟರೂ ಪರಿಪೂರ್ಣತೆಯನ್ನು ಆಹಾರದ ಬಗ್ಗೆ ಪಡೆಯುತ್ತೇವೆ ಎಂದು ತಿಳಿದುಕೊಂಡಿದ್ದರೂ ಕೂಡ, ಆ ರೀತಿ ಆಗಲಿಲ್ಲ. ಈ ಇಲಾಖೆಯಿಂದ ಸಾರ್ವಜನಿಕರಿಗೆ ಸಾಲದ ರೂಪದಲ್ಲಿ ಮತ್ತು ಇತರ ರೂಪದಲ್ಲಿ ನೆರವು ಕೊಡುತ್ತಿದ್ದರೂ ಪರದೇಶದಿಂದ ಆಹಾರವನ್ನು ತರಿಸಿ ಹಂಚುತ್ತಿದ್ದಾರೆ. ಈ ಮಧ್ಯೆ ಆಹಾರದ ಪರಿಪೂರ್ಣತೆಯನ್ನು ಮಾಡಲು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತಿದ್ದರೆ ಅದು ಹೇಗೆ ಆಗುತ್ತದೆ! ಬಹಳ ಸಂಕಟದಿಂದ ಹೇಳಬೇಕಾಗಿದೆ! ದೇಶವೆಲ್ಲ ವ್ಯವಸಾಯವನ್ನೇ ಅವರಿಸಿಕೊಂಡಿರುವಂತಿದ್ದರೂ ಇವತ್ತಿನ ದಿವಸ ಆಹಾರದ ಅಭಾವ ಎದ್ದು ಕಾಣುತ್ತಿದೆ. ಇದು ಜನತೆಯ ಮತ್ತು ನಮ್ಮ ದೌರ್ಭಾಗ್ಯ ಎಂದು ಹೇಳಬಹುದು. ಈ ವರ್ಷ ನಮ್ಮ ದೇಶದ ಆಹಾರದ ಚಿತ್ರ ಹೇಗಿದೆ ಎಂದರೆ ಆಹಾರವನ್ನು ಪರದೇಶದಿಂದ ತರಿಸಿ ನಮ್ಮ ದೇಶದಲ್ಲಿ ಆಹಾರವಿಲ್ಲದೆ ಇರುವ ಪ್ರದೇಶಗಳಿಗೆ ಹಂಚುವುದಕ್ಕಾಗಿ ನಮ್ಮಾರು ಎಷ್ಟತ್ತು ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಈಗಿರುವ ಯೋಜನೆಯ ಪ್ರಕಾರ ಬರುವ ನಾಲ್ಕೈದು ವರ್ಷಗಳ ಕಾಲ ಇನ್ನೂ ಆಹಾರ ಪದಾರ್ಥಗಳನ್ನು ಪರದೇಶದಿಂದ ತರಿಸಿಕೊಳ್ಳಬೇಕಾಗಿದೆ. ನಮ್ಮಾರು ಹನ್ನೊಂದು ಅಥವಾ ಹನ್ನೆರಡು ಮಿಲಿಯನ್ನು ಟನ್ನುಗಳಷ್ಟು ಆಹಾರವನ್ನು ಆಮದು ಮಾಡಿಕೊಳ್ಳಬೇಕಾಗಬಹುದು. ಇದರ ಖರ್ಚು ನಮ್ಮಾರು ಐನೂರರಿಂದ ಆರನೂರು ಕೋಟಿ ರೂಪಾಯಿಗಳಷ್ಟಾಗಬಹುದು. ಇಷ್ಟು ಹಣವನ್ನು ನೀವು ಖರ್ಚುಮಾಡಿ ಪರದೇಶಕ್ಕೆ ದುಡ್ಡು ಕೊಟ್ಟು ವೆಚ್ಚ ಮಾಡುವುದಕ್ಕೆ ಬದಲಾಗಿ ನಮ್ಮವರೇ ಏಕೆ ಇಲ್ಲಿ ಹೆಚ್ಚಿನ ಆಹಾರವನ್ನು ಬೆಳೆಯುವಂತೆ ಮಾಡುವುದಕ್ಕಾಗುವುದಿಲ್ಲವೇ ಎಂಬ ಒಂದು ಶಂಕೆ ನಮ್ಮಲ್ಲಿದೆ. ಕಾರಣವೇನು ಎಂದರೆ, ನಮ್ಮ ಸರಕಾರದವರು ಹೀಗೆ ಕೋಟ್ಯಾಂತರ ರೂಪಾಯಿಗಳಷ್ಟು ಆಹಾರವನ್ನು ಆಮದು ಮಾಡುವುದಕ್ಕೆ ಬದಲಾಗಿ ಇವತ್ತಿನ ದಿವಸ ನಮ್ಮ ದೇಶದಲ್ಲಿಯೇ ಹೆಚ್ಚಿನ ಕೃತಕ ಗೊಬ್ಬರ ತಯಾರುಮಾಡಬೇಕಾದ ಅಗತ್ಯವಿದೆ. ಹೀಗೆ ಮಾಡಿದರೆ ನಮ್ಮ ದೇಶದಲ್ಲೇ ನಮ್ಮಾರು ನಲವತ್ತು ಅಥವಾ ಐವತ್ತು ಲಕ್ಷ ಟನ್ನುಗಳಷ್ಟು ಕೃತಕ ಗೊಬ್ಬರವನ್ನು ತಯಾರು ಮಾಡಬಹುದು, ಆದರೆ ಈಗ ನಮ್ಮಲ್ಲಿ ಸುಮಾರು ಏಳೆಂಟು ಲಕ್ಷ ಟನ್ನುಗಳಷ್ಟು ಕೃತಕ ಗೊಬ್ಬರ ಮಾತ್ರ ತಯಾರಾಗುತ್ತಿದೆ ಮತ್ತು ಅದನ್ನು ಪ್ರಸಾದ ವಿನಿಯೋಗ ಮಾಡುವ ಹಾಗೆ ಹಂಚಿದರೆ ಅದರಿಂದ ಏನೂ ಪ್ರಯೋಜನ ದೊರಕುವುದಿಲ್ಲ. ಅದರಿಂದ ಸಾಕಷ್ಟು ಪ್ರಮಾಣದಲ್ಲಿ ಫರ್ಟಿಲೈಜರು ಗಳನ್ನು ಏರ್ಪಡಿಸಿ ನಾವು ಗೊಬ್ಬರವನ್ನು ಹಂಚುವ ಏರ್ಪಾಡು ಮಾಡದಿದ್ದರೆ ನಮ್ಮ ರಾಜ್ಯ ಆಹಾರದ ವಿಚಾರದಲ್ಲಿ ಎಂದೆಂದಿಗೂ ಸ್ವಯಂ ಪರಿಪೂರ್ಣತೆಯನ್ನು ಪಡೆಯಲುಸಾಧ್ಯವಿಲ್ಲ. ಹೊರದೇಶದಿಂದ ನಾವು ತರಿಸಿ ರೈತರಿಗೆ ಒದಗಿಸಿಕೊಡುವುದು ಕಷ್ಟವಾಗುತ್ತದೆ. ಆಹಾರ ಹೆಚ್ಚಾಗದೆ ಇರುವುದಕ್ಕೆ ಕಾರಣ ಇಷ್ಟೇ: ನಮ್ಮ ದೇಶದಲ್ಲಿ ಬೇಕಾದಷ್ಟು ಜಮೀನಿದೆ. ಅದರಲ್ಲೂ ಕೆಲವು ಭಾಗಗಳಲ್ಲಿ ಎಷ್ಟೋ ಲಕ್ಷ ಎಕರೆಗಳಲ್ಲಿ ಬೆಳೆಯೇನೋ ಆಗುತ್ತಿದೆ. ಬೇಸಾಯವೇನೋ ಆಗುತ್ತದೆ; ಆದರೆ ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕೋ ಅಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತಿಲ್ಲ. ನಾನು ಪ್ರವಾಸ ಮಾಡುವ ಕಾಲದಲ್ಲಿ ಅನೇಕ ಕಡೆಗಳಲ್ಲಿ ಹೈರು ಹಾಳಾಗಿ ಹೋಗಿರುವುದನ್ನು ನೋಡಿದ್ದೇನೆ. ರಾಗಿ, ಜೋಳ, ಭತ್ತ ಮುಂತಾದ ಬೆಳೆಗಳನ್ನು ಬೆಳೆಯುವುದರಲ್ಲಿ ವ್ಯತ್ಯಾಸವಿದೆ. ಕೆಲವು ಜಮೀನುಗಳಲ್ಲಿ ಎಕರೆಗೆ ಇಪ್ಪತ್ತು ಪಲ್ಲ ಬೆಳೆ ಬೆಳೆಯಬಹುದು. ಅದರ ಪಕ್ಕದಲ್ಲಿರುವ ಜಮೀನಿನಲ್ಲೆ ಎಂಟು ಹತ್ತು ಪಲ್ಲ ಮಾತ್ರ ಬೆಳೆಯಬಹುದು. ಇದಕ್ಕೆ ಕಾರಣ ಸಕಾಲದಲ್ಲಿ ಇವರಿಗೆ ಗೊಬ್ಬರ ಸಿಕ್ಕುತ್ತಿಲ್ಲ. ಬೀಜಗಳು ಸಿಕ್ಕುತ್ತಿಲ್ಲ. ಅದರಲ್ಲೂ ರೈತನ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಎಷ್ಟು ಪ್ರಮಾಣದ ರಾಗಿ ಅಥವಾ ಭತ್ತವನ್ನು ಬೆಳೆಯಬೇಕೆಂದಿರುತ್ತಾನೋ ಅಷ್ಟನ್ನೂ ಬೆಳೆಯುವುದಕ್ಕೆ ಆಗುತ್ತಿಲ್ಲ.

ಎರಡನೆಯದಾಗಿ ಬೆಳೆಯಾಗತಕ್ಕ ಒಂದು ಜಮೀನಿನ ಅಂದಾಜು ಇದೆ. ಅದರ ಅಂಕಿ ಅಂಶಗಳು ನಮ್ಮಲ್ಲಿದೆ. ನಮಗೆ ಆಹಾರಾಭಾವ ಇರುವ ಕಾಲದಲ್ಲಿ ನಾವು ಜಮೀನನ್ನು ಸರಿಯಾದ ರೀತಿಯಲ್ಲಿ, ಸಾಮರ್ಥ್ಯದಿಂದ ಉಪಯೋಗಮಾಡಿಕೊಳ್ಳದೆ ಇದ್ದೇವೆ. ನಮ್ಮಲ್ಲಿರುವ ಅಂಕಿ ಅಂಶಗಳಿಂದ ಹೊರಪಟ್ಟಿರುವ ಪ್ರಕಾರ ಲಕ್ಷಾಂತರ ಎಕರೆಗಳ, ವ್ಯವಸಾಯಕ್ಕೆ ಯೋಗ್ಯವಾಗಿರುವ ಜಮೀನು ಇದೆ. ಆದರೆ ಸರಿಯಾದ ರೀತಿಯಲ್ಲಿ ವ್ಯವಸಾಯಮಾಡುತ್ತಿಲ್ಲ. ವ್ಯವಸಾಯದ ಕಸಬನ್ನೇ ಅವಲಂಬಿಸಿರತಕ್ಕ ಕೂಲಿಕಾರರಿಗೆ ಸರಿಯಾದ ಸೌಲಭ್ಯ ದೊರಕದೆ ಇರುವುದರಿಂದ ಆ ಜಮೀನನ್ನೆಲ್ಲ ಸಾಗುವಳಿಮಾಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ಸರ್ಕಾರದವರು ವ್ಯವಸಾಯ ಮಾಡುವುದಕ್ಕೆ, ಬೆಳೆಯನ್ನು ಬೆಳೆಯುವುದಕ್ಕೆ ಲಾಯಕ್ ಆಗಿರುವ ಜಮೀನಿನಲ್ಲಿ ಕಡ್ಡಾಯವಾಗಿ ಬೆಳೆಯನ್ನು ಬೆಳೆಯುವುದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸಮಾಡಬೇಕು. ಇಲ್ಲದೆ ಇದ್ದರೆ ಇನ್ನು 10-20 ವರ್ಷಗಳಲ್ಲ, ನೂರು ವರ್ಷಗಳಾದರೂ ನಮ್ಮಲ್ಲಿ ಆಹಾರಾಭಾವವಿದ್ದೇ ಇರುತ್ತದೆ.

ವ್ಯವಸಾಯಗಾರರಿಗೆ ಸಾಮಗ್ರಿಗಳನ್ನು ಯಾವ ರೀತಿಯಲ್ಲಿ ಒದಗಿಸುತ್ತಿದ್ದಾರೆಂದರೆ, ನನ್ನ ಮಾನ್ಯ ಮಿತ್ರರು ಹೇಳಿರುವಂತೆ ಸಕಾಲದಲ್ಲಿ ಒದಗಿಸುತ್ತಿಲ್ಲ. ಇದರಿಂದ ರೈತನಿಗೆ ಸರಿಯಾದ ಕಾಲದಲ್ಲಿ ವ್ಯವಸಾಯ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು, ಭೂಮಿಯನ್ನು ಪಾಕುಮಾಡಿ, ಸಾಗುವಳಿಮಾಡಿ ಬಿತ್ತನೆಯನ್ನು ಮಾಡುವುದಕ್ಕೆ ಅವಕಾಶವಾಗದೆ ಇರುತ್ತದೆ. ಸರಿಯಾದ ಬೆಳೆ, ಯಾವ ಪ್ರಮಾಣದಲ್ಲಿ ಬೆಳೆ ಬರಬೇಕೋ ಆ ಪ್ರಮಾಣದಲ್ಲಿ ಬರದೆ ಇರುವುದಕ್ಕೆ ಇದೇ ಒಂದು ಕಾರಣವೆಂದು ಹೇಳಬೇಕಾಗಿದೆ.

ಆಯಾಯ ತಾಲ್ಲೂಕುಗಳಲ್ಲಿ ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳಿದ್ದಾರೆ. ಅವರಲ್ಲಿ ಎಲ್ಲರೂ ಕೂಡ ಒಂದು ತಾತ್ಸಾರಭಾವದಿಂದ ಕೆಲಸಮಾಡುತ್ತಾರೆಂದು ಹೇಳುವುದಿಲ್ಲ. Community Development ಬ್ಲಾಕುಗಳಲ್ಲಿ ವ್ಯವಸಾಯದ ಇಕ್ಸ್‌ಪೆಕ್ಟರ್ ಇದ್ದಾರೆ. ಇವರನ್ನು extension officer ಎಂದು ಕರೆಯುತ್ತಾರೆ. ಅವರು ಯಾವ ರೀತಿಯಲ್ಲಿ ಯಾವ ಮಟ್ಟದಲ್ಲಿ ಕೆಲಸಮಾಡುತ್ತಾ

ರೆಂದರೆ ಸರ್ಕಾರ ಮತ್ತು ಇಲಾಖೆಯವರು ಈ ಅಧಿಕಾರಿಗಳು ಯಾವ ಮಟ್ಟದಲ್ಲಿ ಕೆಲಸಮಾಡಬೇಕೆಂದು ನಿರೀಕ್ಷೆಮಾಡಿದ್ದಾರೆಯೋ ಅದರಲ್ಲಿ ಹತ್ತನೆಯ ಒಂದು ಭಾಗದಷ್ಟು ಕೆಲಸವನ್ನು ಸಹ ಮಾಡುತ್ತಿಲ್ಲ. ಇಲ್ಲಿ ಸಹ ರಾಜಕೀಯವಿದೆ. ತಮಗೆ ಬೇಕಾದವರಿಗೆ ಗೊಬ್ಬರ ಒದಗಿಸುವುದು, ಬೀಜ ಒದಗಿಸುವುದು, ಅಥವ ಬೀಜವನ್ನು ತಯಾರು ಮಾಡಲು ತಮಗೆ ಬೇಕಾದವರ ಜಮೀನನ್ನು ಚುನಾಯಿಸಿಕೊಂಡು, ಅವರಿಗೆ ಸರ್ಕಾರದಿಂದ ಸೌಲಭ್ಯಗಳನ್ನು ಕೊಡಿಸಿ, ಬೀಜ ವಗೈರೆ ತಯಾರುಮಾಡುವುದಕ್ಕೆ ಪ್ರಯತ್ನಮಾಡುವುದು, ಇತ್ಯಾದಿ ಕೆಲಸಗಳನ್ನು ಮಾಡುವುದರಿಂದ ಜನಗಳಿಗೆ ಒಂದು ರೀತಿಯ ಅಲಸ್ಯ ಪುಂಟಾಗಿದೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ವರ್ತನೆ ಮಾಡಿದರೆ, ಅಸಹಕಾರಭಾವನೆ ಮೂಡುತ್ತದೆ. ಇದನ್ನೆಲ್ಲ ತಡೆಗಟ್ಟಲು ಸರ್ಕಾರದವರು ಯಾವುದೇ ರೀತಿಯಿಂದ, ರಾಷ್ಟ್ರದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ. ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಗಾಡಿ ಪಟ್ಟೆಕೊಡುವ ವಿಷಯದಲ್ಲಿ ರೈತರು ಪಟ್ಟೆ ಕೊಡಿ ಎಂದು ಕೇಳುವುದಕ್ಕೆ ಹೋದರೆ ಪಟ್ಟೆಯ ಜೊತೆಗೆ ದೂರಿಯನ್ನು ತೆಗೆದುಕೊಂಡರೆ ಪಟ್ಟೆಯನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಗಾಡಿ ಪಟ್ಟೆ ಸಾಮಾನ್ಯವಾಗಿ, ಸರಿಯಾಗಿ ಉಪಯೋಗಿಸಿದರೆ ಎರಡು ಮೂರು ವರ್ಷ ಬರುತ್ತದೆ. ಆದರೆ ಧುರಿ 20-25 ವರ್ಷ ಬರುತ್ತದೆ. ಧುರಿಯನ್ನು ತೆಗೆದುಕೊಂಡರೆ ಮಾತ್ರ ಗಾಡಿ ಪಟ್ಟೆಯನ್ನು ಕೊಡುತ್ತೇವೆ ಎನ್ನುವುದರಿಂದ ನಿಜವಾಗಿಯೂ ರೈತನು ಗಾಡಿ ಪಟ್ಟೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಧುರಿ ಮತ್ತು ಪಟ್ಟೆಯನ್ನು ಒಂದೇ ಪ್ರಮಾಣದಲ್ಲಿ ತಯಾರು ಮಾಡುತ್ತ ಇರುವುದರಿಂದ ಪಟ್ಟೆಯನ್ನು ಮಾತ್ರ ತೆಗೆದುಕೊಂಡುಹೋದರೆ ಧುರಿ ಖರ್ಚಾಗುವುದಿಲ್ಲ, ಸರ್ಕಾರಕ್ಕೆ ನಷ್ಟವಾಗುತ್ತದೆಂಬ ದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದಾರೆಂದು ಕಾಣುತ್ತದೆ. ಆದುದರಿಂದ ಗಾಡಿ ಪಟ್ಟೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರುಮಾಡಿ ಸಕಾಲದಲ್ಲಿ ರೈತರಿಗೆ ಒದಗಿಸುವುದಕ್ಕೆ ಪ್ರಯತ್ನಮಾಡಬೇಕು.

Experimental farm ಗಳು scientific ಆಗಿ ಯಾವರೀತಿ develop ಆಗಿವೆ ಎಂಬ ಬಗ್ಗೆ ಮಾನ್ಯ ಮಿತ್ರರು ಹೇಳಿದರು. ನಾನು ಸೂಚನೆ ಕೊಡುವುದು ಇಷ್ಟೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಹೋಬಳಿಗಳಿವೆ. ಆಯಾ ಹೋಬಳಿಗಳಲ್ಲಿ ಇರುವ ನೂರು ಹಳ್ಳಿಗಳನ್ನು ಹತ್ತು ಭಾಗಮಾಡಿ, ಹತ್ತು ಹಳ್ಳಿಗಳಿಗೆ ಒಂದೊಂದು ಗ್ರೂಪ್‌ಮಾಡಿ, ಅಲ್ಲಿ ಸರಿಯಾದ ರೀತಿಯಲ್ಲಿ ವ್ಯವಸಾಯಮಾಡಿ, ಸರಿಯಾದ ರೀತಿಯಲ್ಲಿ ಬೀಜ, ಗೊಬ್ಬರ ವಗೈರೆ ಎಲ್ಲವನ್ನೂ ಕೊಟ್ಟು, ಇಲಾಖೆಯವರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡಿಸಿ ಪ್ರಚಾರಮಾಡಿ, ಚೆನ್ನಾಗಿ ವ್ಯವಸಾಯವನ್ನು ಮಾಡಬೇಕೆಂದು ರೈತರಿಗೆ ತಿಳಿವಳಿಕೆ ಕೊಟ್ಟರೆ, ಆಹಾರ ಹೆಚ್ಚಿಗೆ ಉತ್ಪತ್ತಿಯಾಗುತ್ತದೆಂದು ನನಗನ್ನಿಸುತ್ತದೆ. ಈ ದೃಷ್ಟಿಯಿಂದ ಈ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕು.

ನಾವು ಇಪ್ಪೊತ್ತಿನ ದಿವಸ ಟ್ರಾಕ್ಟರುಗಳು, ಬುಲ್ ಡೋಜರುಗಳು ಇವುಗಳ ಸಹಾಯದಿಂದ ವೈಜ್ಞಾನಿಕ ರೀತಿಯಲ್ಲಿ ಆಹಾರೋತ್ಪತ್ತಿಯನ್ನು ಮಾಡುತ್ತೇವೆಂದು ಆಲೋಚನೆಮಾಡಿದರೂ, ಪ್ರಸಕ್ತ ವಾತಾವರಣದಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ. ನಮ್ಮ ಜನ ಹಳೆಯ ಪದ್ಧತಿಯನ್ನು, ಕಂದಾಚಾರವನ್ನು ಉಪಯೋಗಿಸಿಕೊಂಡು ಕೆಲಸ ಮಾಡೋಣ, ಪಶುಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡೋಣ ಎಂದರೆ ಅದೂ ಕೂಡ ಆಗುತ್ತಿಲ್ಲ. ಕಾರಣ ನಮ್ಮಲ್ಲಿ ಪಶುಸಂಪತ್ತು ಬಹಳ ಕಡಮೆ. ಆದುದರಿಂದ ಈ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಟ್ಟು ಹೆಚ್ಚಿಗೆ ದನಗಳನ್ನು ಮತ್ತು ಎತ್ತುಗಳನ್ನು ಒದಗಿಸುವುದಕ್ಕೆ ಪ್ರಯತ್ನಮಾಡಬೇಕು. ಪಶುಗಳನ್ನು ಕಾಪಾಡಲು ಔಷಧಿಗಳನ್ನು ಒದಗಿಸುವ ನಿಟ್ಟಿನಲ್ಲಿ Mobile Veterinary Vans ಮಾಡಿ, ಅದರಲ್ಲಿ ಹಳ್ಳಿಗಳಿಗೆ ಹೋಗಿ ಔಷಧಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*Dr. R. NAGAN GOWDA (Hospet).—Mr. Speaker, I must congratulate the department on having succeeded in getting an increased grant from the Government of India. I must also congratulate them on their being able to spend almost Rs. 56 lakhs more than they spent last year on agriculture. They have an increase of 14 lakhs on research and experiment staff, an increase of 4 lakhs on education and there is a significant decrease in establishment by about Rs. 26,000. This, I notice, is because of the fact that some staff have been transferred to the N.E.S. and C.D. Blocks. An anomalous position has been created by transferring some of these Agricultural Inspectors and Demonstrators to the N.E.S. and C.D. Blocks. I would only suggest to the Government to investigate and find out whether this is working satisfactorily.

Under Revenue, they have shown an excess of Rs. 4 lakhs.

Under Sugarcane Cess Fund they had 10 lakhs last year and this year 14 lakhs. I do not know whether they have taken full credit for the Sugarcane Cess Fund that they will be able to get this year. A large number of factories have gone into operation—the Mandya Sugar Factory, the Hospet Factory and the Salar Jung Mills; there is Siruguppa Factory and the Shimoga Factory that has gone into operation this year. I am glad to get news from Kampli that the Kampli Sugar Factory has also gone into operation from yesterday morning. This is a matter which we should all be proud of. In this connection may I suggest that the request of the people of Gangavathi where under the Thungabhadra project

(DR. R. NAGAN GOWDA)

almost 20,000 acres of Sugarcane will be available, where people have been asking for a co-operative factory, whether this Government would not help to start another factory? The increase in revenue from all sources on account of the new sugarcane factory is great, I suggest this for the attention of the Government.

One of the important things that we are concerned in agriculture is food production and on this I want to concentrate my attention during the few minutes I have been given. Both the Director of Agriculture and the Commissioner for Food Production are interested only in this. I am glad that they have got about 100 new schemes under the Second Five-Year Plan. These schemes deal with A to Z in agricultural operations. My friend, Sri Srinivasa Shetty, was caught napping; he did not notice that there was a scheme in his own District. He also spoke about the need for a sugarcane scheme. I notice that there is a scheme for development of sugarcane in South Kanara. The Commissioner for Food Production along with the Director of Agriculture has got a big staff under him. About Rs. 5·84 lakhs are spent on the staff under him. They are supposed to take care of the various schemes that go to increase our food production. I would like to offer a few remarks on the various schemes.

I may first take up the scheme for tractors and bulldozers. I notice that Rs. 3 lakhs have been provided for the purchase of tractors under the hire purchase system. This is a very popular scheme. I wish Government had provided Rs. 30 lakhs for this scheme. It is only a loan that you are giving and you can be sure that it will be returned to you with interest.

I am glad that you are spending a lot of money on hire of tractors for cultivation purposes. I feel that tractors owned by cultivators are much better used. If you can also help the owners of tractors to come and learn the latest mechanism of tractors, it will, be much more useful to them.

I notice from the figures that are given that you have got 116 drivers for tractors and bull-dozers. There is also a very big number of helpers to them. May I suggest very humbly that you hold periodical revision classes for these drivers and helpers to learn the latest mechanism and also to take care of the broken parts and how to keep the machines running in a good condition.

There is another big scheme undertaken by the Department and that is the seed multiplication scheme. We are going to have 56 farms covering an area of about 1,400 acres. This is a very ambitious scheme. They are spending about Rs. 32 lakhs this year. Next year it will be increased to Rs. 60 lakhs. This is a very necessary scheme and I hope every effort will be made to make it a success. I would say: "Produce your seeds in your own farms economically and take the opportunity to send all your men in the department including Inspectors and Demonstrators to get a turn to work in these agricultural seed farms. Also do not forget to send the agricultural graduates to get practical training at least for a year in these farms where you will have plenty of opportunities to train these young men."

Under the scheme for distribution of fertilizers, they have provided Rs. 3·37 lakhs for giving super phosphate and bonemeal at concessional rates. I have got one suggestion to make and that is to distribute these fertilizers quickly and in time.

Then, they are spending about Rs. 22 lakhs for hire purchase of electric pump sets and for extension of lands. I remember that in 1954-55 and earlier they used to spend about Rs. 50 to 60 lakhs on this scheme. This year they have provided only Rs. 17 lakhs for extension of lands and Rs. 5 lakhs for hire purchase of pumps. Can they not give a little more? I wish they had provided Rs. 70 lakhs. There is very great need for these electric pump sets.

Then, they have provided Rs. 4 lakhs for loan to panchayats to make compost fertilizer. The officers that are concerned with this scheme should go

to the villages and induce the Panchayat Board Presidents to use this money to make compost manure in their villages.

Under plant protection scheme they have provided Rs. 3 lakhs. I would suggest that some good machines may be placed at the hands of the Agricultural Inspectors. Some of the sprayers are not good. I wish you had given them better ones.

Under fisheries we are getting only a very small amount as revenue. I think it is about Rs. 2½ lakhs only. May I bring to the notice of Government that from Mettur alone from the reservoir the Government of Madras was getting about Rs. 2½ lakhs as profit from fishing. Mettur reservoir is much smaller than the Tungabhadra reservoir. If you only stock that reservoir with good fish and train the people who have lost their homes and whose lands have been submerged under the reservoir, in the art of fishing and help them to preserve them and dry them and send them on to the market, you will be getting much more income than what you are getting now.

* ಶ್ರೀ ಜಿ. ಎಂ. ಚಿನ್ನಸ್ವಾಮಿ (ಬೆಳಗೆರೆ).— ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಡಿಮ್ಯಾಂಡನ್ನು ಅನುಮೋದಿಸುತ್ತಾ, ಕೆಲವು ಸಲಹೆಗಳನ್ನು ಕೊಡಬೇಕೆಂದಿಚ್ಛಿಸುತ್ತೇನೆ. ಸ್ವಾಮಿ, ನೀವೀಗ ವ್ಯವಸಾಯದ ಇಲಾಖೆಯ ಇನ್‌ಸ್ಪೆಕ್ಟರುಗಳನ್ನು ನೇಮಿಸಿರುತ್ತೀರಲ್ಲ ಅವರಿಗೆ ಹೈರಿಗೆ ಯಾವ ರೋಗ ಬಂದಿದೆ, ಯಾವ ಔಷಧಿಯನ್ನು ಉಪಯೋಗಿಸಬೇಕೆಂಬುದೂ ಗೊತ್ತಿರುವುದಿಲ್ಲ. ಇಂಥವರನ್ನು ನೇಮಿಸುವುದರಿಂದ ರೈತರಿಗೆ ಅನುಕೂಲವಾಗುವ ಬದಲು ತೊಂದರೆಯೇ ಜಾಸ್ತಿ. ಆದ್ದರಿಂದ ಈ ಕೆಲಸಕ್ಕೆ ಸರಿಯಾಗಿ ತಿಳಿದಿರುವವರನ್ನು ನೇಮಿಸಬೇಕೆಂದು ಹೇಳುತ್ತೇನೆ.

ಆಹಾರವನ್ನು ಹೆಚ್ಚಿಗೆ ಬೆಳೆಯಿರೆಂದು ಹೇಳುತ್ತೀರಿ. ಇದಕ್ಕೆ ರೈತರಿಗೆ ತಕ್ಕ ಉತ್ತೇಜನ ಕೊಡಬೇಕು. ತಾಲ್ಲೂಕುವಾರು ಒಂದು Prize ಇಟ್ಟು, ಯಾರು ಹೆಚ್ಚಿಗೆ ಬೆಳೆಯುತ್ತಾರೆ ಅವರಿಗೆ Prize ಕೊಡಲಾಗುತ್ತದೆಂದು ಹೇಳಿದರೆ ರೈತರು ಹುಮ್ಮಸ್ಸಿನಿಂದ ಹೆಚ್ಚಿಗೆ ಬೆಳೆಯುವುದಕ್ಕೆ ಉತ್ತುಕರಾಗುತ್ತಾರೆ.

ಇನ್ನೊಂದು ಸಲಹೆಯೇನೆಂದರೆ, ವ್ಯವಸಾಯದ ಇನ್‌ಸ್ಪೆಕ್ಟರುಗಳನ್ನು ಒಂದು ತಾಲ್ಲೂಕನ್ನೆಲ್ಲಾ ಪೂರ್ತಾ ಒಬ್ಬರೇ ಸುತ್ತಬೇಕೆಂದು ಹೇಳಿದರೆ ಬಹಳ ಕಷ್ಟ. ಬಸ್ಸುಗಳು ಎಷ್ಟೋಕಡೆ ಹೋಗುವುದಿಲ್ಲ. ಸೈಕಲ್ಲುಗಳು ಕೂಡ ಹೋಗುವುದಿಲ್ಲ. ಅವರಿಗೆ ಒಂದು ವಾಹನ ಸೌಕರ್ಯವನ್ನು ಏರ್ಪಡಿಸಿಕೊಟ್ಟು ಪ್ರತಿ ತಾಲ್ಲೂಕಿಗೂ ಹೆಚ್ಚು ಇನ್‌ಸ್ಪೆಕ್ಟರುಗಳನ್ನು ನೇಮಿಸಬೇಕೆಂದು ಹೇಳುತ್ತೇನೆ.

ಆಮೇಲೆ ರೈತರುಗಳಿಗೆ ನೀವು ಈಗ ಕೊಡುತ್ತಿರುವ ಸಾಲದ ಪೊಬಲಗು ಬಹಳ ಕಡಮೆಯೆಂದು ಹೇಳುತ್ತೇನೆ. ಏಕೆಂದರೆ, ಬಾಗಾಯಿತಿಗೆ 100 ರೂಪಾಯಿಗಳು, ತರೀ ಜಮೀನಿಗೆ 50 ರೂಪಾಯಿ, ಖುಷ್ಕಿ ಜಮೀನಿಗೆ 25 ರೂಪಾಯಿಗಳನ್ನು ಕೊಡುತ್ತೀರಿ. ಇದನ್ನು ಬಾಗಾಯಿತಿಗೆ 150 ರೂಪಾಯಿಗಳಂತೆಯೂ, ತರೀ ಜಮೀನುಗಳಿಗೆ 100 ರೂಪಾಯಿಗಳಂತೆಯೂ, ಖುಷ್ಕಿಗೆ 50 ರೂಪಾಯಿಗಳಂತೆಯೂ ಹೆಚ್ಚಿಸಬೇಕೆಂದು ಹೇಳುತ್ತೇನೆ.

ವ್ಯವಸಾಯಗಾರರಿಗೆ ಗೊಬ್ಬರ ಹಾಕುವುದಕ್ಕೆ ಮುಂತಾದ ವ್ಯವಸಾಯದ ಕೆಲಸಗಳಿಗೆ ಲಾರಿ ಸೌಕರ್ಯವನ್ನು ಒದಗಿಸಿಕೊಟ್ಟರೆ ಎಷ್ಟೋ ಅನುಕೂಲ ವಾಗುತ್ತದೆ. ಈಗ ಜಮೀನ್ದಾರರುಗಳು ಜಿತ್ತಿ ರಿಪೋರ್ಟ್ ಬರುತ್ತದೆಂದು ಹೇಳಿ ಎತ್ತ ಮುಂತಾದುವುಗಳ ಸಹಾಯ ಒದಗಿಸುವುದಿಲ್ಲ. ಆದ್ದರಿಂದ ವ್ಯವಸಾಯದ ಇಲಾಖೆಯ ಲಾರಿಗಳನ್ನು ಗೊಬ್ಬರ ಹೊಡೆಸುವುದಕ್ಕೆ ಕೊಟ್ಟರೆ ರೈತರಿಗೆ ಬಹಳ ಅನುಕೂಲ ವಾಗುತ್ತದೆಂದು ಹೇಳುತ್ತೇನೆ.

ವ್ಯವಸಾಯಕ್ಕೆ ಬಹಳ ಮುಖ್ಯವಾದ ಅನುಕೂಲ ವೆಂದರೆ, ಪಂಪು ಸೆಟ್ಟುಗಳನ್ನು ಒದಗಿಸುವುದು. ಈಗಾಗಲೆ ಕೆಲವು ಪಂಪುಸೆಟ್ಟುಗಳನ್ನು ಒದಗಿಸ ಲಾಗಿದೆ. ಆದರೆ ಇದು ಸಾಕಾದಷ್ಟು ಪ್ರಮಾಣದಲ್ಲಿಲ್ಲ.

ಅವುಗಳನ್ನು ಇರಿಗೇಷ್ ಸೌಲಭ್ಯಗಳಿಲ್ಲದ ಕಡೆ ಆದಷ್ಟು ಹೆಚ್ಚಿಸಬೇಕು.

ವೆಟೆರಿನರಿ ಆಸ್ಪತ್ರೆಗಳಲ್ಲಿ ಸರಿಯಾದ ಡಾಕ್ಟರು ಗಳು ಇರಬೇಕು. ಏನು ರೋಗಗಳು ತಗುಲಿವೆ ಎಂದು ಅವರಿಗೆ ಗೊತ್ತಾದರೆ ತಾನೆ ಅವರಿಗೆ ಔಷಧಿ ಕೊಡುವುದಕ್ಕೂ ಮತ್ತು ಏನಾದರೂ ಮಾಡುವುದಕ್ಕೂ ಸಾಧ್ಯ. ಒಂದು ಸಾರಿ ನಮ್ಮ ಕಡೆ ಚಪ್ಪೆರೋಗ ಬಂದಿತು. ಪರೀಕ್ಷೆ ಮಾಡಿ, ಬ್ಲಡ್ ತೆಗೆದುಕೊಂಡು, ಚಪ್ಪೆರೋಗ ಎಂದು ತಿಳಿದುಕೊಂಡು, ಔಷಧಿ ತರಿಸಿ, ಇನಾಕ್ಯುಲೇಶನ್ ಕೊಡುವುದರಲ್ಲಿಯೇ ಬೇಕಾದಷ್ಟು ದನಗಳು ನತ್ತು ಹೋದುವು. ಈ ರೀತಿ ಆದರೆ ರೈತರು ಬದಕುವುದಕ್ಕೆ ಸಾಧ್ಯವಿಲ್ಲ. ಜಾನುವಾರುಗಳಿಗೆ ರೋಗ ಬಂದು 20-25 ದಿವಸಗಳು ಆಗಿ ಹೋಗಿದ್ದರೂ ಏನೂ ಕಾರ್ಯಕ್ರಮಗಳನ್ನು ತೆಗೆದು ಕೊಂಡಿರುವುದಿಲ್ಲ. ಇದರಿಂದ ಬಹಳ ತೊಂದರೆಯಾಗು ತ್ತದೆ. ಪರಿಶ್ರಮವಿರುವ ಡಾಕ್ಟರುಗಳು ಇರಬೇಕು. ಔಷಧಿ ಸೌಲಭ್ಯವನ್ನು ಆದಷ್ಟು ಜಾಗ್ರತೆಯಾಗಿ ಒದಗಿಸಬೇಕು.

ಬತ್ತನೆ ಬೀಜವನ್ನು ಒದಗಿಸಬೇಕು. ಜಪಾ ಮಾದರಿ ಬೀಜವನ್ನು ಹಾಕಿ ಬೆಳೆಯಬೇಕು ಆ ರೀತಿ ಬೆಳೆದರೆ ಒಂದಕ್ಕೆರಡರಷ್ಟು ಬೆಳೆ ಕೊಡುತ್ತದೆ ಎಂದು ಹೇಳುತ್ತೀರಿ. ಜಪಾ ವಿಧಾನದಲ್ಲಿ ಬೆಳೆ ಎತ್ತುವುದು ನನಗೇ ಗೊತ್ತಿಲ್ಲದಿರುವಾಗ, ರೈತರಿಗೆ ಇದು ಹೇಗೆ ಗೊತ್ತಿದೆ? ಅಗ್ರಿಕಲ್‌ಚರ್ ಇನ್‌ಸ್ಪೆಕ್ಟರುಗಳು ಈ ವಿಧಾನದಲ್ಲಿ ಯಾವ ರೀತಿ ಬೆಳೆಯಬೇಕೆಂಬ ಸಲಹೆಗಳನ್ನು ಈಗಲೇ ರೈತರಿಗೆ ಕೊಡಬೇಕು. ಅವರು ಜೂಜ ಜುಲೈ ತಿಂಗಳುಗಳಲ್ಲಿ ಎಂಟು ದಿವಸ ಕ್ಯಾಂಪ್ ಮಾಡಿ ಹೊರಟುಹೋದರೆ ಏನೂ ಪ್ರಯೋಜನವಾಗುವು ದಿಲ್ಲ. ಮುಂಚೆಯೇ ಹಳ್ಳಿಗಳಿಗೆ ಹೋಗಿ, ಏನು ಗೊಬ್ಬರ ಉಪಯೋಗಿಸಬೇಕು, ಹೇಗೆ ಬೆಳೆಯ ಬೇಕೆಂಬುದನ್ನು ರೈತರಿಗೆ ತಿಳಿಸಬೇಕು.

ಮಾನ್ಯ ಸದಸ್ಯರೊಬ್ಬರು ಹೇಳಿದರು, ಹೆಬ್ಬಾಳ ದಲ್ಲಿರುವ ವ್ಯವಸಾಯ ಕಾಲೇಜಿನಿಂದ ಏನು ಅನು ಕೂಲವೂ ನಮಗೆ ಕಂಡುಬಂದಿಲ್ಲವೆಂದು. ಕೊನೆಯ ಪಕ್ಷ ಸಾವಿರ ಎಕರೆಯಲ್ಲಾದರೂ ವ್ಯವಸಾಯ ಕಾಲೇಜಿ ನವರು ಉತ್ಪನ್ನ ಮಾಡಿದ್ದಾರೆಯೇ?

(ಶ್ರೀ ಜಿ. ಎಂ. ಚಿನ್ನಸ್ವಾಮಿ)

ಮಾನ್ಯ ಮಂತ್ರಿಗಳು ಇವುಗಳನ್ನೆಲ್ಲಾ ಪರ್ಯಾಲೋಚಿಸಿ, ರೈತರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಡ್ಯಾವಮ್ಮ (ಗಂಡಸಿ ಕ್ಷೇತ್ರ).—ಮಾನ್ಯ ಅಧ್ಯಕ್ಷರೆ, 1958-59ನೆ ಸಾಲಿನ ಇವತ್ತಿನ ಡಿಮ್ಯಾಂಡ್‌ನ್ನು ನಾನು ಅನುಮೋದನೆ ಮಾಡುತ್ತಾ, ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

ನಮ್ಮ ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲಿ ಆಲೂಗೆಡ್ಡೆಯು ಮುಖ್ಯವಾದ ಬೆಳೆಯಾಗಿರುತ್ತದೆ. ಪ್ರತಿ ವರ್ಷವೂ ಸುಮಾರು ಮೂರು-ನಾಲ್ಕು ಲಕ್ಷ ರೂಪಾಯಿನಷ್ಟು ಬಿತ್ತನೆ ಬೆಳೆಯಾಗುತ್ತಿತ್ತು. ಈಗ ಕೆಲವು ವರ್ಷಗಳಿಂದ ಯೋಗ್ಯ ಬಿತ್ತನೆಮಾಲು ದೊರೆಯದೆ, ಬಿತ್ತನೆ ಮಾಡಿದಮೇಲೆ ಲಕ್ಷಾಂತರ ರೂಪಾಯಿ ನಷ್ಟು ನಷ್ಟವಾಗಿದೆ. ಸರ್ಕಾರದವರು ಪರಿಶೋಧನೆ ನಡೆಸಿ ಬಿತ್ತನೆಗೆ ಯೋಗ್ಯವಾದ ಮಾಲನ್ನು ಒದಗಿಸಿದರೆ, ಈ ಬೆಳೆಯಿಂದ ನಮ್ಮ ರೈತರು ಮುಂದುವರೆಯಲು ಅವಕಾಶವಾಗುತ್ತದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಈವರ್ಷ ಪರಿಶೋಧನೆ ನಡೆಸಿ, ಬಿತ್ತನೆ ಆಲೂಗೆಡ್ಡೆಯನ್ನು ಒದಗಿಸಿ, ರೈತರ ಏಳಿಗೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ

ನಮ್ಮ ಕ್ಷೇತ್ರದಲ್ಲಿ ಜಾವಗಲ್ಲು ಹೋಬಳಿಗೆ ಒಂದು ಪಶುಗಳ ಆಸ್ಪತ್ರೆ ಕೊಡಬೇಕೆಂದು ಅನೇಕ ವರ್ಷಗಳಿಂದಲೂ ಕೇಳುತ್ತಾ ಇದ್ದಾರೆ. ಅದಕ್ಕೆ ಕಟ್ಟಡವನ್ನು ಕಟ್ಟಿಸಿಕೊಡುತ್ತೇನೆಂದು ದಾನಿಗಳಾದ ಒಬ್ಬ ಮಹನೀಯರು ಸರ್ಕಾರಕ್ಕೆ ಮುಚ್ಚಳಿಕೆಯನ್ನು ಸಹ ಬರೆದುಕೊಟ್ಟಿದ್ದಾರೆ. ಆಸ್ಪತ್ರೆಗೆ ಕಟ್ಟಡವನ್ನು ಕಟ್ಟಲು ಅನುಮತಿ ಕೊಟ್ಟು, ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಹಾಸನ ಜಿಲ್ಲೆಯ ಗಂಡಸಿ ಕ್ಷೇತ್ರಕ್ಕೆ ಸೇರಿದ ಗಂಡಸಿ, ಜಾವಗಲ್ಲು, ದುದ್ದ ಈ ಮೂರು ಹೋಬಳಿಗಳಲ್ಲಿ ಪಶು ವೈದ್ಯಶಾಲೆ ಇಲ್ಲದೆ ಇರುವುದರಿಂದ ಪ್ರತಿಯೊಂದು ಹೋಬಳಿಗೂ ಒಂದೊಂದು ಪಶುವೈದ್ಯಶಾಲೆ ಕೊಡಬೇಕೆಂದು ನಾನು ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ.

*ಶ್ರೀ ಬಿ. ವಿ. ದೇಸಾಯಿ (ಗಂಗಾವತಿ).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ನಮ್ಮ ಮುಂದಿರುವ ವ್ಯವಸಾಯಶಾಖೆಗೆ ಸಂಬಂಧಪಟ್ಟ ಎರಡು ಕೋಟಿ 14 ಲಕ್ಷ ರೂಪಾಯಿನ ಡಿಮ್ಯಾಂಡ್‌ಮನವಿಯನ್ನು ಹೃತ್ಪೂರ್ವಕವಾಗಿ ನಮರ್ಥಿಸುತಾ, ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಈ ವ್ಯವಸಾಯ ಶಾಖೆಯಿಂದ ಯಾವುದಾದರೂ ಸಹಾಯ ರೈತನಿಗೆ ನೇರವಾಗಿ ದೊರೆಯಬೇಕಾದರೆ, ಈ ಇಲಾಖೆಗೆ ನಮ್ಮ ಬಜೆಟಿನಲ್ಲಿ ಒದಗಿಸಿರುವ ರೂಪಾಯಿ 2,14,27,000 ಬಹಳ ಕಡಿಮೆ. ಇದಕ್ಕೆ ಹೆಚ್ಚು ಹಣ ಒದಗಿಸತಕ್ಕದು ಯೋಗ್ಯವಿತ್ತು.

ನಮ್ಮ ನೂತನ ಮೈಸೂರಿನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ತರಹ ಆಹಾರ ಧಾನ್ಯಗಳು ಬೆಳೆಯುತ್ತವೆ ಮತ್ತು ಇನ್ನಿತರ ಪ್ರಾದಕ್ಟುಗಳೂ ಇವೆ. ಉತ್ತರ ಕರ್ಣಾಟಕ ಮತ್ತು ಹೈದರಾಬಾದ್ ಕರ್ಣಾಟಕದ ಕಡೆ ಜೋಳ ಮತ್ತು ಗೋಧಿ ಹೆಚ್ಚಾಗಿ ಬೆಳೆಯುತ್ತಾರೆ. ಹಳೆ ಮೈಸೂರಿನಲ್ಲಿ ರಾಗಿ ಬೆಳೆ ಹೆಚ್ಚು. ಹೀಗಿದ್ದುವಾಗ ಆಯಾಭಾಗಗಳಲ್ಲಿ ಬೆಳೆಯತಕ್ಕಂಥ ದವಸ ಮತ್ತಿತರ ಆಹಾರ ಪದಾರ್ಥಗಳ ವಿಚಾರದಲ್ಲಿ ಸಂಶೋಧನೆ ಮಾಡಲು ಒಂದು ಕಾಲೇಜನ್ನೋ, ಒಂದು ಸೀಡ್ ಫಾರಮ್‌ನ್ನೋ ತೆಗೆಯುವ ಯೋಚನೆ ಮಾಡಬೇಕು. ನಮ್ಮ ಹೈದರಾಬಾದ್ ಕರ್ಣಾಟಕ ಮತ್ತು ಉತ್ತರ ಕರ್ಣಾಟಕದ ಕಡೆ ಹತ್ತಿ ಮತ್ತು ಜವಾರನ್ನು ಹೆಚ್ಚಿಗೆ ಬೆಳೆಯುತ್ತಾರೆ. ರಾಯಚೂರು, ಗುಲ್ಬರ್ಗ ಮತ್ತು ಬಿದರ್ ಡಿಸ್ಟ್ರಿಕ್ಟುಗಳಲ್ಲಿ ನೋಡಿದರೆ ಹತ್ತಿ ಮತ್ತು ಜವಾರ್ ಬಹಳ ಹೆಚ್ಚು. ಆ ಡಿಸ್ಟ್ರಿಕ್ಟುಗಳಲ್ಲಿ ರಿಸರ್ಚ್ ಸ್ಟೇಶ್ ಮತ್ತು ಇನ್ನು ಯಾವ ಯಾವ ರೀತಿಯ ಸ್ಕೂಲ್ ಫಾರಮ್‌ಗಳು, ಕಾಲೇಜು ಫಾರಮ್‌ಗಳು ರೀಜನಲ್ ಫಾರಮ್‌ಗಳು, ಡೆಮಾನ್ಸ್ಟ್ರೇಷ್ ಫಾರಮ್‌ಗಳು ಮತ್ತು ಅಗ್ರಿಕಲ್ಚರ್ ಫಾರಮ್‌ಗಳು ಇವುಗಳನ್ನು ಕಲ್ಪಿಸಿಲ್ಲ. ವ್ಯವಸಾಯ ಏರಿಯಾದ ಮ್ಯಾಪು ಕೊಟ್ಟಿದ್ದಾರೆ. ಅದನ್ನು ನೋಡಿದರೆ ಗೊತ್ತಾಗುತ್ತದೆ. ಗುಲ್ಬರ್ಗ ಮತ್ತು ಬಿದರ್ ನಲ್ಲಿ ಇವುಗಳನ್ನು ತೆರೆಯಲು ವ್ಯವಸಾಯ ಮಂತ್ರಿಗಳಾದ ಶ್ರೀ ರುದ್ರಪ್ಪನವರು ಇವುಗಳ ಬಗ್ಗೆ ಹೆಚ್ಚು ಮುತುವರ್ಜಿ ವಹಿಸಬೇಕು.

ಇಷ್ಟೇ ಇಲ್ಲ. ರಾಯಚೂರ್, ಬಿಜಾಪುರ್ ಮತ್ತು ಧಾರವಾರ್ ಈ ಮೂರ ಡಿಸ್ಟ್ರಿಕ್ಟುಗಳನ್ನು ನೋಡಿದರೆ ಸಾಧಾರಣವಾಗಿ 4/5ನೇ ಪ್ರದೇಶದಲ್ಲಿ 20 ಲಕ್ಷ ಎಕರೆ ಮೇಲೆ ಹತ್ತಿ ಬೆಳೆಯುತ್ತಾರೆ. ಇವುಗಳಲ್ಲಿ ಯಾವ ಭಾಗದಲ್ಲಿಯೂ ಚೆಕ್ಸ್‌ಟೈಲ್ ಮಿಲ್‌ಗಳು ಇಲ್ಲ. ರಾಯಚೂರು ಡಿಸ್ಟ್ರಿಕ್ಟಿನಲ್ಲಿ 62 ಸಾವಿರ ಎಕರೆ ಹತ್ತಿ ಪ್ರದೇಶ ಇದೆ. ಆದರೆ ಬರತಕ್ಕಂಥ ಹತ್ತಿ ಬಹಳ ಕಡಮೆ. ಕಾರಣ, ಅಲ್ಲಿ ವ್ಯವಸಾಯ ಶಾಖೆಯಿಂದ ಸಾಕಷ್ಟು ಲಾಭ ದೊರೆತಿಲ್ಲ. ರಾಯಚೂರಿನಲ್ಲಿ ಕಾಟನ್ ರಿಸರ್ಚ್ ಸ್ಟೇಷನ್ ತೆರೆಯುವ ಬಗ್ಗೆ ಸರ್ಕಾರ ಮುತುವರ್ಜಿ ವಹಿಸಬೇಕು.

ನಮ್ಮಲ್ಲಿ ಸರಿಯಾದ ಬೀಜಗಳು ಸಿಕ್ಕುತ್ತಿಲ್ಲ. ಲಕ್ಷ್ಮಿ ಮತ್ತು ಜಯಧರ್ ಬೀಜಗಳೆಂದು ಇವೆ ಜಯಧರ್ ಹತ್ತಿ ಬೀಜಗಳು ಹೆಚ್ಚು ದೊರಕುವಂತೆ ಮಾಡಬೇಕು. ಮೀಡಿಯಮ್ ಸ್ಟೇಪಲ್ ಮತ್ತು ಲಾಂಗ್ ಸ್ಟೇಪಲ್ ಎಂದು ಇವೆ. ಲಾಂಗ್ ಸ್ಟೇಪಲ್ ಕಾಟ್ ಬಹುಶಃ ಇಲ್ಲಿ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಇದನ್ನು ಈಜಿಪ್ಟಿನಿಂದ ತರಿಸುತ್ತಿದ್ದೆವು. ಈಚೆಗೆ ಈಜಿಪ್ಟಿನಿಂದ ತರಿಸುವುದನ್ನು ಬಂದ್ ಮಾಡಿದ್ದಾರೆ. ಕಾಶ್ಮೀರದಿಂದ ಆಲೂಗೆಡ್ಡೆ ಬೀಜ ತರಿಸಿ ಬೆಳೆ ಬೆಳೆಯುತ್ತಾ ಇದ್ದೆವು. ಅದೇ ಪ್ರಕಾರ ಈಜಿಪ್ಟಿನಿಂದಲೂ ಹತ್ತಿ ಬೀಜವನ್ನು ಮೊದಲು ತರಿಸುತ್ತಿದ್ದೆವು. ಈಗ ಇಂಡಿಯಾ ಸರ್ಕಾರದ ಇಂಪೋರ್ಟ್ ಪಾಲಸಿಯಿಂದಲೋ ಏನೋ ಬೀಜ ತರಿಸುತ್ತಿಲ್ಲ. ಆದ್ದರಿಂದ ಏನಾದರೂ ಮಾಡಿ ಲಾಂಗ್ ಸ್ಟೇಪಲ್ ಕಾಟ್ ಬೆಳೆಯುವ ನಲುವಾಗಿ, ಒಂದು ರಿಸರ್ಚ್ ಸ್ಟೇಷ್ ತೆರೆಯುವ ಯೋಚನೆ ಮಾಡಬೇಕು ಎಂದು ಮಂತ್ರಿಗಳಲ್ಲಿ ಕೇಳುತ್ತೇನೆ.

5-30 P.M.

ಇನ್ನೊಂದು ವಿಷಯ. ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರ ಜಲಾಶಯ ವಿದೆ. ಅಲ್ಲಿ ಅರುಲಕ್ಷ ಎಕರೆ ಆಯಕಟ್ಟಿದೆ. ಇದರಲ್ಲಿ light and heavy irrigation ವಿಭಾಗವಿದೆ. ಈಗ ಅಲ್ಲಿ ಒಂದು ಸಂಶೋಧನಾಲಯವಿದೆ. ಆದರೂ non-irrigated cotton ಮತ್ತು ಜವಾರ್ ಬೆಳೆಯಲು ಯಾವ ಪ್ರದೇಶ ಸರಿಹೋಗುತ್ತದೆ, ಯಾವ ಯಾವ ಪ್ರದೇಶ ಹತ್ತಿ ಬೆಳೆಗೆ ಯೋಗ್ಯ ಯಾವುದು ಜೋಳ ಬೆಳೆಯುವುದಕ್ಕೆ ಉಪಯೋಗವಾಗುತ್ತದೆ ಎನ್ನುವುದನ್ನು ಇನ್ನೂ ಕಂಡು ಹಿಡಿದಿಲ್ಲ. ಅಲ್ಲದೇ ಅಲ್ಲಿ irrigated areaದಲ್ಲಿ ಉಪಯೋಗಿಸಲು ತಕ್ಕ ಬೀಜ ಸಿಕ್ಕುವುದು ಯೋಗ್ಯವಿದೆ.

ಬೀಜ ಮತ್ತು ಗೊಬ್ಬರದ ಬಗ್ಗೆ ಎರಡು ಮಾತು ಹೇಳಬೇಕಾಗಿದೆ. ಮಂತ್ರಿಗಳಿಗೆ ಮೊದಲೇ ಹೇಳಿದ್ದೇನೆ. ಗೊಬ್ಬರದ ಬಗ್ಗೆ bungle ಆಗಿದೆ. ಅದನ್ನು ವಿಚಾರಣೆ ನಡೆಸಬೇಕು. ಗೊಬ್ಬರ ಒದಗಿಸಲು ಸಬ್ಸಿಡಿಕೊಡುವ ಯೋಜನೆಮಾಡಬೇಕು. ಕಾಂಪೋಸ್ಟ್ ಗೇನೋ ಸಹಾಯ ಸಿಕ್ಕುತ್ತಿದೆ. ಆದರೆ ಕೃತಕ ಗೊಬ್ಬರ ಒದಗಿಸಲು ಸಹಾಯ ಸಿಕ್ಕುತ್ತಿಲ್ಲ. ಮೊದಲು 22ರೂಪಾಯಿ ಇದ್ದ ಅಮೋನಿಯಂ ಸಲ್‌ಫೇಟ್ ಈಗ 28 ರೂಪಾಯಿ ಆಗಿದೆ. ಇದಕ್ಕೆ 37-38ಸಾವಿರ ರೂಪಾಯಿ ಸಬ್ಸಿಡಿಕೊಡಬೇಕೆಂದಿದೆ. ಇದಕ್ಕೆ ಬದಲು ಈಗ ಎಂಟು ಹತ್ತುರೂಪಾಯಿ ಬೆಲೆ ಹೆಚ್ಚಿಸಿರುವುದನ್ನು ಕಡಮೆಮಾಡಿ ಹೋದವರ್ಷ ಕೊಡುತ್ತಿದ್ದಂತೆ 22ರೂಪಾಯಿಗೇ ಕೊಟ್ಟರೆ ರೈತರಿಗೆ ಸಹಾಯವಾಗುತ್ತದೆ. ಗೊಬ್ಬರಕ್ಕೆ ಸಹಾಯದ್ರವ್ಯ ಕೊಡುವುದಲ್ಲದೆ ಕೃತಕ ಗೊಬ್ಬರಕ್ಕೂ ಕೂಡ ಸಹಾಯಧನ ಕೊಡಬೇಕು.

ಹಿಂದೆ ಬುಲ್‌ಡೋಜರ್, ಗ್ರೇಡಿಂಗ್, ಟ್ರ್ಯಾಕ್ಟರ್ ಗಳನ್ನೊದಗಿಸಿ ಸಹಾಯಮಾಡುತ್ತಿದ್ದರು. ಇದರ ಉದ್ದೇಶ ಕಡಮೆ ಖರ್ಚಿನಲ್ಲಿ ಹೆಚ್ಚು ಸೌಕರ್ಯ ದೊರೆಯಲಿ ಎಂಬುದು. ಆದರೆ ಈಚೆಗೆ ಇದರಿಂದ ಆದಾಯ ಬರಲೆಂದೋ ಏನೋ ಇದರ ಚಾರ್ಜುಗಳನ್ನು ಹೆಚ್ಚಿಸಿದ್ದಾರೆ. ಬುಲ್‌ಡೋಜರುಗಳಿಗೆ ಒಂದು ತಾನು ಕೆಲಸಮಾಡಲು 25ರೂಪಾಯಿ ಚಾರ್ಜುಮಾಡುತ್ತಿದ್ದರು. ಈಗ 30-35 ರೂಪಾಯಿ ಮಾಡಿದ್ದಾರೆ. ನಮ್ಮ ಕಡೆ ಇರುವ ಹಳ್ಳದಿಣ್ಣೆಗಳನ್ನು ಸರಿಮಾಡಬೇಕಾದರೆ ಬುಲ್‌ಡೋಜರ್ ಗ್ರೇಡಿಂಗ್‌ಬೇಕು. ಹೀಗೆಯೇ ಟ್ರ್ಯಾಕ್ಟರ್‌ಗೂ ಹೆಚ್ಚಿಸಿದ್ದಾರೆ. ಅಲ್ಲದೆ ಈಗ cash payment ಪದ್ಧತಿ ಮಾಡಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗಿದೆ. ಮಂತ್ರಿಗಳು ಇದನ್ನೆಲ್ಲಾ ಗಮನಿಸಿ ವ್ಯವಸಾಯಗಾರರಿಗೆ ಸೌಲಭ್ಯಗಳನ್ನು ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. Short term loan ಕೊಡುವುದು ಬೆಳೆಯ ಆಧಾರದ ಮೇಲೆ ಕೊಡಬೇಕು. ಏಕೆಂದರೆ ನಮ್ಮ ಕಡೆ ಹಾಗೂ ಇಲ್ಲಿಯೂ ಕೂಡ ಸಾಧಾರಣವಾಗಿ ರೈತನಿಗೆ ಭೂಮಿ ಇರುವುದಿಲ್ಲ. ಎರಡನೆಯವರ ಭೂಮಿಯನ್ನು ಮಾಡುತ್ತಿರುತ್ತಾನೆ. ಅವನ ಹೆಸರಿಗೆ ಪಟ್ಟೆ ಇರುವುದಿಲ್ಲ. ಆದಕಾರಣ ಅವನಿಗೆ ಸಾಲ ಸಿಕ್ಕುವುದಿಲ್ಲ. ಭೂಮಿ ಇದ್ದವರಿಗೆ ಮಾತ್ರ ಈ ಅಲ್ಪಕಾಲಾವಧಿಯ ಸಾಲಸಿಕ್ಕುತ್ತದೆಯೇ ಹೊರತು ಜಮೀನಿಲ್ಲದವರಿಗೆ ಬೆಳೆಯಮೇಲೆ ಸಾಲ ಸಿಕ್ಕುವುದಿಲ್ಲ. ಬಹುಮಂದಿ ರೈತನಿಗೆ ಸ್ವಂತಭೂಮಿ ಇಲ್ಲದ ಕಾರಣ ಸರ್ಕಾರ ಕೊಡುವ ಈ ಸಹಾಯ ಅವನಿಗೆ ಸಿಕ್ಕುವುದು ಸಾಧ್ಯವಿಲ್ಲವಾಗಿದೆ. ಕೋಆಪರೇಟಿವ್ ಕಾನೂನಿನಲ್ಲಿ ಸೂಕ್ತ ಬದಲಾವಣೆಮಾಡಿ ಈ ಸಾರಿಯಾದರೂ ಈ ಸಾಲವನ್ನು ಬೆಳೆಯಮೇಲೆ ಕೊಡುವಂತೆ ಮಂತ್ರಿಗಳು ಮಾಡಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

*Sri B. R. SUNTHANKAR (Belgaum City).—Mr. Speaker, Sir, a provision of Rs. 189 lakhs has been made in the budget for agriculture. This amounts to less than 4 per cent. of the total expenditure. I think this is far below the requirement of the State because agriculture is the most important and vital activity of our country. Last year's provision was Rs. 162 lakhs, but only Rs. 133 lakhs were spent last year. From the Budget Memoranda we find a decrease in expenditure in almost all items and the reasons given are, non-utilisation of provision, late implementation of schemes, less expenditure on certain schemes, and so on. These reasons hardly do any credit to the Agricultural Department and it means that the Department has failed to implement last year's programme. So, there was less activity on the part of the Department in respect of the various schemes. The Department should put forth more work and more efforts will have to be made by the Department in order to fully implement this year's programme. There is an attitude of complacency on the part of the Government in all matters and particularly in respect of agricultural production. I am sorry I have to make this remark because in the early stages while asessing the productivity of the State the Government thought that the State was surplus in agricultural production and food production but later on found that there was a deficit of 5 lakhs tons. This deficit has got to be covered. The Second Plan has set the doubling of production within 10 years as the goal. So, the activities of the Agricultural Department in our State will have to proceed in that direction. In the Second Five-Year Plan, agricultural production has been hinged on to industrialisation, but even for the success of the Second Plan and for the success of industrialisation, it is essential that agricultural production should increase. It is necessary that the agricultural production should increase for a number of reasons. There is shortage of food, population is fast increasing, there are uncertainities of the weather which are responsible for fall in production. Even for industrialisation, supply of raw materials to the various industries is necessary. For this also, increase in production is necessary. As stated in the Second Five-year Plan, the requirement of food per adult per day is 18.3 ounces. Taking into consideration the whole of our State, it means we will require 4 million tons every year, but the actual production is only 31 lakhs

(SRI B. R. SUNTHANKAR)

of tons which is 9 lakhs less than what is required. That means, food production will have to be increased by 30 per cent in our State. So, all possible efforts will have to be made to achieve this target. The Department of Agriculture will have to be activised, revitalised, reorganised and, if necessary, reshuffled. I hope the Agricultural Department and the Minister for Agriculture will take steps in this direction. Extensive and intensive cultivation will have to be resorted to in order to increase agricultural production. The State is fortunately lucky in having abundance of land and there is less pressure on land as compared to other parts of the country. Therefore, there is more scope for extensive cultivation in our State. Every inch of land will have to be utilised to the fullest extent. 15 per cent of the land in this State is cultivable waste and that will have to be brought under cultivation.

Fortunately Government has launched a scheme of land utilisation. Survey of.....

An HON'BLE MEMBER.—I rise to a point of order Sir. The Hon'ble Member is reading his speech.

Sri B. R. SUNTHANKAR.—I am not reading my speech, Sir.

A land utilisation survey section has been opened and it is doing good work. That is a good point. But more than that, I would suggest to the Government that they should take up the scheme of soil survey in right earnest. All the lands in the State will have to be surveyed, examined and analysed and deficiencies of the soil will have to be found out and suitable crop methods and suitable methods of agriculture will have to be devised. Such a soil survey will be of immense use to the State. I can point out an example in the United Kingdom in this respect. After the experience of the First War, the United Kingdom Government launched a scheme of soil survey of the whole of United Kingdom. After the soil survey, United Kingdom was able to increase its agricultural production to a large extent.

I will come to another point. Improved methods of agriculture will have to be followed and will have to be brought into practice. First is the improved strains. Intense research work will have to be done in this respect. I may say that the record of the agricultural department not only in this State, but all over India is that,—it may be perhaps hazarding a statement of opinion—very few outstanding researches have been done. Generally, strains that are found out give us only 15 to 20 or 25 per cent more yield. That is not going to help us much. Good season, sufficient rain, well-distributed rain, gives ordinarily fifty to cent per cent more yield. Such small increases by way of research is not going to help us much. In that respect, Sir, research if it is to be useful, must be capable of doubling or trebling production. I know of one instance where the Madras Agricultural Department found out Nagah Strain giving 90 per cent more yield. Then I may also quote here the instance of Wonder Cane in Java. The Java Agricultural Department found out this strain 25 years back and that revolutionised the sugarcane industry in Java, because the percentage of sugarcane was raised from 13 to 21 per cent. It is this kind of research that ought to be undertaken in our State.

Similarly about the fertilizers also. Nitrogen, potash and phospherous are the three elements that are required. In this respect, I suggest that chemical manure should be supplied to the people.

Mr. SPEAKER.—You must finish.

Sri B. R. SUNTHANKAR.—Coming to the specific problem of my area, I would like to request the Government to launch two schemes in my district. First is the sugarcane farm in Belgaum district. Belgaum has got the largest area under sugarcane in the State. It was the second largest sugarcane producing district in the former Bombay State. Our district has got wet and canal irrigation facilities. There are two big factories working in that district. Unfortunately, one of them is not working now. And three

co operative sugar factories are to be started in the near future. There is no sugarcane farm in the North Karnataka. There is one sub-station at Honnavar. I know that it will not serve the purpose. Formerly in Bombay State, the people of North Karnataka were getting benefit of advice and research done at the station at Padgave Research Station. Naturally, now the North Karnataka is handicapped in the matter of sugarcane. So, the best site in my district will be somewhere in Hukeri and Chikodi taluka. An area of about 150 acres will have to be acquired for this purpose. I think the Central Sugarcane Committee will also give all the help, if this Government presses its demand.

I am finishing Sir, I have only one word to say about Nachana research station. I would request the Hon'ble Minister to think of having a substation which is very essential, near about Belgaum.

*ಶ್ರೀ ಟಿ. ಕೆ. ಕಂಬ್ಳಿ (ಕುಂದಗೋಳ).—ವ್ಯವಸಾಯ ಖಾತೆ ಮತ್ತು ಪಶುವೈದ್ಯ ಖಾತೆ ಇವೆರಡೂ ಕೂಡಿಸಿ 3,08,85,100 ರೂಪಾಯಿಗಳ ಡಿಮ್ಯಾಂಡ್ ಇರುವುದನ್ನು ಸಮರ್ಥಿಸುತ್ತಾ ಒಂದೆರಡು ಸಲಹೆ ಗಳನ್ನು ಕೊಡಯಿಸುತ್ತೇನೆ. ನಮ್ಮ ರಾಜ್ಯದಲ್ಲಿ ಮುಕ್ಕಾಲುಪಾಲು ಜನಸಂಖ್ಯೆ ವ್ಯವಸಾಯದ ಒಂದು ಉದ್ಯೋಗದಲ್ಲಿ ತೊಡಗಿದ್ದರೂ ನಮಗೆ ಆಹಾರ ಸಾಲುವುದಿಲ್ಲ. ಕಾರಣ ಇದು ಬಹಳ ಕೆಳಗಿನ ಮಟ್ಟ ದಲ್ಲಿದೆಯೆಂಬುದು ಎಲ್ಲರೂ ಕಂಡುದೇ ಆಗಿದೆ. ಹೆಚ್ಚು ಮಂದಿ ವ್ಯವಸಾಯದಲ್ಲಿ ತೊಡಗಿ ಅದಕ್ಕೆ ಸಾಕಾ ದಷ್ಟು ಉತ್ತೇಜನ ದೊರೆತ ಹೊರತು ಆಹಾರ ಉತ್ಪತ್ತಿ ಹೆಚ್ಚುವುದಿಲ್ಲ. ಆಹಾರ ಉತ್ಪನ್ನ ಹೆಚ್ಚ ದಿರಲು ಮುಖ್ಯವಾಗಿ ಮೂರು ಕಾರಣಗಳಿವೆ. ಭೂಮಿ ಸ್ವತಂತ್ರವಲ್ಲ, ಎರಡನೆಯದು ಮಳೆ ಕಾಲ ಕಾಲಕ್ಕೆ ಸರಿಯಾಗಿ ಆಗುತ್ತಿಲ್ಲ, ಭೂಮಿ ಕಟ್ಟ ನಲು ವಾಗಿ ಹೆಚ್ಚು ಉತ್ಪತ್ತಿಯಾಗದಿರುವುದು ಮೂರನೆಯ ಕಾರಣ ಎಂಬ ಅಭಿಪ್ರಾಯವಿದೆ. ಭೂಮಿಯಲ್ಲಿ ಬಹಳ ಭಾಗ ಜಮೀನುದಾರರ ಕೈಲಿ ಇರುವುದರ ದೆಶೆಯಿಂದ ನಡುವಿನ ಏಜೆಂಟರು ತೊಂದರೆ ಮಾಡುತ್ತಿದ್ದಾರೆ. ಭೂಮಿಗೆ ಸಂಬಂಧಪಟ್ಟ ಹಾಗೆ ಉಳುವವನು ಮತ್ತು ಸರ್ಕಾರ ಈ ಎರಡು ಮಾತ್ರ ಇರಬೇಕು, ನಡುವಿನ ಏಜೆಂಟರು ಪೂರ್ಣವಾಗಿ ಹೋಗಬೇಕು. ಆಗ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಇಲ್ಲದಿದ್ದರೆ ಸಾಧ್ಯ ವಿಲ್ಲ. ಏಜೆಂಟರ ಅವಲಂಬನೆಗೆ ಅವಕಾಶಮಾಡಿ ಅವ್ಯವಸ್ಥೆಯಾಗದಹಾಗೆ ಮಾಡಬೇಕು.

ಭೂಮಿ ಕೆಟ್ಟದ್ದು ಎಂದು ಹೇಳುತ್ತಾರೆ. ಮೊದಲು ಭೂಮಿ ಪರದೇಶದವರು ಆಳುತ್ತಿದ್ದರು. ಅವರಿಗೆ ಹತ್ತಿ ಮತ್ತು ತಂಬಾಕಿನ ಅವಶ್ಯಕತೆ ಹೆಚ್ಚಾಗಿತ್ತು. ಅವರು ಅದಕ್ಕೆ ಪ್ರೋತ್ಸಾಹ ಕೊಟ್ಟು ಆಹಾರಧಾನ್ಯ ಗಳ ಬೆಳೆಗೆ ಪ್ರೋತ್ಸಾಹ ನೀಡದೇ ಹೋದ ಕಾರಣ ಈ ರೀತಿ ಆಹಾರದ ಬೆಳೆ ಕಡಮೆಯಾಯಿತು. ಭೂಮಿ ಕೆಟ್ಟದ್ದು ಅಂದರೆ ಭೂಮಿಯೊಳಗೆ ಕರಿಕಿ, ಕಣಿಗಲ ಹೆಚ್ಚಿ ಉತ್ಪತ್ತಿ ಬಹಳಮಟ್ಟಿಗೆ ಕಡಮೆಯಾಗಿದೆ. ಇದು ಹೋದ ಹೊರತು ಚೆನ್ನಾಗಿ ಬೆಳೆಯಾಗುವುದಿಲ್ಲ. ಟ್ರ್ಯಾಕ್ಟರುಗಳನ್ನು ಒದಗಿಸಿ ಕರಿಕಿ ವಗೈರೆ ತೆಗೆಯ ಬೇಕು. ಆದರೆ ಟ್ರ್ಯಾಕ್ಟರ್ ಹೊಡೆದರೆ ಭೂಮಿಯಲ್ಲಿ ಯಾವಾಗಲೂ ಸರಿಯಾಗಿ ಬೆಳೆಯಾಗುವುದಿಲ್ಲ, ಕೆಲವು ದಿವಸ ಚೆನ್ನಾಗಿ ಬೆಳೆದು ಅನಂತರ ಕಡಮೆಯಾಗುತ್ತಾ ಹೋಗುತ್ತದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಕರಿಕಿ, ಕಣಿಗಲ ಹೋಗಬೇಕಾದರೆ ಹೊರ ದೇಶದಲ್ಲಿ ಕೆಲವು ಹುಳ ಇದೆ, ಅದನ್ನು ಬಿಟ್ಟರೆ ಅದೆಲ್ಲಾ ಹೋಗಿ ಜಮೀನು ಹಸನಾಗುತ್ತದೆ. ಅದಕ್ಕೆ ತಕ್ಕ ಏರ್ಪಾಡು ಮಾಡಬೇಕು.

ನಮ್ಮ ಪ್ರದೇಶದಲ್ಲಿ ಹೆಚ್ಚಾಗಿ ಗೋಧಿ, ಜೋಳ, ಹತ್ತಿ ಇವುಗಳ ವ್ಯವಸಾಯ ಮಾಡಲಾಗುತ್ತದೆ ಮತ್ತು ಹೆಚ್ಚು ಭೂಮಿಯಲ್ಲಿ ಬೆಳೆಯಲಾಗುತ್ತದೆ. ಯಾವುದ ರಿಂದ ಹೆಚ್ಚು ದುಡ್ಡು ಬರುತ್ತದೆಯೋ ಅದನ್ನೇ ರೈತ ರು ಉತ್ಪತ್ತಿಮಾಡುತ್ತಾರೆ. ಆಹಾರ ಧಾನ್ಯ ಬೆಳೆಯು ವದರಿಂದ ರೈತರಿಗೆ ಬಹಳ ಲುಕ್ಸಾನು ಆಗುತ್ತದೆ. ಆದುದರಿಂದ ರೈತನಿಗೆ ಲುಕ್ಸಾನು ಆಗದಂತೆ ಒಂದು ಏಮಾ ಕಂಪನಿಯೋಜನೆ ಮಾಡಬೇಕು ಎಂದು ನನ್ನ ಅಭಿಪ್ರಾಯ. ಈರೀತಿ ಇನ್ಷೂರೆನ್ಸ್ ವ್ಯವಸ್ಥೆ ಮಾಡ ಬೇಕೆಂದು ಹೋದ ಸಾರೆ ನನ್ನ ಭಾಷಣದಲ್ಲಿಯೂ ಸಹ ನಾನು ಹೇಳಿದ್ದೇನೆ. ಈಗ ಪುನಃ ಅದನ್ನೇ ಹೇಳು ತ್ತಿದ್ದೇನೆ. ನಮ್ಮ ಭಾಗದಲ್ಲಿ ಭಂಡಾರ ರೋಗ ಬಂದು ಪೈರು ನಾಶವಾಗುತ್ತದೆ. ಈ ಬಗ್ಗೆ ಒಂದು ಸಂಶೋ ಧನಾ ಕೇಂದ್ರವದ್ದು ಧಾರವಾಡ, ಅಣ್ಣಿಗೇರಿ, ಬಜಾ ಪುರದಲ್ಲಿ ಸ್ಥಾಪಿಸಬೇಕು. ಈ ರೋಗದಿಂದ ಬೆಳೆಯ ಹಾನಿ ಬಹಳ ಆಗುತ್ತಿದೆ. ಕೆಂಪು ಗೋಧಿಯ ಬೆಳೆಯ ಬಗ್ಗೆ ಹೆಚ್ಚು ಗಮನ ಕೊಟ್ಟಿಲ್ಲ. ಹೆಚ್ಚು ಸಹಾಯ ಮಾಡಿ ಕೆಂಪು ಗೋಧಿ ಬೆಳೆಯ ರಕ್ಷಣೆಮಾಡಬೇಕೆಂದು ನನ್ನ ಕಳಕಳಿಯ ಸವಿನಯ ಪ್ರಾರ್ಥನೆ.

ನಮ್ಮ ಭಾಗದಲ್ಲಿ ಹತ್ತಿ ವಿಶೇಷವಾಗಿ ಬೆಳೆಯು ತ್ತದೆ. ಅದರಲ್ಲಿಯೂ ಸಹ ಜಯಧರ, ಲಕ್ಷ್ಮಿ ಹತ್ತಿ ಹೆಸ ರಾದುದು. ಹತ್ತಿಯ ಬೆಳೆಗೆ ವಿಶೇಷ ಅನುಕೂಲತೆ ಗಳನ್ನು ಕಲ್ಪಿಸಿಕೊಡಬೇಕೆಂದು ಹೇಳ ಬಯಸುತ್ತೇನೆ. ಇನ್ನು ಟ್ರ್ಯಾಕ್ಟರ ವಿಷಯ. ರೈತನಿಗೆ ಟ್ರ್ಯಾಕ್ಟರು ಸೌಲಭ್ಯ ಸಿಕ್ಕುವದಿಲ್ಲ. ಎಲ್ಲರಿಗೂ ಟ್ರ್ಯಾಕ್ಟರು ಸಿಕ್ಕುವ ಹಾಗೆ ಒಂದು ಸರಿಯಾದ ವ್ಯವಸ್ಥೆಯಿಲ್ಲ. ಒಂದು ಟ್ರ್ಯಾಕ್ಟರು ತೆಗೆದುಕೊಳ್ಳಬೇಕಾದರೆ ಅದಕ್ಕೆ ಜಾಮೀನು ಕೊಡಬೇಕು, ರೈತನು ತನ್ನ ಆಸ್ತಿ ಬರೆದು ಕೊಡಬೇಕು. ಹೀಗೆ ಇರುವದರಿಂದ ಟ್ರ್ಯಾಕ್ಟರು ದೊರಕಿಸಿಕೊಳ್ಳುವುದು ಬಹಳ ದುಸ್ತರವಾಗಿದೆ. ಆದಕಾರಣ ರೈತನಿಗೆ ಟ್ರ್ಯಾಕ್ಟರು ಸುಲಭವಾಗಿ ಸಿಗುವಹಾಗೆ ಅನುಕೂಲ ಮಾಡಿಕೊಡಬೇಕು. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಮಾನ್ಯ ಸಭಾಪತಿಗಳೇ, ಯಾವುದಾದರೂ ಒಂದು ದೇಶ ದಲ್ಲಿ ಪಾಸಮಾಡತಕ್ಕಂಥ ಬಹುತೇಕ ಮಂದಿ ಯಾವ ವೃತ್ತಿಯನ್ನು ಅವಲಂಬಿಸಿರುತ್ತಾರೆಯೋ ಆ ವೃತ್ತಿ ವರ್ಷೇವರ್ಷೇ ಹೇಗೆ ಪ್ರಗತಿದಾಯಕಸ್ಥಿತಿಗೆ ಬರ ಬೇಕು ಎಂಬುದರ ಕಡೆಗೆ ಹೆಚ್ಚು ಆಸಕ್ತಿ ಸರ್ಕಾರಕ್ಕಿರ ಬೇಕು. ನಮ್ಮ ದೇಶದಲ್ಲಿ ಶೇಕಡಾ 83ರಷ್ಟು ಭಾಗ ವ್ಯವಸಾಯವೃತ್ತಿಯನ್ನು ಅವಲಂಬಿಸಿರುವಾಗ ಆ ಕ್ಷೇತ್ರದಲ್ಲಿ ಅದರ ಪ್ರಗತಿಯಾಗುತ್ತಾ ಇದೆಯೇ ಎಂಬ ಪ್ರಶ್ನೆ ಮಾಡಬೇಕಾಗಿದೆ. ಒಂದು ಕಡೆ ಸಂತಾನಾಭಿ ವೃದ್ಧಿ ಮಿಂಚಿನ ವೇಗದಿಂದ ಹೋಗುತ್ತಾ ಇದ್ದರೆ, ವ್ಯವಸಾಯ ಅಭಿವೃದ್ಧಿ ಅಷ್ಟೇ ನಿಧಾನವಾಗಿ ಅಮೆಯ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ವೇಗದಲ್ಲಿ ಹೋಗುತ್ತಾ ಇದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಸ್ವಾಮಿ, ಒಂದು ಉದಾಹರಣೆ ಹೇಳುವದಾದರೆ, ಮೊದಲು ವ್ಯವಸಾಯ ಇಲಾಖೆಯ ಇನ್‌ಸ್ಪೆಕ್ಟರು ಬರುತ್ತಾರೆ ಎಂದರೆ ಜನರಿಗೆ ಒಂದು ಅಭಿಮಾನ ಇತ್ತು. ಪೋಲೀಸ್ ಇನ್‌ಸ್ಪೆಕ್ಟರು ಬಂದರೂ ಅಷ್ಟೇ ಹೆಚ್ಚಿನ ಅಭಿಮಾನ ಇತ್ತು. ಸೀ. ಆಯ್. ಡಿ. ಇನ್‌ಸ್ಪೆಕ್ಟರ್ ಹಾಗೂ ವ್ಯವಸಾಯ ಇಲಾಖೆಯ ಇನ್‌ಸ್ಪೆಕ್ಟರ್ ಇವರು ಜನರಲ್ಲಿ ಅಂಥ ಒಂದು ಆಸಕ್ತಿ ಅಭಿಮಾನ ಹುಟ್ಟತಕ್ಕ ರೀತಿಯಲ್ಲಿ ಕೆಲಸಮಾಡುವಂಥ ಒಂದು ಶಕ್ತಿ ಹಿಂದಿನ ಅಧಿಕಾರಿಗಳಲ್ಲಿ ಇತ್ತು. ಆದರೆ ಈಗ ಜನರು ಎಷ್ಟುರಮಟ್ಟಿಗೆ ಆಸಕ್ತಿ ಸಹಾಯ ಕೊಡುತ್ತಾರೆ ಎಂಬುದನ್ನು ಗಮನ ದಲ್ಲಡಬೇಕಾಗಿದೆ.

ಸ್ವಾಮಿ, ನಾನು ಹಿಂದೆ ಹೇಳಿದಹಾಗೆ ನಾಲಾ ಬಂದಿರುವ ಪ್ರದೇಶಗಳಲ್ಲಿ ಒಂದು ಎಕರೆಗೆ 200ರಿಂದ 500 ರೂಪ್ಪಾಯಿಗಳವರೆಗೆ ಕಂಟ್ರಿಬ್ಯೂಷನ್ ಕೊಡುತ್ತಿದ್ದಾರೆ. ಪ್ರತಿವರ್ಷವೂ ವಾಟರ್‌ರೇಟ್ ಕೊಡುತ್ತಿದ್ದಾರೆ. ಒಂದು ಖಂಡಗಕೂಡ ಬೆಳೆ ಬೆಳೆಯದೆ ಇರುವ ಪ್ರದೇಶಗಳಲ್ಲಿ ಭೂಮಿಯ ಫಲವತ್ತಿಗೆ ಯಾವರೀತಿ ಉತ್ತೇಜನ ಕೊಡಬೇಕು, ಯಾವರೀತಿ ಜನತೆಗೆ ತಿಳುವಳಿಕೆ ಕೊಡಬೇಕೆಂಬುದನ್ನು ಯೋಚಿಸಿ ನರ್ವೇಮಾಡಿ ಪ್ರತಿವರ್ಷವೂ ಯಾವ ಜಮೀನು ನಾಗುವಳಿಗೆ ಲಾಯಕ್ಕಾಗಿದೆ ಎಂಬುದನ್ನು ಒಂದು ಆಸಕ್ತಿಯಿಂದ ನೋಡಿಕೊಳ್ಳಬೇಕು. ಜಮೀನನ್ನು ಉನ್ನತಿಗೆ ತರಲು ಕೆಲಸ ಕಾರ್ಯಗಳು ಎಷ್ಟು ಜಾಗ್ರತೆ ಆಗಬೇಕೆಂದು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ವೇಗದಲ್ಲಿ ಅದು ಫಲಕಾರಿಯಾಗುತ್ತಿಲ್ಲವೆಂದು ಹೇಳುತ್ತೇನೆ. ರೈತರ ವಿಷಯದಲ್ಲಿ ಸರ್ಕಾರಕ್ಕೆ ಎಷ್ಟು ಅಭಿಮಾನಹೀನತೆಯೆಂಬುದು ಇದರಿಂದಲೇ ಗೊತ್ತಾಗುತ್ತದೆ. ವ್ಯವಸಾಯ ಇಲಾಖೆಯವರು ಅಮೋನಿಯಂ ಸಲ್ಫೇಟ್ ಎಂಬುದನ್ನು ಸರಬರಾಜು ಮಾಡುತ್ತಿದ್ದಾರೆ. ಅದರಲ್ಲಿ ಯಾವರೀತಿಯಲ್ಲೂ ಕೊರತೆ ಬೀಳದಂತೆ ನೋಡಿಕೊಳ್ಳಬೇಕು. ಮಂಡ್ಯ ರೈತರ ಸಹಕಾರ ಸಂಘದವರು 100ಟನ್ ಕೊಂಡರೆ ಮೂವರೆ ಟನ್ ಅಮೋನಿಯಂ ಸಲ್ಫೇಟ್ ಕಡಮೆ ಬರುತ್ತೆಂದು ತಿಳಿಸಿದರು. ಸಂಘವು ಈರೀತಿಯಾಗಿ ನಷ್ಟವನ್ನು ಹೊರಲು ಸಾಧ್ಯವಾಗುವುದಿಲ್ಲ. ಅಲ್ಲಿ ಅಮೋನಿಯಂ ಸೆಲ್ಫೇಟನ್ನು ಕೊಳ್ಳುವ ತೂಕಕ್ಕೂ ಮಾರಾಟಮಾಡುವ ತೂಕಕ್ಕೂ ಶೇಕಡ 3½ಟನ್ ಕಡಿಮೆ ಬರುತ್ತಿದೆ. ಪ್ರತಿವರ್ಷವೂ ನಾಲ್ಕು ಸಾವಿರದಿಂದ ಐದು ಸಾವಿರ ಟನ್‌ಗಳಷ್ಟು ವ್ಯಾಪಾರಮಾಡುವ ಪ್ರದೇಶದಲ್ಲಿ ಒಂದು ವರ್ಷಕ್ಕೆ ಸುಮಾರು 50 ಸಾವಿರ ರೂಪಾಯಿಗಳು ನಷ್ಟವಾಗುತ್ತಿದ್ದರೆ ಹೇಗೆ? ಯಾವ ರೀತಿ ಇಂಥಾದ್ದನ್ನೆಲ್ಲಾ ನರಿಪಡಿಸಬೇಕೆಂಬುದನ್ನು ಸರ್ಕಾರ ಗಮನಿಸಬೇಕು. 100ಟನ್ನುಗಳಿಗೆ ಒಂದು ಸಾವಿರ ರೂಪಾಯಿಗಳು ನಷ್ಟವಾದರೆ 5 ಸಾವಿರ ಟನ್ನುಗಳಿಗೆ 50 ಸಾವಿರ ರೂಪಾಯಿಗಳು ನಷ್ಟವಾಗುತ್ತದೆ. ಇದರಿಂದ ರೈತರಿಗೆ ವಿಶೇಷವಾಗಿ ತೊಂದರೆಯಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳ ಗಮನಿಸಬೇಕೆಂದು ನಾನು ಬಹಳ ವಿನಯದಿಂದ ತಿಳಿಸುತ್ತಿದ್ದೇನೆ. ಕೆಲವು ಮಾನ್ಯ ಸ್ನೇಹಿತರು ಗೊಬ್ಬರದ ವ್ಯಾಪಾರವನ್ನು ವ್ಯವಸಾಯ ಇಲಾಖೆಗೆ ಬಿಟ್ಟುಕೊಡಿ ಎಂದು ಸಲಹೆಮಾಡಿದರು ಇನ್ನು ಕೆಲವರು ಕೋ-ಆಪರೇಟಿವ್ ಸೊಸೈಟಿಗೆ ಬಿಟ್ಟುಕೊಡಿ ಎಂಬುದಾಗಿ ಸಲಹೆ ಮಾಡಿದರು. ನನ್ನ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸುವುದಾದರೆ ಸಹಕಾರ ಸಂಘಗಳು ಬೆಳೆಯ ಬೇಕೆಂಬ ಅಭಿಲಾಷೆ ಇರುವ ಸರ್ಕಾರ ಪೂರ್ಣ ಗೊಬ್ಬರದ ವ್ಯಾಪಾರ ಸಹಕಾರ ಸಂಘಗಳ ಮೂಲಕ ಏರ್ಪಾಡುಮಾಡಿ ವ್ಯಾಪಾರಮಾಡುವ ವ್ಯವಸ್ಥೆ ಮಾಡುವುದು ಯೋಗ್ಯವಾಗಿದೆ. ಕೇಂದ್ರ ಡಿಪೋ ಆಡಳಿತ ಸಹಕಾರ ಸಂಘಗಳ ಮುಖ್ಯಾಧಿಕಾರಿಗಳ ಆಡಳಿತದಲ್ಲಿರಬೇಕು. ಈ ರೀತಿಯ ವ್ಯಾಪಾರಿಡಿಗೆ ವ್ಯವಸಾಯ ಇಲಾಖೆ ಅಧಿಕಾರಿಗಳು ಸಹಕರಿಸಬೇಕು. ಈ ರೀತಿಯಿಂದ ಮಾತ್ರ ರೈತರಿಗೆ ಹೆಚ್ಚಿನ ಸಹಾಯ ದೊರೆಯುತ್ತದೆ. ಕೆಲವು ಸ್ನೇಹಿತರು ಗೊಬ್ಬರ ಸರಬರಾಜಿಗೆ ಹಿಂದೆ ಲಾರಿಗಳನ್ನು ಒದಗಿಸುತ್ತಿದ್ದರು ಎಂದು ಹೇಳಿದರು. ಲಾರಿಗಳನ್ನು ಒದಗಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ವ್ಯವಸಾಯ ಸಂಘಗಳು ಪ್ರತಿಯೊಂದು ತಾಲ್ಲೂಕಿನಲ್ಲೂ ಇವೆ. ಆ ಸಂಘಗಳು ರೈತರಿಂದ ಒಂದೊಂದು ಷೇರನ್ನು ವಸೂಲುಮಾಡಿ ಸರ್ಕಾರದ ಸಹಾಯ ಪಡೆದು ರಿಯಾಯಿತಿ ದರದಲ್ಲಿ ಮಿಲಟರಿ ಲಾರಿಗಳನ್ನು ಕೊಂಡು ಲಾರಿಗಳಲ್ಲಿ ಸಂಘಗಳ ಮೂಲಕ ರೈತರಿಗೆ ಗೊಬ್ಬರ ಸರಬರಾಜು ಮಾಡುವ ಅವಕಾಶವನ್ನು ಕಲ್ಪಿಸುವುದು ಈಗ ಅತ್ಯಗತ್ಯವಾಗಿದೆ. ಸರ್ಕಾರದವರೂ ಸಹ ಈ ಸಂಘಗಳಿಗೆ ಲಾರಿಗಳನ್ನು ಒದಗಿಸಿ ಸಂಘಗಳ ಮೂಲಕ ರೈತರಿಗೆ ಗೊಬ್ಬರವನ್ನು ಒದಗಿಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ತಕ್ಕ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಮಾನ್ಯ ಮಂತ್ರಿಗಳು ಗಾಡಿಪಟ್ಟಿ ಮತ್ತು ನೇಗಿಲುಗಳ ಇವುಗಳ ವಿಷಯ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯದಲ್ಲಿ ಅನುಭವದಿಂದ ಹೇಳಬೇಕಾದರೆ ಯಾವುದು ಸಕಾಲವೆಂದು ಉಳಿಮೆ ಮಾಡಬೇಕೋ ಆಗ ನೇಗಿಲುಗುಳವಿರುವುದಿಲ್ಲ, ಸಾಕಾದಷ್ಟು ಗಾಡಿಪಟ್ಟಿಗಳು ಒದಗುತ್ತಿಲ್ಲ. ಯಾವ ಪ್ರದೇಶದಲ್ಲಿ ಹೆಚ್ಚು ಅಗತ್ಯ ವಿದೆಯೋ ಅದನ್ನು ಗಮನಿಸಿ ಹೆಚ್ಚು ಹೆಚ್ಚು ಒದಗಿಸುವ ಏರ್ಪಾಡು ಮಾಡುವುದು ಅಗತ್ಯ. ಕೆಲವು ಪ್ರಾಂತ್ಯದಲ್ಲಿ ಗಾಡಿಪಟ್ಟಿ ಮತ್ತು ಗುಳಮಾರಾಟವಾಗದೆ ಉಳಿದಿರುವ ನಿದರ್ಶನವೂ ಇದೆ. ಇದಕ್ಕೆ ಇಲಾಖೆಯ ಕಾರ್ಯವಿಚಕ್ಷಣೆ ಅಗತ್ಯ. ಮತ್ತೊಂದು ವಿಷಯವೆಂದರೆ, ಮಟ್ಟದಲ್ಲಿ ಎಷ್ಟು ಅಗತ್ಯವಿದೆಯೋ ಅಷ್ಟೂ ಕೃತಕ ಗೊಬ್ಬರವನ್ನು ಸಹಕಾರ ಸಂಘದವರು ಮಾರಾಟಮಾಡುತ್ತಾ ಇದ್ದರೂ ಕೂಡ, ಖಾಸಗೀ ವ್ಯಾಪಾರನ್ತರಿಗೂ ಮಾರಾಟಕ್ಕೆ ಅವಕಾಶ ಕೊಟ್ಟಿದ್ದೀರಿ. ಇದರಿಂದ ಸಹಕಾರಸಂಘಗಳ ಬೆಳವಣಿಗೆಗೆ ನಾನಾ ಕಾರಣಗಳಿಂದ ದಕ್ಕೆ ಉಂಟಾಗುತ್ತಿದೆ. ಸಹಕಾರತತ್ವಕ್ಕೆ ಮಾನ್ಯತೆ ಕೊಡುವ ಸರ್ಕಾರ ಸಹಕಾರಸಂಘಗಳಿರುವ ಕಡೆ ಖಾಸಗೀ ವ್ಯಾಪಾರನ್ತರೂ ಗೊಬ್ಬರದ ಮಾರಾಟಮಾಡಲು ಅವಕಾಶ ಕೊಡಬಾರದಾಗಿ ಪ್ರಾರ್ಥಿಸುತ್ತೇನೆ. ಮಾತನಾಡಿನನ್ನ ಅಭಿಪ್ರಾಯ ತಿಳಿಸಲು ಅವಕಾಶವಿತ್ತ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* Dr. A. R. KARISIDDAPPA (Arsikere).—Mr. Speaker, Sir, I support the Demands that are under discussion in this House. I would be very brief in my remarks. I would like to refer to the Agricultural Research Centres. Of course, Government have started a number of such Centres and perhaps, may open many more. These Research

Centres are there to evolve new and improved methods and techniques of agriculture. So far as I understand, the improved techniques found out in these Centres have not been put to practical use by the raiyats. My suggestion is that the new technique evolved by these Centres must be exhibited in a practical way. Suppose, there is a copra research centre. It must be attached to the regional farms which could exhibit practically by doing cultivation of the crops, sowing etc. All this should be exhibited to the raiyats. There are so many research centres such as the cardamum research centre, cocoanut research centre and so on. They must have regional farms attached where new techniques evolved by these centres may be exhibited to the farmers. This will help the raiyat to a great extent and also the State in the matter of increasing agricultural produce. Sir, the Research Centres are not working in a speedy way. It was decided to establish a research centre at Arsikere and the required land also was given to the department. The Director of Agriculture said that within three days he would see that cocoanut seedlings are sown. It is 8 months past; still the jungle has not been cleared. I request the Government to take up the work speedily and to see that the research centre works early.

I request the Government to see that our State is properly represented on the Central Committee so that proper work can be done by the representatives of the State.

Regarding the pests—in our State arecanut and cocoanut trees are the most important crops. These trees get a disease called "anabe roga". This *anabe roga* is existing since so many years and so many thousands of trees have been destroyed by this disease. But, I see from the Budget that this *anabe roga* is still under experimentation and that nothing has been done to bring the disease under control. I request the Hon'ble Minister to see that some specific remedy is found for this disease.

About agricultural education, I request the Government to open one more Agricultural College. Then I wish to say a few words regarding admissions. Of course, there are certain rules regarding admission, merit being the main consideration. But I request the Government to see that students who are really interested in agriculture and who really come from the rural areas and who are sons of the raiyats are given preference in regard to admissions to the Agricultural College. They must be allowed exemption even in regard to merit. I hope that will be done for future admissions.

Then I would like to say a few words about animal husbandry. Of course, everybody knows that cattle wealth is required for increased production in agriculture. In our State, there are about 360 Veterinary institutions. In these 360 institutions there are no sufficient number of Veterinary Surgeons because the State is very short of Veterinary Surgeons. Veterinary Surgeons have to be educated outside the State. Our State cannot boast of one Veterinary College. At the last session, the Hon'ble Minister said that a Veterinary College would be opened at Hebbal. I request the Government to see that at least from the next academic year a veterinary College is opened at Hebbal.

Regarding artificial insemination—of course we have to improve the quality of cattle in our State. As Hon'ble Member Sri Sreenivasa Shetty said these centres must be opened in all taluks and also hoblies.

Next I would like to say a few words about food problem.

Many members have spoken about the need for increase in food production. I would like to say that increase in food production alone will not solve the food problem. At the same time, Government must impose restriction on the growth of population in the State. Increase in food production and restriction on the growth of population will together solve our food problem.

*ಶ್ರೀ ಎಚ್. ಎಸ್. ರುದ್ರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಮಾರು ಐದು ಗಂಟೆಗಳ ಕಾಲ ನನ್ನ ಸ್ನೇಹಿತರು ವ್ಯವಸಾಯ ಮತ್ತು ಪಶುಪಾಲನೆ ವಿಷಯದಲ್ಲಿ ವಿಶೇಷವಾದ ಸಂಗತಿಗಳನ್ನು ನನ್ನ ಮತ್ತು ನಮ್ಮ ಡಿಪಾರ್ಟ್‌ಮೆಂಟಿನ ಗಮನಕ್ಕೆ ತಂದು ಅನೇಕ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ

(ಶ್ರೀ ಎಚ್. ಎನ್. ರುದ್ರಪ್ಪ)

ಅವರಿಗೆಲ್ಲ ನಾನು ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಮುಖ್ಯವಾಗಿ ಆಹಾರದ ಉತ್ಪನ್ನ ಜಾಸ್ತಿಯಾಗಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಈ ಆಹಾರದ ಅಭಾವದ ವಿಚಾರವಾಗಿ ನಾನು ಬಡ್ಜೆಟ್ಟಿನ ಚರ್ಚೆಯಾದಾಗಲೇ ಸ್ವಲ್ಪ ಹೆಚಾಗಿ ಪ್ರಸ್ತಾಪಿಸಿದ್ದೇನೆ. ಆದರೆ ಒಂದು ವಿಷಯ ಅವರ ಗಮನಕ್ಕೆ ತರತಕ್ಕದ್ದು ಸೂಕ್ತವಾದುದು. ಈ ಆಹಾರದ ವಿಷಯವನ್ನು ಚರ್ಚೆ ಮಾಡಿದಪ್ಪೂ ಅದು ಕಠಿನವಾಗಿ ಕಾಣುತ್ತಿದೆ. ಕಾರಣವೇನು ಎಂದರೆ, ಮೈಸೂರು ಸಂಸ್ಥಾನದಲ್ಲಿ ಎಷ್ಟು ಆಹಾರವನ್ನು ಉತ್ಪನ್ನ ಮಾಡುತ್ತಿದ್ದಾರೆ ಮತ್ತು ಎಷ್ಟನ್ನು ಖರ್ಚು ಮಾಡುತ್ತಿದ್ದಾರೆ ಎನ್ನುವ ಲೆಕ್ಕವನ್ನು ಸಾಮಾನ್ಯವಾಗಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ನಮ್ಮ ದೇಶದಲ್ಲಿ ಯಾವ ರೀತಿಯಾದ ಕಂಟ್ರೋಲೂ ಇಲ್ಲ. ಹೊರಗಡೆಯಿಂದ ತರತಕ್ಕದ್ದು ಎಷ್ಟು, ನಮ್ಮ ದೇಶದಿಂದ ಹೊರಗೆ ಕಳುಹಿಸತಕ್ಕದ್ದು ಎಷ್ಟು ಎನ್ನುವ ಅಂಕಿ ಸಂಖ್ಯೆಗಳ ಮೂಲಕ ನಿಖರವಾಗಿ ತಿಳಿಸುವುದು ಕಷ್ಟವಾಗುತ್ತದೆ. ನಾವು ಬೆಳೆಯತಕ್ಕ ಆಹಾರ ಹೆಚ್ಚಾಗಿ ಉತ್ಪತ್ತಿಯಾಗುವುದಿಲ್ಲ ಎಂದು ಬರತಕ್ಕ ಶಂಕೆ ಸ್ವಾಭಾವಿಕವಾದುದು. ಅವುಗಳನ್ನು ತಿಳಿದುಕೊಳ್ಳುವುದಕ್ಕೆ ಅನೇಕ ಅವಕಾಶಗಳಿವೆ. ಅನೇಕ ವಿಷಯಗಳನ್ನು ಸಂಬಂಧಪಟ್ಟ ಇಲಾಖೆಯವರು ಇಂಡಿಯಾ ಸರಕಾರದವರು ಮತ್ತು ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿನವರು ಸಹ ಅಂಕಿ ಅಂಶಗಳನ್ನು ಒದಗಿಸುತ್ತಿದ್ದಾರೆ. ಅದರ ಮೂಲಕ ತಿಳಿದುಕೊಳ್ಳಬಹುದು. ಬಹುಶಃ ಈ ಅಂಕಿ ಸಂಖ್ಯೆಗಳು ಬಹಳವಾಗಿ ಹೆಚ್ಚು ಕಡಮೆಯಾಗಿವೆ ಎಂದು ಮಾನ್ಯ ಸದಸ್ಯರಿಗೆ ಅನುಮಾನ ಬಂದಿರಬಹುದು. ಆದರೆ ಅಷ್ಟು ಅನುಮಾನ ಪಡಬೇಕಾಗಿಲ್ಲ. ಏತಕ್ಕೆಂದರೆ ಎಲ್ಲ ಅಂಕಿಗಳೂ ಈ ರೀತಿ ಆಗಲಕ್ಕಿಲ್ಲ. ಎಲ್ಲೋ ಕೆಲವು ಕಡೆ ಕಡಮೆ ಬರಬಹುದು, ಕೆಲವು ಕಡೆ ಹೆಚ್ಚು ಬರಬಹುದು. ಆದರೆ ಸರ್ವೇ ಸಾಮಾನ್ಯವಾಗಿ ಅಂಕಿಗಳು ಸರಿಯಾಗಿಯೇ ಇರುತ್ತವೆ. Crop-cutting experiment ಎಂದಿದೆ. ಇದು ಸಾಮಾನ್ಯವಾಗಿ ಸರಿಯಾಗಿಯೇ ಇರುತ್ತದೆ. ಆದರೆ ಜಮೀನಿನಲ್ಲಿ ಎಲ್ಲ ಹೆಚ್ಚಾಗಿ ಬೆಳೆಯಾಗುವುದೋ ಅದರ ಮೇಲೆ ಉತ್ಪತ್ತಿಯೂ ಹೆಚ್ಚಾಗುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ ಇಲ್ಲರುವ ಅಂಕಿ ಸಂಖ್ಯೆಗಳಲ್ಲಿ ಸುಮಾರು ಒಂದು ಅಥವಾ ಎರಡು ಪರ್ಸೆಂಟು ವ್ಯತ್ಯಾಸಗಳು ಬರಬಹುದು. ಈ ಅಂಕಿ ಸಂಖ್ಯೆಗಳ ಮೇಲೆ ನಮ್ಮ ದೇಶದಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಎನ್ನುವುದನ್ನು ಕಂಡುಕೊಳ್ಳಬಹುದು ಮತ್ತು ಈ ವಿವರದಿಂದ ತಮಗೆ ಗೊತ್ತಾಗುತ್ತದೆ. ಉತ್ಪನ್ನವೇನೋ ಸಾಮಾನ್ಯವಾಗಿ ಜಾಸ್ತಿಮಾಡಬೇಕು.

ಜೋಳದ ಬಗ್ಗೆ ಇಂಡಿಯಾ ಸರ್ಕಾರದವರು ಒಂದು ತನಿಖೆ ಮಾಡುತ್ತಿದ್ದಾರೆ. ಅವರು ಹಣವನ್ನೊದಗಿಸುತ್ತಾರೆ; ಮೇಲ್ವಿಚಾರಣೆ ಮಾಡುತ್ತಾರೆ, ಮತ್ತು ಪದೇಪದೇ ತನಿಖೆ ನಡೆಸುವುದಲ್ಲದೆ ಇದಕ್ಕೆ ಸಂಬಂಧಪಟ್ಟಂಥ ಸಾಹಿತ್ಯವನ್ನು ಓದಿಸುತ್ತಾರೆ. ಭತ್ತ ಬೆಳೆಯುವುದರಲ್ಲಿ ಮೈಸೂರು ಎರಡನೆಯ ಸ್ಥಾನವನ್ನು ಪಡೆದಿದೆ. ಮದರಾಸು ಮೊದಲನೆಯದು. ಭತ್ತದ ಬೆಳೆ ಯಾವ ಪ್ರಮಾಣದಲ್ಲಿ ಜಾಸ್ತಿಯಾಗುತ್ತಿದೆ ಎಂದು ಹೇಳುವುದಕ್ಕೆ ಹೋದರೆ ಬಹಳ ವೇಳೆ ತೆಗದುಕೊಳ್ಳುತ್ತದೆ. ಆದುದರಿಂದ ಹೇಳುವುದಕ್ಕೆ ಹೋಗುವುದಿಲ್ಲ. ಇಂಡಿಯಾ ಸರ್ಕಾರದವರು ತನಿಖೆ ಮಾಡಿದ್ದಾರೆ, ಅಂಕಿಅಂಶಗಳನ್ನು ನೋಡಿದರೆ ನಾವು ಭತ್ತದ ಬೆಳೆಯಲ್ಲಿ ಎರಡನೆಯ ಸ್ಥಾನವನ್ನು ಹೊಂದಿದ್ದೇವೆ. ಮಾನ್ಯ ಸದಸ್ಯರು ಕೆಲವರು ಬತ್ತದ ವಿಷಯದಲ್ಲಿ ಹೆಚ್ಚಿಗೆ ಉತ್ಪತ್ತಿ ಮಾಡುತ್ತಿದ್ದೇವೆ ಎಂದು ಹೇಳಿದರು. ಅದು ನ್ಯಾಯವಾದುದು. ಎಷ್ಟು ಪ್ರಮಾಣದಲ್ಲಿ ಮಾಡಬಹುದಾಗಿತ್ತೋ ಅಷ್ಟು ಪ್ರಮಾಣದಲ್ಲಿ ಮಾಡಲಕ್ಕೆ ಆಗಿಲ್ಲ, ಎಷ್ಟು ಆಸೆ ಇತ್ತೋ ಅದನ್ನು ಪೂರೈಸುವುದಕ್ಕೆ ಆಗಿಲ್ಲವೆನ್ನುವುದನ್ನು ನಾನು ಒಪ್ಪುತ್ತೇನೆ. ಈಗ ಜಪ್ತಿ ಮಾದರಿಯಿಂದ ಬತ್ತದ ಬೆಳೆ ಜಾಸ್ತಿಯಾಗಿದೆ.

ಈ ಮಾದರಿಯಲ್ಲಿ ಹೆಚ್ಚು ಕೆಲಸ ಮಾಡಬೇಕೆಂದು ವಿಶೇಷವಾದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಮೊದಲನೆ ಸಾರಿ ಮಾತ್ರ ಹೆಚ್ಚಿಗೆ ಪ್ರಚಾರ ಕಾರ್ಯ ನಡೆಯಿತು. ಈಗ ನಡೆದಿಲ್ಲ. ಪ್ರಚಾರ ನಡೆದದ್ದು ಜನಗಳ ಗಮನಕ್ಕೆ ಜಪ್ತಿ ಮಾದರಿಯಲ್ಲಿನ ಅನುಕೂಲಗಳನ್ನು ತರುವ ಉದ್ದೇಶದಿಂದ. ಈಗ ಅದರ ಉಪಯೋಗ ಜನಗಳ ಗಮನಕ್ಕೆ ಬಂದಿದೆ. ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿಯೂ ಪ್ರಚಾರ ಕಾರ್ಯ ನಡೆದಿದೆ. ನಾವೇನಾದರೂ ಅಚ್ಚು ಹಾಕಿ ಸಾಕ್ಷಿಸ್ವಾಹಿತ್ಯಗಳನ್ನು ಹಂಚಿದರೆ ಕಾಗದ ಲುಕ್ಸಾನಾಗುತ್ತದೆಯೋ ಏನೋ ಎಂದನ್ನಿಸುತ್ತದೆ. ಎಲ್ಲಿ ಸ್ವಲ್ಪ ಬುದ್ಧಿವಂತರಿದ್ದಾರೆ ಮತ್ತು ಸ್ಥಾರಿಗೆ ಸ್ವಲ್ಪ ಹೆಚ್ಚಿಗೆ ದುಡ್ಡನ್ನು ಸಂಪಾದನೆ ಮಾಡಬೇಕೆಂಬ ಆಸೆ ಇದೆ, ಅಂಥವರು ಮಾತ್ರ ಇದನ್ನು ಮಾಡುತ್ತಿದ್ದಾರೆ. ನಾನು ಅನೇಕಕಡೆ ಹಳ್ಳಿಗಳಿಗೆ ಹೋಗಿ ನೋಡಿದ್ದೇನೆ. ಎಲ್ಲೋ ಒಬ್ಬಿಬ್ಬರು ಮಾತ್ರ ಜಪ್ತಿ ಮಾದರಿಯಲ್ಲಿ ಬತ್ತ ಬೆಳೆಯುತ್ತಾರೆ. ಅಕ್ಕಪಕ್ಕದವರು ಯಾರೂ ಜಾರಿಗೆ ತರುತ್ತಿಲ್ಲ. ಏನು ಕಾರಣವೋ, ನಮ್ಮ ಜನರಲ್ಲಿ ಅಶ್ರದ್ಧೆ ಹೆಚ್ಚಾಗಿ ಅಭಿಮಾನ ಕಡಮೆಯಾಗುತ್ತಿದೆ. ಶೇಕಡ 99·9 ಜನ ಅವಿದ್ಯಾವಂತರು ವ್ಯವಸಾಯದಲ್ಲಿ ತೊಡಗಿರುವುದರಿಂದ ಅಭಿಮಾನ ಮತ್ತು ಶ್ರದ್ಧೆ ಕಡಮೆಯಾಗಿದೆ ಎಂದು ಕಾಣುತ್ತದೆ. ಇದು ದೇಶದ ದುರ ದೃಷ್ಟ. ಅಮೇರಿಕಾ, ರಷ್ಯಾ ಮುಂತಾದ ದೇಶಗಳಲ್ಲಿ ಬುದ್ಧಿವಂತರಾದವರು ವ್ಯವಸಾಯವನ್ನು ತೆಗೆದುಕೊಳ್ಳುತ್ತಾರೆ; ದಡ್ಡರು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಬಹಳ ಶ್ರದ್ಧೆ ಇರಬೇಕು. ನಿಮಿಷ ನಿಮಿಷಕ್ಕೂ ಶ್ರದ್ಧೆ ಇರಬೇಕು. ಶ್ರದ್ಧೆಯಿಲ್ಲದೆ ಕೆಲಸ ಮಾಡುವುದರಿಂದ ತೊಂದರೆಯಾಗುತ್ತದೆ. ವ್ಯವಸಾಯ ಮಾಡುವುದರಲ್ಲಿ ಶ್ರದ್ಧೆ ಇರಬೇಕು, ಉಳುವುದರಲ್ಲಿ ಶ್ರದ್ಧೆ ಇರಬೇಕು, ಬಿತ್ತುವುದರಲ್ಲಿ ಶ್ರದ್ಧೆ ಇರಬೇಕು. ಒಂದು ದಿವಸ ಹೆಚ್ಚು ಕಡಮೆಯಾದರೆ ಎಷ್ಟೋ ತೊಂದರೆಯಾಗುತ್ತದೆ. ಉಳುಮೆ ಮಾಡಬೇಕು, ಗುಂಟೆ ಹೊಡೆಯಬೇಕು, ಇಲ್ಲದೆ ಇದ್ದರೆ ಶೇಕಡ 25 ಬೆಳೆ ಕಡಮೆಯಾಗುತ್ತದೆ. ಜಪ್ತಿ ಮಾದರಿಯಲ್ಲಿ ಬೆಳೆಯುವಾಗ ಗೊಬ್ಬರ ಹೆಚ್ಚಾಗಿ ಹಾಕಬೇಕು ಎಂದು ತಿಳಿದುಕೊಂಡಿದ್ದಾರೆ. ಗೊಬ್ಬರ ಹಾಕಿದರೆ ಜಾಸ್ತಿ ಉತ್ಪತ್ತಿ ಬರುತ್ತದೆ, ನಿಜ Cultural operations ಎಂದು ಮಾಡುವಾಗ ಎರಡು ಅನುಕೂಲಗಳಿವೆ. Cultural operation ನಡೆಯುವಾಗ ಭೂಮಿಯಲ್ಲಿ ಇರುವ ಕಳೆ ವಗೈರೆ ನಾಶವಾಗುತ್ತದೆ. ಇದರಿಂದ ಹೆಚ್ಚು ಭತ್ತ ಬರುತ್ತದೆ. ಇದನ್ನು ವಿದ್ಯಾವಂತರು ಚೆನ್ನಾಗಿ ತಿಳಿದು ಕೊಂಡಿದ್ದಾರೆ. ಕೆಲವರು ಇದನ್ನೆಲ್ಲ ತಿಳಿದು ಕೊಂಡಿದ್ದರೂ, ಸಹ ಕಷ್ಟ ಪಟ್ಟು ಕೆಲಸ ಮಾಡುವುದಕ್ಕೆ ಹಿಂಜರಿಯುತ್ತಾರೆ. ಅವಿದ್ಯಾವಂತರು ತಿಳಿದು ಕೊಂಡೇ ಇಲ್ಲ. ನನ್ನ ಸ್ವಂತ ಅನುಭವವನ್ನು ಸಭೆಗೆ ತಿಳಿಸುತ್ತೇನೆ. ನಮ್ಮ ಜಮೀನಿನಲ್ಲಿ ನಾಟಿ ಹಾಕಿದೆವು. ಪಕ್ಕದ ಜಮೀನಿನವನು ಬಿತ್ತಿದ. ನಾಟಿ ಹಾಕಿದರೆ

ದಿನವೆಲ್ಲ ತೆಗೆದುಕೊಂಡು ಹೆಚ್ಚಿಗೆ ಕೂಲಯನ್ನು ತೆಗೆದು ಕೊಳ್ಳುತ್ತದೆ. ಆದರೆ ಕಾಳನ್ನು ಬಿತ್ತಿದರೆ ಎರಡು ಮೂರು ಗಂಟೆಗಳಲ್ಲಿ ಮುಗಿಸಬಹುದು. ನಾವು ನಮ್ಮ ಜಮೀನಿನಲ್ಲಿ ಇನ್ನೂ ಕೆಲಸಮಾಡುತ್ತಲೇ ಇದ್ದರೂ ಪಕ್ಕದ ಜಮೀನಿನವನು ತನ್ನ ಕೆಲಸವನ್ನು ಮುಗಿಸಿಕೊಂಡು ಹೊರಟುಹೋಗಿದ್ದ. ಎಲ್ಲಿಗೆ ಹೋದ ಎಂದು ನೋಡಿದರೆ ಅವನು ಮೀನುಹಿಡಿಯುತ್ತಿದ್ದ. ಇಷ್ಟು ಅಶ್ರದ್ಧೆ ನಮ್ಮಲ್ಲಿದೆ. ಹೀಗಿರುವಾಗ ಉಳುವವನಿಗೆ ಭೂಮಿಯನ್ನು ಕೊಡಬೇಕು ಎಂದು ಹೇಳುತ್ತಾರೆ. ಇದರಿಂದ ದೇಶದ economy ಹಾಳಾಗುತ್ತದೆ. ಯಾರು ಹೆಚ್ಚಿಗೆ ಬೆಳೆಯುತ್ತಾರೆ ಅಂಥವರಿಗೆ ಜಮೀನನ್ನು ಕೊಡಿ ಎಂದರೆ ನಮ್ಮ ದೇಶದಲ್ಲಆಹಾರೋತ್ಪತ್ತಿ ಜಾಸ್ತಿಯಾಗುತ್ತದೆ. ಬಡವರಿಗೆ, ಜಮೀನಿಲ್ಲದವರಿಗೆ ಜಮೀನು ಕೊಡೋಣ ವೆಂದರೆ ಅವನಿಗೆ ಎತ್ತುಗಳಿಲ್ಲ, ನೇಗಿಲು ಇಲ್ಲ, ಗುಂಟೆ ಇಲ್ಲ. ನಾನು ಒಂದು ವಿಚಾರವನ್ನು ದೂರದೃಷ್ಟಿ ಯಿಂದ ಹೇಳುತ್ತೇನೆ. ದೇಶದಲ್ಲಿ ಆಹಾರದ ಉತ್ಪತ್ತಿ ಜಾಸ್ತಿಯಾಗಬೇಕಾದರೆ ಯಾರು ಹೆಚ್ಚಿಗೆ ಬೆಳೆಯುತ್ತಾರೋ ಅವರಿಗೆ ಜಮೀನನ್ನು ಕೊಡಬೇಕು. ಇದರಿಂದ ಮಾತ್ರ ಆಹಾರೋತ್ಪತ್ತಿ ಜಾಸ್ತಿಯಾಗಬಹುದೆಂದು ಕಾಣುತ್ತದೆ. ವ್ಯವಸಾಯ ಉತ್ಪಾದನೆಯ ವಿಚಾರ ಕೆಲವು ಸ್ನೇಹಿತರು ಹೇಳಿದ್ದಾರೆ. ಅನೇಕ ಕಡೆ ನೋಡುತ್ತಿದ್ದೇನೆ. ಪಕ್ಕದಲ್ಲಿ ನಿಮ್ಮ ಸ್ನೇಹಿತರು, ವಿದ್ಯಾವಂತರು ಮಾಡುತ್ತಿದ್ದಾರೆ, ಅದನ್ನನುಸರಿಸಿ ಮಾಡಿ ಎಂದು ಹೇಳಿ ನಾಲ್ಕೈದು methods ತೋರಿಸಿ ಕೊಟ್ಟರೂ ಮಾಡುವುದಿಲ್ಲ. ನಮ್ಮ ಮಲೆನಾಡಿನಲ್ಲಿ ನೋಡಿದ್ದೇನೆ. ಚೆನ್ನಾಗಿ ನಾಟಿ ಮಾಡುತ್ತಾರೆ. ಏಕೆ ಮಾಡುತ್ತಾರೆಂದರೆ ಅಲ್ಲಿ ದುಡ್ಡು ಸಂಪಾದನೆಯಾಗುತ್ತದೆ. ಮತ್ತು ನೀರಾವರಿ ಅನುಕೂಲವಿದೆ. ಈ ರೀತಿ ಚೆನ್ನಾಗಿ ಮಾಡಿರುವುದರಿಂದ ಈ ವರ್ಷ average yield ಜಾಸ್ತಿಯಾಗಿದೆ. ಆದ್ದರಿಂದ ಜಾಸ್ತಿ ಬೆಳೆಯಾಗ ಬೇಕಾದರೆ ವಿದ್ಯಾವಂತರಾದ ಜನರು ವ್ಯವಸಾಯ ದಲ್ಲಿ ತೊಡಗಬೇಕು. ಅನೇಕರು ಹೇಳಿದರು, ಏರೋ ಪ್ಲೇನ್‌ನಲ್ಲಿ ಹೋಗಿ ಹುಳು ಔಷಧಿ ಹಾಕಿ ಎಂದು. ಆದರೆ ಕ್ರಿಮಿ ಕೀಟವನ್ನು ಹೋಗಲಾಡಿಸುವುದಕ್ಕೆ ರೈತರಿಗೆ ನಬ್ಬಿಡಿ ಕೊಡುವುದಿಲ್ಲ. ನೂರಕ್ಕೆ 50 ರಷ್ಟು ಇದು ವರವಾನ ಕೊಡುತ್ತದೆ. ಎಷ್ಟೋ ಜನ ಮನುಷ್ಯರಿಗೆ ರೋಗಬಂದರೆ ನೋಡುವುದಿಲ್ಲ. ಇನ್ನು ರೈತರು ಗಿಡಗಳಿಗೆ ಬಂದಾಗ ನೋಡುತ್ತಾರೆಯೇ ! ಆದ್ದರಿಂದ ಎಲ್ಲರೂ ಒಂದೇ ಪ್ರಮಾಣದಲ್ಲಿ ಕ್ರಿಮಿಕಾಟವನ್ನು ನಾಶಮಾಡುವುದಕ್ಕೆ ಪ್ರಯತ್ನ ಮಾಡಿದರೆ ಆಗುತ್ತದೆಯೇ ಹೊರತು ಒಬ್ಬರು ಇಬ್ಬರು ಮಾಡುವುದರಿಂದ ಏನೂ ಆಗುವುದಿಲ್ಲ. ಆದ್ದರಿಂದ ವಿದ್ಯಾವಂತ ಜನರು ಇಂಥ ಸುಧಾರಿತ ರೀತಿಯ ವ್ಯವಸಾಯಕ್ಕೆ ತೊಡಗಿದರೆ ಅನುಕೂಲವಾಗುತ್ತದೆಯೇ ಹೊರತು ಮಿಕ್ಕವರಿಂದ ಇದೆಲ್ಲಾ ಆಗುತ್ತದೆಂದು ನಿರೀಕ್ಷಿಸುವುದು ಕಷ್ಟ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ತಾವು ವಿದ್ಯಾವಂತರು ವ್ಯವಸಾಯಕ್ಕೆ ಬರಬೇಕೆಂದು ಹೇಳುತ್ತೀರಾ ! ಈಗ ಶೇಕಡ ವಿದ್ಯಾವಂತವರ್ಗ ನಮ್ಮ ದೇಶದಲ್ಲಿ ಎಷ್ಟಿದೆಯೆಂದು ತಮಗೇ ಗೊತ್ತಿದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ವಿದ್ಯಾಭ್ಯಾಸಕ್ಕೆ ನಾವು ಹೆಚ್ಚು ಖರ್ಚುಮಾಡುತ್ತಿದ್ದೇವೆ. ಆದರೆ, ಅವರೆಲ್ಲಾ ಬೆಂಗಳೂರಿಗೆ ಬಂದು ಸೇರಿಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ತಾವುಗಳೂ ಪ್ರಯತ್ನ ಮಾಡಬೇಕು.

ಆಮೇಲೆ, ಡಾ॥ ನಾಗನಗೌಡರು ಹೇಳಿದರು, ವ್ಯವಸಾಯದಲ್ಲಿ 11 ಸ್ಕೀಮುಗಳಿದ್ದವು. ಒಟ್ಟು 11 ಸ್ಕೀಮಿಗಾಗಿ 403 ಲಕ್ಷ ರೂಪಾಯಿಗಳನ್ನು ಒದಗಿಸಿತ್ತು. ಮೊದಲನೆಯದಕ್ಕೆ 1957-58ಕ್ಕೆ ಒದಗಿಸಿದ್ದ 95 ಲಕ್ಷ (ಚಿಲ್ಲರೆ) ರೂಪಾಯಿಗಳಲ್ಲಿ ಖರ್ಚಾದ್ದು 64 ಲಕ್ಷ (ಚಿಲ್ಲರೆ) ಮಾತ್ರ. ಇದಕ್ಕೆ ಕಾರಣವೇನು ಎಂದು ನಾಗನಗೌಡರು ಕೇಳಿದರು. ಕಾರಣವೇನೆಂದರೆ, Seed farms ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೆವು. ಅದನ್ನು ಮಾಡಲಾಗಲಿಲ್ಲ. ಅನೇಕ ಸದಸ್ಯರೂ ಕೂಡ Seed farms ಮಾಡಬೇಕೆಂದು ಅಭಿಪ್ರಾಯ ಪಟ್ಟದ್ದರಮೇಲೆ, ಇದು ಬಹು ಮುಖ್ಯವಾದದ್ದೆಂದು ಹೇಳಿ ಜಮೀನು ಅಕ್ವೈರ್ ಮಾಡಿಕೊಳ್ಳಲಿಕ್ಕೆ 500 ರೂಪಾಯಿನಂತೆ ಒದಗಿಸಿದ್ದೆವು. ಆದರೆ 500 ರೂಪಾಯಿಗಳಿಂದ ಅಕ್ವಿಜಿಷ್ಷನ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದರ ಮೇಲೆ ಇಂಡಿಯಾ ಸರ್ಕಾರದವರಿಗೆ ಹೇಳಿ 1,800 ರೂಪಾಯಿಗಳನ್ನು ಒದಗಿಸಬೇಕೆಂದು ಹೇಳಿದ್ದೇವೆ. ಅವರು ಒಪ್ಪಿಲ್ಲ. ಇನ್ನೂ ವ್ಯವಹಾರ ನಡೆಯುತ್ತಿದೆ.

ವ್ಯವಸಾಯದ ಅಭಿವೃದ್ಧಿಯ ಬಗ್ಗೆ ಮೊದಲನೆಯ ಯೋಜನೆಯಲ್ಲಿ, ಏಳು ಸ್ಕೀಮುಗಳನ್ನು ತಯಾರು ಮಾಡಿದ್ದೆವು. ಸುಮಾರು 41 ಲಕ್ಷ ರೂಪಾಯಿಗಳನ್ನು ಒದಗಿಸಿತ್ತು. ಇದರಲ್ಲಿ 28 ಲಕ್ಷ (ಚಿಲ್ಲರೆ) ರೂಪಾಯಿಗಳು ಖರ್ಚಾಗಿವೆ. ಈಗ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ 98 ಸ್ಕೀಮುಗಳನ್ನು ಹಾಕಿಕೊಂಡಿದೆ. ಒಟ್ಟು ಮೂರು ಕೋಟಿ 47 ಲಕ್ಷ ರೂಪಾಯಿಗಳಷ್ಟು ಸ್ಕೀಮುಗಳನ್ನು ಹಾಕಿಕೊಂಡಿದೆ. ಈ ಪೈಕಿ 1957-58ಕ್ಕೆ ಖರ್ಚಾಗಿರುವುದು 38 ಲಕ್ಷ ರೂಪಾಯಿಗಳು. ಏಕೆ ಕಡಮೆಯಾಯಿತೆಂದು ಹೇಳುತ್ತೇನೆ. Research Schemes ಮತ್ತು Improvement of seedsಗಳೇ ಸೇರಿವೆ.

ಈ ಸ್ಕೀಮುಗಳನ್ನು ಸೆಂಟ್ರಲ್ ಗೌರ್ನಮೆಂಟಿನವರು ಮತ್ತು ಅನೇಕ ಸಮಿತಿಗಳವರು (ಸೆಂಟ್ರಲ್ ಕೋಕೋನಟ್ ಸಮಿತಿ, ಸೆಂಟ್ರಲ್ ಕಾಟನ್ ಸಮಿತಿ, ಆಯಿಲ್ ಸೀಡ್ಸ್ ಸಮಿತಿ) ಮತ್ತು ನಾವು ಸೇರಿ ಮಾಡುವುದು. ಮಾನ್ಯ ನಾಗನಗೌಡರು ವ್ಯವಸಾಯದ ಇಲಾಖೆ ಖರ್ಚು ಕಡಮೆಯಾಗಿದೆ ಎಂದು ಹೇಳಿದರು.

Dr. R. NAGAN GOWDA.— Sir, a word of personal explanation. I did not mention about the decrease in the expenditure side. I think it was my friend Sri B. R. Sunthankar that was doing that. I was only looking at the brighter side of the picture and was congratulating the Minister on the increased expenditure of 56 lakhs that he has provided for 1958-59.

Sri H. S. RUDRAPPA.—Thank you. ಆದ್ದರಿಂದ ನಾವು ಅವರ ಸಲಹೆಗಳನ್ನೆಲ್ಲಾ ತೆಗೆದು ಕೊಳ್ಳಬೇಕು. ಕೋಕೋನಟ್ ರೀಸರ್ಚ್ ಫಾರಂ ಪ್ರಾರಂಭ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಜಾಗವನ್ನೂ, ನಲಕರಣೆಗಳನ್ನೂ ಒದಗಿಸಿಕೊಳ್ಳುವುದರಲ್ಲಿ ನಿಧಾನವಾಗಿದೆ. ಮೊದಲು ಇಂಡಿಯಾ ಸರ್ಕಾರದ ಪ್ರತಿನಿಧಿಗಳು ಒಬ್ಬರು ಬಂದು ನೋಡಿಕೊಂಡು ಹೋದರು. ಆಮೇಲೆ ಇನ್ನೊಬ್ಬ ಪ್ರತಿನಿಧಿಗಳು "ನಾನು ಬಂದು ನೋಡಬೇಕು, ನಾನು ಬರುವವರೆಗೆ

(SRI H. S. RUDRAPPA)

ಸ್ಪಾರ್ಟ್ ಮಾಡಬೇಡಿ'' ಎಂದು ಬರೆದರು. ಅವರು ಬೇಕಾದಷ್ಟು ಸಹಾಯ ಕೊಡುವವರು. ಅವರು ಬಂದು ನೋಡಿದ ಹೊರತು, ಪ್ರಾರಂಭಮಾಡಲಿಕ್ಕಾಗಲಿಲ್ಲ. ಒಂದು ತಿಂಗಳಹಿಂದೆ ಬಂದು ನೋಡಿ, ''ಸರಿಯಾಗಿದೆ, ಪ್ರಾರಂಭಮಾಡಿ'' ಎಂದು ಹೇಳಿದರು.

Sri A. R. KARISIDDAPPA.—May I know the names of the Members from our State in that Cocoanut Research Committee, Sir?

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ಕೊನೆಗೆ ಹೇಳುತ್ತೇನೆ. ನಮ್ಮ ರಾಜ್ಯದ ಪ್ರತಿನಿಧಿಗಳು ಕೇಂದ್ರ ಸಮಿತಿಯಲ್ಲಿದ್ದಾರೆ. ನನಗೆ ಗೊತ್ತಿರುವ ಹಾಗೆ ಮೊದಲು ಶ್ರೀ ವೆಂಕಟಪ್ಪನವರು ಇದ್ದರು. ಈಗ ಶ್ರೀ ಲಿಂಗದೇವರು ಇದ್ದಾರೆ.

ಈ ಕಾರಣದಿಂದ ನಾವು ಎಷ್ಟು ಕೆಲಸವನ್ನು ಮಾಡಬೇಕೆಂದಿದ್ದೇವೋ ಅಷ್ಟು ಮಾಡಲಕ್ಕೆ ಆಗಲಿಲ್ಲ, 98 ಸ್ಕೀಮುಗಳಿಗೂ ನಾವು ಸ್ಯಾಂಕ್ಷನ್ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. 59 ಸ್ಕೀಂಗಳು ಸ್ಯಾಂಕ್ಷನ್ ಆಗಿವೆ. ಬಹುಶಃ 25-30 ಯೋಜನೆಗಳು ಇಂಡಿಯಾ ಸರ್ಕಾರದವರ ಕೈಯಲ್ಲಿ ಇವೆ. ಅವರು ಸ್ಯಾಂಕ್ಷನ್ ಮಾಡಲು ಬಹಳ ತೊಂದರೆಗಳಿವೆ. ಪ್ರಾರಂಭಮಾಡುವುದಕ್ಕೂ ಬಹಳ ತೊಂದರೆಗಳಿವೆ. ಆದರೂ ಜಾಗ್ರತೆ ಪ್ರಾರಂಭ ಮಾಡುತ್ತೇವೆ. ಮಾನ್ಯ ಸದಸ್ಯರಿಗೆ ಮುಖ್ಯವಾದ ತೊಂದರೆಗಳೇನು ಎಂಬುದನ್ನು ಹೇಳುತ್ತೇನೆ. ವ್ಯವಸಾಯಗಾರರಿಗೆ ಒಳ್ಳೆಯ ಬೀಜ ಒದಗಬೇಕು. ಇಂಡಿಯಾ ಸರ್ಕಾರದವರು ಆಹಾರ ಉತ್ಪನ್ನ ಜಾಸ್ತಿಯಾಗುವುದಕ್ಕೆ, ಇದು ಲಕ್ಷ ಟಿ ಹೆಚ್ಚು ಉತ್ಪತ್ತಿಮಾಡಬೇಕೆಂದು ಹೇಳಿದ್ದಾರೆ, ಆವಾಗ 1,40,000 ಟಿ ಒಳ್ಳೆಯ ಬೀಜ ಹೆಚ್ಚಾಗಿ ಒದಗುತ್ತದೆ. ಬೀಜವನ್ನು ಒದಗಿಸುವುದು ಸರ್ಕಾರದ ಮುಖ್ಯ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ 56 ಫಾರಂಗಳನ್ನು ಪ್ರಾರಂಭಮಾಡಬೇಕು. 1961ನೆಯ ಇಸವಿ ಮುಗಿಯುವುದರೊಳಗೆ ಪ್ರತಿವರ್ಷ 10-11 ರಂತೆ ಪ್ರಾರಂಭಮಾಡಬೇಕೆಂದು ಕೇಂದ್ರ ಸರ್ಕಾರದವರು ಲೆಕ್ಕಹಾಕಿದ್ದಾರೆ. 56 ಫಾರಂಗಳನ್ನು ಮಾಡಿದರೆ ನಮ್ಮ ರಾಜ್ಯಕ್ಕೆ ಸಾಕಾಗುವುದಿಲ್ಲ. ನಾವು ಜವಾಬ್ದಾರಿಯನ್ನು ಅರಿತು ಇವುಗಳನ್ನು ಹೆಚ್ಚಿಗೆ ಮಾಡಬೇಕು. ಒಂದು ತಾಲ್ಲೂಕಿಗೆ ಒಂದು ಫಾರಂ ಇರಬೇಕು ಎಂಬುದು ನಮ್ಮ ಉದ್ದೇಶ. ಮೂರು ವರ್ಷಗಳೊಳಗೆ 56 ಫಾರಂಗಳನ್ನು ಪೂರ್ತಿಮಾಡಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆ ವಿಚಾರಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನು ಪುನರ್ಕರೂಪದಲ್ಲಿ ಒದಗಿಸಿದ್ದೇವೆ. ಸೀಡ್ ಫಾರಂಗಳಿಂದ ಬಹಳ ಉಪಯೋಗವಿದೆ. ಯಾವ ರೀತಿಯಾದಂಥ ಗೊಬ್ಬರದಿಂದ ಯಾವ ನಮೂನೆ ಬೆಳೆ ಬೆಳೆಯಬೇಕು ಎಂದು ಜನಗಳಿಗೆ ತಿಳಿಯಬೇಕಾದ್ದರಿಂದ ಮಾನ್ಯ ಸದಸ್ಯರು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಫಾರಂ ಇರಬೇಕು ಅನ್ನುವುದನ್ನು ನಾನು ಒಪ್ಪುತ್ತೇನೆ. ಅದನ್ನು ಜಾರಿಗೆ ತರಲಿಕ್ಕೆ ಪ್ರಯತ್ನಮಾಡುತ್ತೇವೆ. ಜಮೀನು ಒದಗುವುದೇ ಕಷ್ಟವಾಗಿದೆ. ಜಮೀನನ್ನು ಅಕ್ವೈರ್ ಮಾಡಬೇಕು. ಚೆನೆಂಟ್ಸ್ ಇದ್ದರೆ ಬಿಡಿಸಿಬಿಡುತ್ತಾರೆ, ಎಂದು ಮಾನ್ಯ ಸದಸ್ಯರಿಂದ ದೂರು ಬಂದಿದೆ. ಈ ದೂರು ಬೇಜವಾಬ್ದಾರಿಯಿಂದ ಹೇಳಿದುದಲ್ಲ.

6-30 P.M.

ಈ ತೊಂದರೆಗಳಿರುವುದರಿಂದ ನಮಗೆ ಜಾಗ್ರತೆ ಜಮೀನು ಒದಗುತ್ತಿಲ್ಲ. ಆದರೂ ಕೂಡ ನಾವು ಐದು ವರ್ಷಗಳಲ್ಲಿ 56 ಸೀಡ್ ಫಾರಂಗಳನ್ನು ಮಾಡಬೇಕೆಂದಿದ್ದರೂ ಮೂರೇ ವರ್ಷಗಳಲ್ಲಿ ಮಾಡಬೇಕೆಂದಿದ್ದೇವೆ. ಹಿಂದೆ ಜಮೀನನ್ನು ಅಕ್ವೈರ್ ಮಾಡುವುದಕ್ಕೆ ತೊಂದರೆಯಿದ್ದುದರಿಂದ ಹಣವನ್ನು ಖರ್ಚುಮಾಡಿಲ್ಲ. ಈ ವರ್ಷ ಅದಕ್ಕಿಂತ ಹೆಚ್ಚು ಹಣವನ್ನೊದಗಿಸಿರುವುದಕ್ಕೆ ತಕ್ಕಂತೆ ಹೆಚ್ಚು ಖರ್ಚುಮಾಡುತ್ತೇವೆ. ಸಾಧ್ಯವಾದಷ್ಟು ಬೀಜಗಳನ್ನೊದಗಿಸುವ ಏರ್ಪಾಡು ಮಾಡುತ್ತೇವೆ.

ನಮ್ಮ ದೇಶದಲ್ಲಿ ಬರಿಯ ಆಹಾರ ಬೆಳೆಗಳೇ ಅಲ್ಲದೆ ಇತರ ಬೆಳೆಗಳೂ ಬೆಳೆಯುತ್ತವೆ. ಬೇರೆ ಬೆಳೆಗಳಿಗೂ ಗಮನಕೊಡಬೇಕು. ಇದರಿಂದ ನಮ್ಮ ಇಂಡಿಯಾ ದೇಶದ ಆರ್ಥಿಕ ಸ್ಥಿತಿ ಉತ್ತಮವಾಗಬೇಕು. ನಮ್ಮ ನ್ಯಾಷನಲ್ ಇನ್‌ಕಮ್ ಜಾಸ್ತಿಯಾಗಬೇಕು. ಈ ದೃಷ್ಟಿಯಿಂದ ಇತರ ಬೆಳೆಗಳಿಗೂ ಪ್ರೋತ್ಸಾಹಕೊಡುವುದು ಒಳ್ಳೆಯದು. ದಕ್ಷಿಣ ಕನ್ನಡ ಜಿಲ್ಲೆಗೆ ಸಂಶೋಧನಾಲಯವಿಲ್ಲವೆಂದು ಹೇಳಿದರು. ಬಹುಶಃ ಅವರು ನೋಡಿಲ್ಲ. ಈಜಿಪ್ಟ್ ದೇಶದಿಂದ ವರ್ಷಕ್ಕೆ ಸುಮಾರು 35 ರಿಂದ 40 ಕೋಟಿ ರೂಪಾಯಿನಷ್ಟು ಹತ್ತಿಯನ್ನು ಇಂಡಿಯಾ ದೇಶಕ್ಕೆ ತರಿಸುತ್ತಿದ್ದೇವೆ. ಈಜಿಪ್ಟಿನ long staple ಹತ್ತಿ ಬೆಳೆ ನಮ್ಮ ದೇಶದಲ್ಲಿ ಆಗುತ್ತಿಲ್ಲ. ನಮ್ಮ ದೇಶದಲ್ಲಿ ಏನಾದರೂ ಪ್ರಯತ್ನಮಾಡಿ ಅದನ್ನು ಬೆಳೆಯಬೇಕೆಂದು ಪ್ರಯತ್ನಗಳನ್ನು ನಡೆಸಿದೆವು. ಅನೇಕ ಕಡೆ ಪ್ರಯತ್ನಮಾಡಿದೆವು. ಆದರೆ ಅಲ್ಲಿ ಬೆಳೆಯಲಿಲ್ಲ. ಈಜಿಪ್ಟ್ ಹತ್ತಿಬೀಜವನ್ನು ರಾಯಚೂರು ಗುಲ್ಬರ್ಗ ಜಿಲ್ಲೆಗಳಿಗೆ ಕೊಡಲಲ್ಲವೆಂದು ಕೆಲವರು ಹೇಳಿದರು. ಆದರೆ ಅಲ್ಲಿ ಬೆಳೆಯಲು ಪ್ರಯತ್ನ ಮಾಡಿ ಅದು ಆಗಲಿಲ್ಲ. Sea Island cotton Andrews variety ಯನ್ನು ಮಂಗಳೂರಿನಲ್ಲಿ ಬೆಳೆಯಲು ನಾಲ್ಕೈದು ವರ್ಷಕಾಲ ಪ್ರಯತ್ನಮಾಡಿ, ಸಂಶೋಧನೆ ನಡೆಸಿದ ಮೇಲೆ ನಮ್ಮುದ್ರ ತೀರದಲ್ಲಿ ಬೆಳೆಯಲು ಅನುಕೂಲವಾಗಿದೆಎಂದು ಕಂಡುಹಿಡಿಯಲಾಯಿತು. ಹೋದ ವರ್ಷ ಅಲ್ಲಿ ಬಿತ್ತನೆಯನ್ನು ಹಾಕಲಾಯಿತು. ಕೆಲವು ಕಡೆ ಚೆನ್ನಾಗಿ ಬಂದಿಲ್ಲವೆಂದು ಹೇಳಿದರು. ಅದು ಬೀಜದ ತಪ್ಪಿನಿಂದಲ್ಲ. ವ್ಯವಸಾಯ ಮಾಡಿದ ದರಲ್ಲಿ ಯಾರು ಆಶ್ರದ್ಧೆಯನ್ನು ತೋರಿಸಿದರೋ ಅವರಿಗೆ ಸರಿಯಾದ ಬೆಳೆಯಾಗಿಲ್ಲ. ಚೆನ್ನಾಗಿ ಕೆಲಸವಾಡಿದ ಕಡೆ ಆಗಿದೆ. ಈ ಹತ್ತಿಯನ್ನು ಬೆಳೆಯುವುದರಿಂದ ನಮ್ಮ ದೇಶಕ್ಕೆ ಬಹಳ ಲಾಭ ಬರುತ್ತದೆ. ಆದುದರಿಂದ ಈ ವರ್ಷ ಅದನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆದು ಬಹುಶಃ ಹೆಚ್ಚು ಬೀಜವನ್ನೊದಗಿನಲು ಪ್ರಯತ್ನಮಾಡುತ್ತೇವೆ. ಆದರೂ ಹೆಚ್ಚು ಫಸಲು ಬರುತ್ತದೆಂದು ನಿರೀಕ್ಷೆಮಾಡುವ ಹಾಗಿಲ್ಲ. ಏಕೆಂದರೆ ಹೋದ ವರ್ಷತಾನೇ ಶಿವಮೊಗ್ಗ, ಕೊಡಗು, ದಕ್ಷಿಣ ಕನ್ನಡ ಮುಂತಾದ ಕೆಲವು ಕೆಡೆಗಳಲ್ಲಿ ಪ್ರಾರಂಭಮಾಡಿದ್ದೇವೆ.....

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ತಾವು ಗೊಬ್ಬರದ ವಿಚಾರ ಹೇಳಿದಿರಿ. ಖಾನಗೀ ಜನರು ಸೀಮೆ ಗೊಬ್ಬರವನ್ನು ಮಾರುತ್ತಾರೆ. ಅವರಿಂದ ಮೋಸವಾಗುತ್ತಿದೆ. ಅವರು ಬಿಳಿಯ ಮಣ್ಣನ್ನು ಸೀಮೆ ಗೊಬ್ಬರಕ್ಕೆ ಬೆರಸಿ ಮಾರುತ್ತಾರೆ. ಆದಕಾರಣ ಕೃತಕ ಗೊಬ್ಬರವನ್ನು ಖಾನಗಿ ಜನರು ಮಾರುವುದಕ್ಕೆ ಅವಕಾಶ ಕೊಡಬಾರದು. ಸಹಕಾರ ಸಂಘಗಳ ಮೂಲಕ ಮಾರಬೇಕೆಂದು ನನ್ನ ಸಲಹೆ.

ಶ್ರೀ ಎಚ್. ಎಸ್. ರುದ್ರಪ್ಪ.—Sea Island cotton ಬೆಳೆಯಲು ಪ್ರಾರಂಭಮಾಡಿದ್ದೇವೆ; ಮುಂದೆ ಚೆನ್ನಾಗಿ ಉತ್ಪತ್ತಿ ಬರುತ್ತದೆಂಬ ನಿರೀಕ್ಷೆ ಇದೆ.

ಅಧ್ಯಕ್ಷರು.—Sea Island cotton ಈಜಿಪ್ಷಿನ ಹತ್ತಿಗೆ ಸರಿಯಾಗುತ್ತದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಆಗುತ್ತದೆ.

ಶ್ರೀ ಎಲ್. ಎಸ್. ವೆಂಕಾಜಿರಾವ್ (ಬನವನ ಗುಡಿ).—ಇದನ್ನು ಎಲ್ಲ ಕಡೆಯೂ ಬೆಳೆಯುವುದಕ್ಕಾಗುವುದಿಲ್ಲವೆ?

ಶ್ರೀ ಎಚ್. ಎಸ್. ರುದ್ರಪ್ಪ.—ಎಲ್ಲ ಕಡೆಯೂ ಆಗುವುದಿಲ್ಲ. ಅದಕ್ಕೆ ಬೇಕಾದ ವಾಯುಗುಣ ಭೂಗುಣವಿರುವ ಕಡೆ ಮಾತ್ರ ಆಗುತ್ತದೆ. ಎತ್ತರವಾದ ಪ್ರದೇಶವಾಗಿರಬೇಕು, humidity ಬೇಕು. ನಮ್ಮ ರಾಜ್ಯದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಲ್ಲಿ ಬೆಳೆಯುತ್ತದೆ. ಈ ವರ್ಷ ಪ್ರಯೋಗ ನಡೆಸಿದ್ದೇವೆ; ಮುಂದಿನ ವರ್ಷದಿಂದ ಎರಡು ಮೂರು ಸಾವಿರ ಎಕರೆಯಷ್ಟು ಹಾಕಿ ಬೆಳೆಸಲು ಪ್ರಯತ್ನ ಮಾಡಿ ಆಮೇಲೆ ಲಕ್ಷಾಂತರ ಎಕರೆಗಳ ಮೇಲೆ ಬೆಳೆಸುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಟಿ. ಕೆ. ಕಂಬಳಿ.—ಬೊಂಬಾಯಿ ಕರ್ನಾಟಕದಲ್ಲಿ ಬೆಳೆಯುತ್ತದೆ. ಕುಂದಗೋಲದಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಶ್ರೀ ಎಚ್. ಎಸ್. ರುದ್ರಪ್ಪ.—ಅದು ಬೇರೆ ಜಾತಿಯದಿರಬಹುದು. Sea Island cotton ಅಲ್ಲ.

ತಾವು ಹೇಳಿರುವ ಸಲಹೆ ಕಳುಹಿಸಿದರೆ ಪರೀಕ್ಷೆ ಮಾಡುತ್ತೇವೆ. ಆದರೆ ಅದು ಈಜಿಪ್ಷಿಯನ್ ಕಾಟನ್ ಅಲ್ಲ.

ಗೊಬ್ಬರದ ವಿಷಯ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಗೊಬ್ಬರ ಮತ್ತು ಕಬ್ಬಿಣವನ್ನು ಮತ್ತು ಇನ್ನು ಕೆಲವನ್ನು ಸರ್ಕಾರದವರು ಇಲಾಖೆಯಿಂದ ಸರಬರಾಯಿ ಮಾಡುತ್ತಿದ್ದಾರೆ. ಹಾಗೆ ಮಾಡುವುದರಿಂದ ಅನೇಕ ವಿಧವಾದ ದೂರುಗಳು ಬಂದಿವೆ. ಗೊಬ್ಬರ, ಗುಳ ವಗೈರೆ ಸರಿಯಾಗಿ ಮಾರುವುದಿಲ್ಲ ಎಂದು ಹೇಳುತ್ತಿದ್ದಾರೆ. ಅದನ್ನು ಸರ್ಕಾರ ಒದಗಿಸುವುದರಿಂದ ರೈತರಿಗೆ ಸರಿಯಾಗಿ ದೊರೆಯುವುದಿಲ್ಲ, ಖಾಸಗಿ ಜನರಿಗೆ ಅದನ್ನು ಪಹಿಸುವುದು ಬಹಳ ಒಳ್ಳೆಯದು, ಅವರು ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬಹುದು ಎಂಬ ದೃಷ್ಟಿಯಿಂದ, ಇಂಡಿಯಾ ಸರ್ಕಾರದ ಮತ್ತು ಅಧಿಕಾರಿಗಳ ಸಲಹೆ ಪ್ರಕಾರ ಖಾಸಗಿಯಾಗಿ ಜನರಿಗೆ ಮಾರುವುದಕ್ಕೆ, ವಿಲೇವಾರಿ ಮಾಡುವುದಕ್ಕೆ ಅವಕಾಶ ಮಾಡಿದೆ. ಕೋ-ಆಪರೇಟಿವ್ ಸೊಸೈಟಿ ಮೂಲಕ ಹಂಚಬೇಕು, ಖಾಸಗಿ ಜನರಿಗೆ ಹಂಚಲು ಅವಕಾಶ ಕೊಡಕೂಡದು ಎಂದು ಹೇಳಿದ್ದಾರೆ. ಗೊಬ್ಬರ ಮಾತ್ರ ನಮ್ಮ ಕೈಯ್ಯಲ್ಲಿದೆ, ಕಬ್ಬಿಣ ಇಲ್ಲ. ನೈಟ್ರೇಟ್ ಮೆನ್ಯೂರ್ ಸರ್ಕಾರದ ಕೈಲಿದೆ, ಸೂಪರ್ ಫಾಸ್ಫೇಟ್ ಪ್ರೈವೇಟ್ ಕಂಪೆನಿಗಳ ಕೈಲಿದೆ, ಅದನ್ನು ಖಾಸಗಿಯವರೇ ಮಾರುವುದಕ್ಕೆ ಕೊಡುತ್ತಾರೆ. ಅಮೋನಿಯಂ ಸಲ್ಫೇಟ್, ನೈಟ್ರೇಟ್ ಸರ್ಕಾರದ ಸ್ವಾಧೀನದಲ್ಲಿದೆ. ತಮ್ಮ ಸಲಹೆ ಪ್ರಕಾರ ಹಂಚುತ್ತೇವೆ. ಸರ್ಕಾರದ ಸ್ವಾಧೀನದಲ್ಲಿರುವುದನ್ನು ಇತರರು ಮಾರುತ್ತಿದ್ದಾರೆಂದು ಹೇಳಿದರು. ಬೆಳಗಾಂನಲ್ಲಿ ಒಬ್ಬರಿಗೆ ಕೊಟ್ಟಿತ್ತು, ಅದನ್ನು ವಜಾ ಮಾಡಿದೆ. ಮುಂದ್ಯದಲ್ಲಿ ಆ ರೀತಿ ಅವಕಾಶ ಕೊಟ್ಟಿದ್ದಾರೆಂದು ಶ್ರೀ ಬೊಮ್ಮೇಗೌಡರು ಹೇಳಿದರು. ಹೇಗೆ ಕೊಟ್ಟರೆಂದು ತನಿಖೆ ಮಾಡುತ್ತೇವೆ. ನನಗೆ ಗೊತ್ತಿರುವ ಹಾಗೆ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಗೊಬ್ಬರ ನಾವು ತಯಾರಿಸುವುದಲ್ಲ, ಇಂಡಿಯಾ ಸರ್ಕಾರದವರು ಕೊಡುವುದು. ಮೊದಲು ಸರ್ಕಾರದವರು ಗೊಬ್ಬರ ಉಪಯೋಗಿಸುವುದಕ್ಕೆ ಬೇಕಾದಷ್ಟು ಪ್ರಚಾರ ಮಾಡಬೇಕಾಗಿತ್ತು, ಅಲ್ಲದೆ ಸಬ್ಸಿಡೈಜ್ ಮಾಡಿಕೊಡಬೇಕಾಗಿತ್ತು. ಅಷ್ಟು ಮಾಡಿದರೂ ಜನರು ಉಪಯೋಗಿಸುತ್ತಿರಲಿಲ್ಲ. ಈಗ ಗೊಬ್ಬರದ ಉಪಯೋಗ, ಅದರಿಂದ ಉತ್ಪತ್ತಿ ಹೆಚ್ಚಾಗಿದೆ ಎಂಬುದು ಚೆನ್ನಾಗಿ ಗೊತ್ತಾಗಿದೆ, ಜನ ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಸಿಂಧ್ರಿ ಕಂಪೆನಿಗಳಲ್ಲಿ ತಯಾರಾಗುವ ಗೊಬ್ಬರ ನಮ್ಮ ದೇಶಕ್ಕೆ ಬೇಕಾದ ಗೊಬ್ಬರದಲ್ಲಿ ಕಾಲುಭಾಗ ಕೂಡ ಇಲ್ಲ. ಈಗ ಹೊರದೇಶದಿಂದ ಗೊಬ್ಬರ ತರಿಸಬೇಕಾಗಿದೆ. ಹೋದ ವರ್ಷ 21 ಸಾವಿರ ಟನ್ ತರಿಸಿತ್ತು, ಈ ವರ್ಷ 50 ಸಾವಿರ ಟನ್‌ಗಿಂತ ಜಾಸ್ತಿಯಾಗಿ ಬೇಕಾಗಿದೆ. ಫಾರಿನ್ ಎಕ್ಸ್‌ಛೇಂಜ್ ಕಷ್ಟವಿರುವುದರಿಂದ 50 ಸಾವಿರ ಟನ್ ಕೇಳಿದರೆ 25 ಸಾವಿರ ಟನ್ ಒದಗಿಸುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಸ್ವಲ್ಪ ಕಡಮೆ ಸರಬರಾಯಿ ಮಾಡಬೇಕಾಯಿತು. ಕಡಮೆ ಪ್ರಮಾಣದಲ್ಲಿ ಈ ಸಲ ಗೊಬ್ಬರ ಒದಗಬಹುದು. ಹೆಚ್ಚು ಗೊಬ್ಬರ ಒದಗಿಸಬೇಕೆಂದು ಇಂಡಿಯಾ ಸರ್ಕಾರವನ್ನು ಪದೇ ಪದೇ ಕೇಳುತ್ತಿದ್ದೇವೆ. ಆಹಾರ ಹೆಚ್ಚಾಗಿ ಬೆಳೆಯಬೇಕೆಂದು ಹೇಳುವಾಗ ಗೊಬ್ಬರ ಹೆಚ್ಚಾಗಿ ಒದಗಿಸಬೇಕು, ಈಗ ಫಾರಿನ್ ಎಕ್ಸ್‌ಛೇಂಜ್ ಹೆಚ್ಚಾಗಿದೆ, ಗೊಬ್ಬರ ಹೆಚ್ಚಾಗಿ ತರಿಸಬೇಕು ಎಂದು ಕೇಳಿದ್ದೇವೆ. ಬಹುಶಃ ಹೆಚ್ಚಾಗಿ ತರಿಸಿ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಒದಗಿಸಬಹುದು. ಡಿಪೋ ನಮ್ಮಲ್ಲಲ್ಲ, ಇಂಡಿಯಾ ಸರ್ಕಾರದ್ದು. ಕಂಪೆನಿ ಒದಗಿಸುವ ಪ್ರಮಾಣದಲ್ಲಿ ನಾವು ಒದಗಿಸುತ್ತೇವೆ. ಈ ವಿಷಯ ಪತ್ರಿಕೆಗಳಲ್ಲಿ ಬಂದಿರುವ ಹಾಗೆ ರಿಯಾಯಿತಿ ದರದಲ್ಲಿ ಒದಗಿಸಲು ಪ್ರಯತ್ನಮಾಡಬೇಕೆಂದು ನೆಹ್ರೂ ಅವರು ಹೇಳಿದಹಾಗೆ ಕಾಣುತ್ತದೆ, ಹಾಗಾದರೆ ಬಹಳ ಒಳ್ಳೆಯದು, ಸಬ್ಸಿಡೈಜ್‌ಮಾಡಿ ಕಡಿಮೆ ದರದಲ್ಲಿ ಒದಗಿಸಿದರೆ ಬಹಳ ಉತ್ತಮ. ನಾವು ಅದನ್ನು ಮಾಡುವುದಕ್ಕಾಗುವುದಿಲ್ಲ. ಇಂಡಿಯಾ ಸರ್ಕಾರದ ರೆವೆನ್ಯೂನಿಂದ ಬರುವ ಆದಾಯದಲ್ಲಿ ಹಣ ಒದಗಿಸುವುದು. 50 ಸಾವಿರ ಟನ್ ಒದಗಿಸುವಾಗ ಟನ್ನಿಗೆ 25 ರೂಪಾಯಿ ಕಡಮೆಮಾಡಿದರೆ ಎಷ್ಟು ಹಣ ಬೇಕಾಗುತ್ತದೆಂದು ನೋಡಬೇಕು.

Commercial crop ಅಂದರೆ ಅಡಿಕೆ, ತೆಂಗು, ಕಾಫಿ ಮುಂತಾದ ಬೆಳೆಗಳಿಗೆ ಹೆಚ್ಚಾಗಿ ಗೊಬ್ಬರವನ್ನು ಒದಗಿಸಲಾಗುತ್ತಿದೆ. ಯಾಕೆಂದರೆ ಈ ಬೆಳೆಗಳ ಉತ್ಪತ್ತಿಯಿಂದ ಹೆಚ್ಚು ದುಡ್ಡು ಬರುತ್ತದೆ. ಸಾಮಾನ್ಯವಾಗಿ ಬರತಕ್ಕಂಥ ಬೆಳೆಗೆಳಿಗೂ ಸಹ ರಿಯಾಯಿತಿ ದರದಿಂದ ಹಾಗೂ ಸಬ್‌ಸಿಡಿ ಕೊಟ್ಟು ಗೊಬ್ಬರ ಒದಗಿಸಿಕೊಡುವ ಬಗ್ಗೆ ಯಾವ ರೀತಿಯಾಗಿ ಮಾಡಬೇಕು ಎಂಬುದಕ್ಕೆ ನಾವೂ ನೀವೂ ಕೂಡಿ ಆಲೋಚನೆ ಮಾಡಬೇಕಾಗಿದೆ. Food crop ಮತ್ತು non-food crop ಗೆ ಸಹ ಗೊಬ್ಬರ ಒದಗಿಸ ಬೇಕಾಗಿದೆ. ಆದರೆ ಹೀಗೆ ಒದಗಿಸುವುದರಿಂದ ಕಳ್ಳ ಹೇಚೆಯಲ್ಲಿ ಗೊಬ್ಬರ ಮಾರಾಟವಾಗುವುದು, ಲಂಚತೆಗೆದುಕೊಳ್ಳುವುದು ಆಗದ ಹಾಗೆ ಮಾಡುವುದಕ್ಕೆ ಆಲೋಚನೆಮಾಡಿ ಗೊಬ್ಬರ ಒದಗಿಸುವದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ದೇವರಾಜ ಅರಸು.—ಈ "Development of local resources manurial and larger and better utilisation of local resources for production of manures in villages Rs. 4,68,000" ಎಂದು ಇದೆ. ಡಿವ್ಯಾಂಡಿನಲ್ಲಿ ಹಳ್ಳಿಗಳಿಗೆ ಗೊಬ್ಬರ ಪೂರೈಸುವ ಯಾವ ಹೊಸ ಯೋಜನೆ ಇದೆ? ಮೈಸೂರು ರಾಜ್ಯದ ಎರಡನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಕೊಟ್ಟಿರುವ ಪುಸ್ತಕಲ್ಲಿ ಇದರ ಬಗ್ಗೆ ಯಾಷ ವಿವರ ಇಲ್ಲದ ಮೂಲಕ ಏನೂ ಗೊತ್ತಾಗಲಲ್ಲ. ಅದನ್ನು ವಿಶದಪಡಿಸಿ ಹೇಳುತ್ತೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಕಂಪೋಸ್ಟ್ ಮೆನ್ಯೂರ್ ಸ್ಕೀಮು ಎಂದು ಇದೆ. ಹೋದವರ್ಷ ಎರಡು ಲಕ್ಷರೂಪಾಯಿ ಒದಗಿಸಲಾಗಿತ್ತು. ಗೊಬ್ಬರ ತಯಾರಿಸುವದಕ್ಕಾಗಿ ಊರಲ್ಲಿಯ ಹೊಲಸನ್ನು ಹೊರಗೆ ಸಾಗಿಸುವುದಕ್ಕೆ ಟಾನ್ಸ್‌ಪೋರ್ಟ್‌ಚಾರ್ಜ್‌ಗಾಗಿ ಒಂದು ಟನ್‌ಗೆ ಎರಡು ರೂಪಾಯಿಗಳಂತೆ ಕೊಡುತ್ತಿದ್ದೆವು. ಈಗ ಮುನಿಸಿಪಾಲಟಿ ಮಾಡತಕ್ಕಂಥ ಗೊಬ್ಬರ ಸಾಲದು. ಎರಡು ಸಾವಿರ ಜನಸಂಖ್ಯೆ ಇರುವ ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಸಹ ಮುಖ್ಯವಾಗಿ ಕಂಪೋಸ್ಟ್ ಗೊಬ್ಬರ ತಯಾರಿಸಬಹುದು. ಮೊದಲು ಲುಕ್ಸಾನು ಆಗುತ್ತಾ ಇತ್ತು. ಮಲಮೂತ್ರಗಳನ್ನು ಉಪಯೋಗಿಸಿ ಗೊಬ್ಬರ ಮಾಡಬೇಕು ಎಂದು ಒಂದು ಯೋಜನೆ ಹಾಕಲಾಗಿದೆ. ಆದ್ದರಿಂದ ಈ ವರ್ಷ ಹೆಚ್ಚಿಗೆ ಹಣ ಒದಗಿಸಿದ್ದೇವೆ.

ಅಧ್ಯಕ್ಷರು.—ಇದು nightsoil compost ಗೊಬ್ಬರ ಅಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಹೌದು. ಪಂಚಾಯಿತಿಗಳಿಗೆ ಎರಡು ಸಾವಿರ ರೂಪಾಯಿ ಈ ಗೊಬ್ಬರ ತಯಾರಿಕೆಗಾಗಿ ಕೊಡಬೇಕೆಂದು ಮಾಡಿದೆ.

Sri D. DEVARAJ URS.—Sir, a break-up is given in the Mysore Second Five-Year Plan for Rs. 4,68,000. Cost of staff 3,81,250; one jeep 14,750 and training cost 72,000. Not a single pie will go to any of the Panchayats.

ಶ್ರೀ ಎಚ್. ಎಸ್. ರುದ್ರಪ್ಪ.—ಈ ಕಂಪೋಸ್ಟ್ ಗೊಬ್ಬರ ತಯಾರಿಕೆಯ ಸ್ಕೀಮಿನ ಪ್ರಕಾರ ಜಾಗ್ರತೆಯಾಗಿ ಹಳ್ಳಿಗಳಲ್ಲಿ ಕೆಲಸ ಮಾಡುವ ಪ್ರಯತ್ನ ನಡೆಯಬೇಕು. ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರ ತಯಾರು ಮಾಡಬೇಕು. ಅದಕ್ಕಾಗಿ ಹಳ್ಳಿಗಳಿಗೆ ಗ್ರಾಂಟು ಒದಗಿಸುತ್ತಾ ಇದ್ದೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಸಾಮಿ, ಈ ಸ್ಕೀಮು ಹಳ್ಳಿಗಳಲ್ಲಿ ಸರಿಯಾಗಿ ನಡೆಯುತ್ತಿಲ್ಲ. ದುಡ್ಡು ವ್ಯರ್ಥವಾಗಿ ಖರ್ಚಾಗುತ್ತದೆ. ಇದಕ್ಕಾಗಿ ಹಳ್ಳಿಗಳಿಗೆ ದುಡ್ಡು ಕೊಟ್ಟರೆ ಹಳ್ಳಿಗಳಲ್ಲಿಯ ಪಟೇಲ ಶಾನಭೋಗರು ದುಡ್ಡು ತಿಂದು ಬಿಡುತ್ತಾರೆ. ಖಂಡಿತವಾಗಿ ಗೊಬ್ಬರ ತಯಾರಿಕೆಯ ಕೆಲಸವಾಗುವುದಿಲ್ಲ. ನಮ್ಮನೆ ಅನ್ಯಾಯವಾಗಿ ದುಡ್ಡು ಮಾತ್ರ ಖರ್ಚಾಗುತ್ತದೆ. ಮಂತ್ರಿಗಳು ಇದನ್ನು ಯೋಚನೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ತಾವು ಹೇಳಿದ್ದನ್ನು ನಾನು ಯೋಚನೆ ಮಾಡುತ್ತೇನೆ. ಅನೇಕ ಕಡೆ ಜನರು ಮುಂದೆ ಬಂದಿದ್ದಾರೆ. ಸಹಾಯ ಕೇಳುತ್ತಿದ್ದಾರೆ. ಇದನ್ನು ಒಂದು ಸಾರಿ ಮಾಡಿ ಅನುಭವ ತೆಗೆದುಕೊಳ್ಳೋಣ.

ಈಗ ಅನೇಕ ಮಾನ್ಯ ಸದಸ್ಯರು ನಮಗೆ ಕಬ್ಬಿಣದ ಅಭಾವ ಹಾಸ್ತಿ. ಸಾಕಾದಷ್ಟು ಕಬ್ಬಿಣದ ನರಬರಾಜು ಆಗುತ್ತಿಲ್ಲವೆಂದು ಹೇಳಿದರು. ಸಾಮಾನ್ಯವಾಗಿ ಇಂಡಿಯಾ ದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ಕಬ್ಬಿಣ ನಮಗೆ ಸಿಗಬೇಕೋ ಅಷ್ಟು ಸಿಗುತ್ತಿಲ್ಲ. ಅದನ್ನು ಪರದೇಶದಿಂದ ನಾವು ತರಿಸುತ್ತಿದ್ದೇವೆ. ನಮಗೆ ವರ್ಷ ಒಂದಕ್ಕೆ ಒಂದು ಕೋಟಾವನ್ನು ಅಲಾಟ್ ಮಾಡುತ್ತಿದ್ದಾರೆ. ಅಲ್ಲಿಂದ ಅದನ್ನು ಒಟ್ಟಿಗೆ ತರಿಸುವುದಕ್ಕೆ ಬಹಳ ಕಷ್ಟ, ನಮಗೆ ಎಷ್ಟು ಪ್ರಮಾಣ ಬೇಕಾಗುತ್ತದೋ ಅಷ್ಟನ್ನು ತರಿಸಬಹುದು. ಫಾರಿನ್ ಎಕ್ಸ್‌ಚೇಂಜ್, ಇತ್ಯಾದಿ ಅನೇಕ ಕಾರಣಗಳಿಂದ ನ್ಪಲ್ಪ ಕಷ್ಟವಿದೆ. ನಮ್ಮ ದೇಶಕ್ಕೆ ಒಂದು ಕ್ವಾರ್ಟರಿಗೆ ಇಷ್ಟೇ ಪ್ರಮಾಣ ಕಬ್ಬಿಣ ನರಬರಾಜು ಆಗಬೇಕೆಂದು ನಮೂದು ಮಾಡಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ನಮ್ಮ ದೇಶದ ವ್ಯವಸಾಯಕ್ಕೆ ಸಾಕಾಗುವಷ್ಟು ಕಬ್ಬಿಣವನ್ನು ಉತ್ಪತ್ತಿಮಾಡುವುದಕ್ಕೆ ಏನಾದರೂ ಅವಕಾಶವನ್ನು ಕಲ್ಪಿಸಿಕೊಂಡಿದ್ದೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ನಮ್ಮ ಕೈಯ್ಯಲ್ಲಿಲ್ಲ. ಅದು ಇಂಡಿಯಾ ದೇಶದ ಕಬ್ಬಿಣ ಮತ್ತು ಉಕ್ಕಿನ ಕಂಟ್ರೋಲರ್ ಅವರ ಕೈಯ್ಯಲ್ಲಿದೆ. ಅವರು ನಮಗೆ ಕಬ್ಬಿಣವನ್ನು ಅಲಾಟ್ ಮಾಡುತ್ತಾರೆ. ಭದ್ರಾವತಿಯಲ್ಲಿ ತಯಾರಾದ ಕಬ್ಬಿಣವೆಲ್ಲಾ ನಮಗೇ ಎಂದು ಹೇಳುವಹಾಗಿಲ್ಲ. ಅವರು ಪರದೇಶದಿಂದ ನಮಗೆ ತರಿಸಿಕೊಡುತ್ತಾರೆ. ಈ ದೃಷ್ಟಿಯಿಂದ ಹೋದ ಸಾರಿ ತೊಂದರೆಯಾಯಿತು. ಕೇಂದ್ರ ಸರ್ಕಾರದ ಕಾಮರ್ಸ್ ಮತ್ತು ಫುಡ್ ಮಿನಿಸ್ಟರ್ ಇಲ್ಲಿಗೆ ಬಂದಿದ್ದರು. ಈ ವರ್ಷ ಅವರು ನಮಗೆ ಹಾಸ್ತಿ ಕೋಟಾವನ್ನು ಒದಗಿಸಿದ್ದಾರೆ. ಯಾವ ಪ್ರಮಾಣದಲ್ಲಿ ನಮಗೆ ಅವರು ಒದಗಿಸಬೇಕಾಗಿತ್ತೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಈ ವರ್ಷ ಒದಗಿಸಿದ್ದಾರೆ. ನಾವೂ ಸಹ ಅದರ ಪ್ರಕಾರ ಎಲ್ಲಾ ಜಿಲ್ಲೆಗಳಿಗೂ ಒದಗಿಸಿದ್ದೇವೆ ಮತ್ತು ಇಂಡಿಯಾ ಸರ್ಕಾರಕ್ಕೆ ಇನ್ನೂ ಹೆಚ್ಚು ಕಬ್ಬಿಣವನ್ನು ನಮಗೆ ಒದಗಿಸಬೇಕೆಂದು ಬರೆದಿದ್ದೇವೆ. ಇನ್ನು ಕೆಲವರು ಕಬ್ಬಿಣವನ್ನು ಒದಗಿಸುವಾಗ ಅದು ಸಕಾಲದಲ್ಲಿ ಒದಗುತ್ತಿಲ್ಲವೆಂದು ಹೇಳಿದರು. ಅದು ನ್ಯಾಯವಾದುದು. ಕೇಂದ್ರ ಸರ್ಕಾರದವರು ನಮಗೆ ಒಂದೇ ಪ್ರಮಾಣದಲ್ಲಿ ಕಬ್ಬಿಣವನ್ನು ಒಂದೇ ಸಾರಿ ಒದಗಿಸುವುದಿಲ್ಲ. ನಾವೂ ಸಹ ಯಾರಿಗೂ ಒಂದೇ ಪ್ರಮಾಣದಲ್ಲಿ ನರಬರಾಜು ಮಾಡುವುದಕ್ಕಾಗುವುದಿಲ್ಲ. ಸೊಸೈಟಿಯವರು ಎಷ್ಟು ಪ್ರಮಾಣದಲ್ಲಿ ತಮಗೆ ಬೇಕು ಎಂದು ಕೇಳುತ್ತಾರೋ ಅಷ್ಟು ಪ್ರಮಾಣದಲ್ಲಿ ಕೊಡಬೇಕೆಂದು ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ನಾವು ಸೂಚನೆ ಕೊಟ್ಟರೆ, ಆಗ ಅವರು ಅಷ್ಟು ಪ್ರಮಾಣವನ್ನು ತಯಾರುಮಾಡಿ ಸೊಸೈಟಿಗಳಿಗೆ ಒದಗಿಸುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಮೈಸೂರು ಸರ್ಕಾರದವರಿಗೂ ಕೇಂದ್ರ ಸರ್ಕಾರದವರಿಗೂ ನಮ್ಮ ದೇಶಕ್ಕೆ ಸಾಕಾಗುವಷ್ಟು ಕಬ್ಬಿಣವನ್ನು ನರಬರಾಜು ಮಾಡುವ ಬಗ್ಗೆ ಏನಾದರೂ ಅಗ್ರಿಮೆಂಟ್ ಇದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಅಗ್ರಿಮೆಂಟ್ ಏನೂ ಇಲ್ಲ. ಕಬ್ಬಿಣವನ್ನು ಯಾವ ಯಾವ ಪ್ರಮಾಣದಲ್ಲಿ ಒದಗಿಸಬೇಕೆಂಬುದಕ್ಕೆ ಅವರು ಕಂಟ್ರೋಲ್ ಮಾಡಿದ್ದಾರೆ. ಕೇಂದ್ರ ಸರ್ಕಾರದ ನಲಹೆಯಮೇರೆ ಕಾರ್ಖಾನೆಯವರು ಸೊಸೈಟಿಗಳಿಗೆ ಕಬ್ಬಿಣವನ್ನು ಒದ

ಗಿನುತ್ತಾರೆ. ಅದು ನಮ್ಮ ಹತೋಟಿಯಲ್ಲಿಲ್ಲ. ನಮಗೆ ಬೇಕಾದಷ್ಟನ್ನು ತೆಗೆದುಕೊಂಡು ಬಾಕಿಯಾದ್ದನ್ನು ಅವರಿಗೆ ನಾವು ಕೊಡುವ ಹಾಗಿಲ್ಲ. ಅವರ ನಿರ್ಧಾರದಂತೆ ಮುಂದಿನ ವರ್ಷ ಯಾವ ತೊಂದರೆಯೂ ಇರುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಇನ್ನೂ ಹೆಚ್ಚಿನ ಸಹಾಯ ಬೇಕೆಂದು ಬರೆದಿದ್ದೇವೆ.

ಇನ್ನು ಕೆಲವರು ರೋಗರುಜಿನಗಳು ಹೆಚ್ಚಿದಷ್ಟು ಔಷಧಿಗಳು ದೊರಕುವುದಿಲ್ಲವೆಂದು ಹೇಳಿದರು. ಅದಕ್ಕೆ ಬೇಕಾದಷ್ಟು ಸಹಾಯ ಒದಗುತ್ತಿಲ್ಲ. ಏಕೆಂದರೆ ಔಷಧಿಗಳು ಕೂಡ ಎಷ್ಟು ಪ್ರಮಾಣದಲ್ಲಿ ಒದಗಬೇಕೋ ಅಷ್ಟು ಪ್ರಮಾಣದಲ್ಲಿ ಒದಗುತ್ತಿಲ್ಲ. ಅದಕ್ಕೊಸ್ಕರ ನಾವು ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಇನ್ನೂ ಹೆಚ್ಚು ಪ್ರಮಾಣದಲ್ಲಿ ಅದನ್ನು ಉಪಯೋಗಿಸಿದರೆ ಅಷ್ಟು ಹಣವನ್ನೂ ಸಹ ಒದಗಿಸುತ್ತೇವೆ.

ಮತ್ತೊಂದು ವಿಷಯ. ಪ್ರತಿಯೊಂದು ತಾಲ್ಲೂಕಿಕ ನಲ್ಲಿರತಕ್ಕ ವ್ಯವಸಾಯ ಇಲಾಖೆಯ ಸಿಬ್ಬಂದಿ ಬಹಳ ಕಡಿಮೆ. ಒಬ್ಬ ಇನ್‌ಸ್ಪೆಕ್ಟರ್, ಇಬ್ಬರು ಫೀಲ್ಡ್‌ಮೆನ್ ಇರುತ್ತಾರೆ. ಶೇ. 90 ರಷ್ಟು ವ್ಯವಸಾಯಗಾರರು ತಾಲ್ಲೂಕ್‌ಗಳಲ್ಲಿ ಇರುವುದರಿಂದ ಅಷ್ಟು ಜನದ ಮೇಲ್ಬೆ ಚಾರಣೆಯನ್ನು ನೋಡಿಕೊಳ್ಳುವುದಕ್ಕಾಗುವುದಿಲ್ಲ. ವ್ಯವಸಾಯ ಸಾಮಗ್ರಿಗಳನ್ನೂ ಸಹ ಒದಗಿಸುವುದ ಕ್ಕಾಗುವುದಿಲ್ಲ. ಈ ಎಫ್. ಇ. ಎಸ್. ಮತ್ತು ಸಿ. ಡಿ. ಬ್ಲಾಕುಗಳನ್ನು ಆಹಾರೋತ್ಪತ್ತಿಯನ್ನು ಜಾಸ್ತಿ ಮಾಡುವ ಉದ್ದೇಶದಿಂದಲೇ ಮಾಡಿದ್ದು. ಈ ವ್ಯವ ಸಾಯ ಇಲಾಖೆಯಲ್ಲಿ ತರಪ್ಪೇತು ಆದವರೇ ವಿಲೇಜ್ ಲೆವಲ್ ವರ್ಕರ್ ಆಗಬೇಕು. ಅವರಿಗೆ ಈಗ ಹೆಚ್ಚು ತರಪ್ಪೇತು ಇಲ್ಲ. ನಾಲ್ಕಾರು ತಿಂಗಳಿಗೊಂದು ಸಾರಿ ಹಿಂದೆ ತರಪ್ಪೇತು ಕೊಡುತ್ತಿದ್ದರು. ಈಗ ಮಲ್ಟಿ ಪರ್ಪಸ್ ಟ್ರೈನಿಂಗ್ ಆಗಿರುವವರು ತಮ್ಮ ಅನುಭವ ದಿಂದ ಹೆಚ್ಚಿನ ವಿಷಯಗಳನ್ನು ಕಂಡುಹಿಡಿದು ಜಾಸ್ತಿ ಪ್ರಮಾಣದಲ್ಲಿ ತರಪ್ಪೇತು ಕೊಡುತ್ತಿದ್ದಾರೆ. ಒಂದು ವರ್ಷ ವ್ಯವಸಾಯ ಇಲಾಖೆ ವಿಷಯವಾಗಿ ತರಪ್ಪೇತು ಕೊಡುತ್ತಾರೆ ಇನ್ನೊಂದು ವರ್ಷ ಎಕ್ಸ್‌ಟೆಷ್ಷನ್ ಸರ್ವಿಸ್ ವಿಷಯದಲ್ಲಿ ತರಪ್ಪೇತು ಕೊಡುತ್ತಾರೆ. ಒಂದು ವರ್ಷಕ್ಕೆ ಸಿ.ಡಿ. ಬ್ಲಾಕಿಗೆ ಮತ್ತು ಎಫ್. ಇ. ಎಸ್. ಬ್ಲಾಕಿಗೆ ಎಷ್ಟು ಹಣಬೇಕಾಗಿದೆಯೋ, ಅಷ್ಟು ಹಣ ಖರ್ಚಾಗಿ ಅಷ್ಟೂ ಉತ್ಪಾದನೆಯಾಗುತ್ತಿದೆ. ಇಂಡಿಯಾ ಸರ್ಕಾರದವರು ಮತ್ತು ಪ್ರಾಂತ ಸರ್ಕಾರದವರು ಅದನ್ನು ಚೆನ್ನಾಗಿ ತಿಳಿದಿದ್ದರೂ ಅಷ್ಟು ಪ್ರಮಾಣದಲ್ಲಿ ಅಭಿವೃದ್ಧಿಯಾಗದೆ ಇದ್ದುದರಿಂದ ಈ ಯೋಜನೆಯನ್ನು ರಿವೈಜ್ ಮಾಡಿ, ಆ ಬ್ಲಾಕುಗಳಲ್ಲಿ ಕೆಲಸ ಮಾಡುವವರಿಗೆ ಉತ್ತಮ ರೀತಿಯಲ್ಲಿ ತರಪ್ಪೇತು ಕೊಟ್ಟು ಪ್ರತಿಯೊಂದು ಸಿ.ಡಿ. ಬ್ಲಾಕಿಗೂ ಸಹ ಹಣವನ್ನೊದಗಿಸಬೇಕು ಎಂಬುದಾಗಿ ಈಗ ತಾನೇ ಅವರು ಒಂದು ಯೋಜನೆಯನ್ನು ಹಾಕಿದ್ದಾರೆ. ಆ ಮೂಲಕ ಬಹುಶಃ ಉತ್ತಮವಾಗಬಹುದು.

ಈ ದೃಷ್ಟಿಯಿಂದ ವಿಲೇಜ್ ಲೆವಲ್ ವರ್ಕ್ಸ್‌ನ್ನು ಹೆಚ್ಚು ಮಾಡಬೇಕೆಂಬ ಯೋಚನೆಯೂ ಕೂಡ ಇದೆ. ಮೂರು-ಮೂರೂವರೆ ಸಾವಿರ ಜನಕ್ಕೆ ಒಬ್ಬ ವಿಲೇಜ್ ಲೆವಲ್‌ವರ್ಕರ್ ಬೇಕು. ಅವನು ಪ್ರತಿಯೊಂದು ಕಡೆಗೂ ಹೋಗಿ ಅವರ ವಿಷಯ ತಿಳಿದುಕೊಂಡು ಎಷ್ಟು ಭೂಮಿ ಇದೆ, ಈ ವರ್ಷ ಎಷ್ಟು ಉತ್ಪನ್ನ ಮಾಡಬೇಕು, ಮುಂದಿನ ವರ್ಷ ಎಷ್ಟು ಮಾಡಬೇಕು, ಖರ್ಚು ಏನಾಗುತ್ತದೆ ಎಂಬ ಅಂಕಿ ಅಂಶಗಳನ್ನು ತಿಳಿದುಕೊಂಡು ಕೆಲಸ ಮಾಡಿದರೆ ಉತ್ಪನ್ನ ಜಾಸ್ತಿ ಆಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಈಗಿರತಕ್ಕ ಎಫ್.ಇ.ಎಸ್. ಬ್ಲಾಕ್‌ನಲ್ಲಿ ಪ್ರತಿಯೊಂದು ಮನೆಯನ್ನೂ ನೋಡಿ ಅವರಿಗೆ ಸಲಹೆ ಕೊಡಲಕ್ಕೆ ಆಗಲಲ್ಲ. ಆದ್ದರಿಂದ ಹೆಚ್ಚು ಸಿಬ್ಬಂದಿ ಬೇಕು. ಆದ್ದರಿಂದ ಈಗಲೇ ಯೋಚನೆ ಮಾಡಿದ್ದರೆ ಬಹುಶಃ ಮುಂದಿನ ವರ್ಷದಿಂದ ಲಾದರೂ ಜಾರಿಗೆ ತರಬಹುದು. ಇಂಡಿಯಾ ಸರ್ಕಾರದವರು ಪ್ರಾಂತ್ಯ ಸರ್ಕಾರದವರಿಗೆ ಸಲಹೆ ಕೊಡುತ್ತಾರೆ. ಪ್ರತಿಯೊಂದು ಊರಿಗೂ ಎಷ್ಟು ಉತ್ಪನ್ನ, ಖರ್ಚು ಇದೆ, ಮುಂದಿನ ವರ್ಷ ಎಷ್ಟು ಮಾಡಬೇಕೆಂಬ ಟಾರ್ಗೆಟ್ ತೆಗೆದುಕೊಂಡು ಕೆಲಸ ಮಾಡಬೇಕು.

ಶ್ರೀ ಜಿ. ಶಿವಪ್ಪ.—ತಾವು ಸಿಬ್ಬಂದಿ ಜಾಸ್ತಿ ಮಾಡ ಬೇಕೆಂದು ಹೇಳಿದಿರಿ. ಏನೂ ಬೇಕಾಗಿಲ್ಲ. ಈಗಿರುವ ವರೇ ಐದು ವರ್ಷದ ಸ್ಕೀಂ ಕೊಡಬಲ್ಲರು. 100-150 ಹಳ್ಳಿಗಳು ಇರುತ್ತವೆ; ಒಂದು ದಿವಸಕ್ಕೆ ಒಂದು ಹಳ್ಳಿ ಸೆಲಕ್ಟ್ ಮಾಡಿ ಕೆಲಸ ಮಾಡಿದರೆ ಮನೆ ಮನೆಗೂ ಹೋಗಿ ವಿಷಯ ಸಂಗ್ರಹಣೆ ಮಾಡಬಹುದು. ಹಾಗೆ ಮಾಡುತ್ತಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನು ಉತ್ತಮ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಯಾವ ಪ್ರಮಾಣದಲ್ಲಿ ಯಾವ ತೀವ್ರತೆಯಿಂದ ಕೆಲಸ ಮಾಡ ಬೇಕೆಂದು ನೀವು ನಿರೂಪಣೆ ಮಾಡುತ್ತೀರೋ ಆ ರೀತಿ ಮಾಡಿಲ್ಲ. ಆದ್ದರಿಂದ ಅದನ್ನು ಸರಿಪಡಿಸಬೇಕೇ ಹೊರತು ಹಾಗೆಯೇ ಬಿಡಕೂಡದು. ರೋಗ ಬಂದರೆ ಔಷಧಿ ಹಾಕಿ ಸರಿಪಡಿಸಬೇಕೇ ಹೊರತು ರೋಗವನ್ನು ಹಾಗೆಯೇ ಬಿಟ್ಟರೆ ತೊಂದರೆ ಎಂಬುದು ನಮಗೂ ಗೊತ್ತು. ತಾವು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಏರ್ಪಾಡು ಮಾಡುತ್ತೇವೆ.

ಟ್ರಾಕ್ಟರ್ ವಿಷಯದಲ್ಲಿ ಶ್ರೀಮಾನ್ ನಾಗನಗೌಡರಿಗೆ ಚೆನ್ನಾಗಿ ಗೊತ್ತು. ಇದು 1947-48ರಲ್ಲಿ ಪ್ರಾರಂಭ ವಾಯಿತು. ನಮಗೆ ಇದೆಲ್ಲಾ ಆಗ ಹೊಸದು.

ತಾವು ಅಂಕಿ ಸಂಖ್ಯೆಗಳ ಮೂಲಕ ಈ ವಿಚಾರವನ್ನ ಪರಿಶೀಲನೆ ಮಾಡಿದರೇನೆ ತಮಗೆ ಗೊತ್ತಾಗುತ್ತದೆ. ಆದರೆ 1956-57ನೇ ಸಾಲಿನಲ್ಲಿ ಕೆಲಸಗಳೇನೂ ಅಷ್ಟಾಗಿ ನಡೆಯಲಿಲ್ಲ. ಆದರೆ ಈ ಸಾಲಿನಲ್ಲಿ ಆ ವರ್ಷದ ಮೂರರಷ್ಟು ಕೆಲಸಗಳು ನಡೆದಿವೆ. ಆದರೆ ನಿಮಗೂ ನಮಗೂ ಈ ಕೆಲಸಕಾರ್ಯಗಳು ಎಷ್ಟು ತೀವ್ರತೆಯಿಂದ, ಯಾವ ಒಂದು ದೊಡ್ಡ ಪ್ರಮಾಣದಲ್ಲಿ ನಡೆಯಬೇಕೆಂಬುದಾಗಿ ನಿರೀಕ್ಷಣೆಯಿತ್ತೋ ಅಷ್ಟು ಕೆಲಸವಾಗಿಲ್ಲ. ಅಂದಮಾತ್ರಕ್ಕೇ ಏನೂಕೆಲಸಗಳಾಗಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇತ್ತೀಚೆಗೆ ಬಹಳ ಉತ್ತಮ ರೀತಿಯ ಕೆಲಸಗಳು ನಡೆದಿವೆ. ಇತ್ತೀಚೆಗೆ ಅನೇಕರು ಅನೇಕ ಕಡೆಗಳಲ್ಲಿ ಬುಲ್-ಡೋಜರ್ಸ್‌ಗಳನ್ನು ಒದಗಿಸ ಬೇಕೆಂಬುದಾಗಿ ಕೇಳುತ್ತಿದ್ದಾರೆ. ಆದರೆ ಅಷ್ಟು ಜನ ರಿಗೂ ಏಕಕಾಲದಲ್ಲಿ ನಾವು ಅವುಗಳನ್ನು ಒದಗಿಸಲು ಸಾಧ್ಯವಿಲ್ಲ. ಈ ಎರಡನೇ ಪಾಂಚವಾರ್ಷಿಕ ಅವಧಿ ಯಲ್ಲಿ ಬುಲ್-ಡೋಜರ್ಸ್ ಮತ್ತು ಟ್ರಾಕ್ಟರುಗಳನ್ನು ಕೊಂಡು ಕೊಳ್ಳಲು 60 ಲಕ್ಷ ರೂಪಾಯಿಗಳನ್ನು ಮೀಸ ಲಾಗಿಟ್ಟಿದ್ದೇವೆ. ಆದರೆ ಈಗ ಸರ್ಕಾರದವರೇ ಪುನಃ ಇವುಗಳನ್ನು ಕೊಂಡರೆ ಆ ಹಣವೂ ಮತ್ತೆ ಲುಕ್ಸಾನಾಗಬಹುದೆಂಬ ಅಭಿಪ್ರಾಯದಿಂದ ನಾವೀಗ ಇದನ್ನು ಕೈ ಬಿಟ್ಟಿದ್ದೇವೆ. ಆದರೆ ಈ ಯಂತ್ರಗಳನ್ನು ರೈತರಿಗೆ ಕೊಂಡು ಕೊಳ್ಳಲು ಹಣವನ್ನು ಒದಗಿಸಿದರೆ ಅನುಕೂಲವಾಗಬಹುದೆಂದು ಈಗ ಆ ಬಗ್ಗೆ ಬಡ್ಜೆಟ್ಟಿ ನಲ್ಲಿ ಹಣವನ್ನೊದಗಿಸಿದ್ದೇವೆ. ಅಷ್ಟು ಶಿವಾಯಿ ಇದರಲ್ಲಿ ಮತ್ತೇನೂ ಅಭಿಪ್ರಾಯಗಳಿಲ್ಲ. ಹೋದ ವರ್ಷ ಈ ಬಾಬಿಗಾಗಿ ಐದು ಲಕ್ಷ ರೂಪಾಯಿಗಳ ನ್ನೊದಗಿಸಲಾಗಿದ್ದಿತು. ಆದರೆ ಅವರಿಗೆ ಸಕಾಲದಲ್ಲಲ್ಲ ಅವು ದೊರೆಯಲು ಸಾಧ್ಯವಾಗಲಲ್ಲ. ಆಗ ಸ್ಯಾಂಕ್ಷ್ ಆದಂಥ ಬುಲ್‌ಡೋಜರ್ಸ್‌ಗಳೆನ್ನೂ ಬಂದಿಲ್ಲ. ಆ

(ಶ್ರೀ ಎಚ್. ಎಸ್. ರುದ್ರಪ್ಪ)

ಕಾರಣದಿಂದ ಈ ಸಾಲಿನಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಈಗ ಸಧ್ಯಕ್ಕೆ ಒದಗಿಸಲಾಗಿದೆ. ಮುಂದಿನ ವರ್ಷ ನಮಗೆ ಅಷ್ಟು ದೊರೆತರೆ ಹೆಚ್ಚಾಯಿತೆಂಬ ಉದ್ದೇಶದಿಂದ ಅಷ್ಟು ಪೊಬಲಗನ್ನು ಮಾತ್ರ ಒದಗಿಸಲಾಗಿದೆ. ಆದರೆ ಮುಂದಿನ ವರ್ಷ ನಮಗೆ ಟ್ಯಾಕ್ಸ್‌ರು ಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕುತ್ತವೆಂಬುದಾಗಿ ಕಂಡುಬಂದರೆ ನಾವು 10 ಲಕ್ಷ ರೂಪಾಯಿಗಳನ್ನಾದರೂ ಒದಗಿಸಲು ಪ್ರಯತ್ನ ಮಾಡುತ್ತೇವೆ. ಇನ್ನು ಈ ಬುಲ್‌ಡೋಜರ್ಸ್ ಮತ್ತು ಟ್ಯಾಕ್ಸ್‌ರುಗಳ ನರಬರಾಯಿ ಮಾಡತಕ್ಕ ಬಗ್ಗೆ ರೂಲ್ಸಿನಲ್ಲಿ ಕೆಲವು ತೊಂದರೆಗಳಿವೆಯೆಂಬುದಾಗಿ ಕೆಲವರು ಹೇಳಿದ್ದಾರೆ. ಅಸರೆ ಈ ದಿವಸ ಇವುಗಳನ್ನು ಕೊಡತಕ್ಕ ವಿಚಾರದಲ್ಲಿ ಆಧಾರ ಮತ್ತು ಷ್ಯೂರಿಟಿವಿಚಾರಗಳ ಬಗ್ಗೆ ಅದು ಸ್ವಲ್ಪ ಜಾಸ್ತಿಯಾಯಿತೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ನಮ್ಮ ಸಹೋದ್ಯೋಗಿಗಳಾದ ಮಾನ್ಯ ವೀರಣ್ಣ ಗೌಡರ ಸಹಾನುಭೂತಿಕೂಡ ಇದೆ. ಆದ್ದರಿಂದ ಈ ವಿಚಾರದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಲಾಗುತ್ತದೆ. ಇನ್ನು ಮುಂದೆ ಈಗ ಕೇಳಿರುವಷ್ಟು ಹೆಚ್ಚಿನ ಷ್ಯೂರಿಟಿಗಳೇನನ್ನೂ ಕೊಡಬೇಕಾಗಿಲ್ಲ. ಆದಷ್ಟೂ ಹೆಚ್ಚು ಜನರು ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲು ಅನುಕೂಲವಾಗತಕ್ಕ ರೀತಿಯಲ್ಲಿ ರೂಲ್ಸುಗಳನ್ನು ಮಾರ್ಪಾಡು ಮಾಡಲಾಗುತ್ತದೆ. ಇನ್ನು ಕೆಲವು ಸದಸ್ಯರು ಈ ರೇಟುಗಳ ವಿಚಾರದಲ್ಲಿ ಸ್ವಲ್ಪ ತಗ್ಗಿಸಬೇಕೆಂದು ಹೇಳಿದ್ದಾರೆ. ಈಗ ಸರ್ಕಾರದವರು ಹಾಕಿರತಕ್ಕ ರೇಟೇ ಬಹಳ ಕಡಮೆಇದೆ ಎಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಆ ಇಲಾಖೆಯಲ್ಲಿರತಕ್ಕ ನಮ್ಮ ಇಂಜಿನಿಯರುಗಳ ಅಭಿಪ್ರಾಯ ಕೇಳಿದ್ದೇವೆ. ಆದರೆ ಅವರು ಈಗ ಹಾಕಿರತಕ್ಕ ರೇಟೇ ಬಹಳ ಕಡಮೆ ಆಗಿದೆಯೆಂದೂ ಈ ಬಗ್ಗೆ ಬಹಳ ಖರ್ಚುಗಳು ಬರುತ್ತಿವೆಯೆಂದೂ ಹೇಳುತ್ತಿದ್ದಾರೆ. ಆದರೆ ನಾವು ಈ ದಿವಸ ಈ ಉದ್ಯಮವನ್ನು "No loss-no gain" ಬೇಸಿಸ್ ಮೇಲೆ ಮಾಡುತ್ತಿದ್ದೇವೆ. ಆದರೆ ಬುಲ್‌ಡೋಜರ್ಸ್‌ಗಳಿಗೆ ಸ್ವಲ್ಪ ರೇಟನ್ನು ಜಾಸ್ತಿಮಾಡಿದ್ದೇವೆ. ಬುಲ್‌ಡೋಜರ್ಸ್‌ಗಳನ್ನು ಉಪಯೋಗಿಸ ತಕ್ಕವರೆಲ್ಲರೂ ದೊಡ್ಡ ದೊಡ್ಡ ವ್ಯವಸಾಯಗಾರರು. ಟ್ಯಾಕ್ಸ್‌ರನ್ನು ಉಪಯೋಗಿಸಕ್ಕವರೆಲ್ಲ ಸಾಮಾನ್ಯ ಜನರು. ಎತ್ತೋ ಒಬ್ಬಬ್ಬರು ಸಣ್ಣಪುಟ್ಟ ರೈತರು ಪಾಳುಭೂಮಿ ಉಳಲಿಕ್ಕೆ ಬುಲ್‌ಡೋಜರ್ಸ್‌ಗಳನ್ನು ಉಪಯೋಗಿಸ ಬಹುದು. ಆದರೆ ಅದಕ್ಕೆಲ್ಲ ಅಷ್ಟೇನೂ ಹೆಚ್ಚು ಖರ್ಚಾಗುವುದಿಲ್ಲ. ಮೇಲಾಗಿ ಬುಲ್ ಡೋಜರ್ಸ್‌ಗೇನಾದರೂ ಸ್ವಲ್ಪ ಕೆಟ್ಟುಹೋದರೆ ಅದನ್ನು ಸರಿಪಡಿಸುವುದಕ್ಕೆ ಬಹಳ ಹಣಬೇಕಾಗುತ್ತದೆ. ಆದರೆ ಇತ್ತೀಚೆಗೆ ಟ್ಯಾಕ್ಸ್‌ರುಗಳಿಗೆ 4-5 ರೂಪಾಯಿಗಳನ್ನು ಕಡಿಮೆ ಮಾಡಿದ್ದೇವೆ. ಬಹಳ ಜನರಿಗೆ ಅನುಕೂಲವಾಗಲಿ ಎಂದು ಹಾಗೆ ಮಾಡಿದ್ದೇವೆ. ಆದರೆ ಬುಲ್ ಡೋಜರ್ಸ್‌ಗಳಿಗೆ ಇದಕ್ಕಿಂತಲೂ ರೇಟನ್ನು ಕಡಮೆ ಮಾಡುವುದಕ್ಕಾಗುವುದಿಲ್ಲ. ಆದಕ್ಕಾಗಿಯೇ ಇದನ್ನು ಈಗ ಗಂಟೆಗಳ ಲೆಕ್ಕದ ಮೇಲೆ ಕೊಡಲಾಗುತ್ತಿದೆ. ಸಣ್ಣ ಪುಟ್ಟ ವ್ಯವಸಾಯಗಾರರಿಗೆ ಇದರಿಂದೇನೂ ಅಷ್ಟು ಪ್ರಯೋಜನವಿಲ್ಲ. ನೂರಕ್ಕೆ ಒಬ್ಬಿಬ್ಬರು ಸಣ್ಣ ಪುಟ್ಟ ರೈತರು ಇದನ್ನು ಉಪಯೋಗಿಸುತ್ತಾರೋ ಇಲ್ಲವೋ ತಿಳಿಯದು. ಆದ್ದರಿಂದ ಬುಲ್ ಡೋಜರ್ಸಿನ ರೇಟನ್ನ ಕಡಮೆಮಾಡಲು ಸಾಧ್ಯವಿಲ್ಲವೆಂದು ತಮ್ಮಲ್ಲಿ ನಾನು ಅರಿಕೆಮಾಡಿಕೊಳ್ಳಬೇಕಾಗಿದೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ನಾನು ಪೆಟರ್ನರಿ ಡಾಕ್ಟರುಗಳ ವಿಚಾರವಾಗಿ ಹೇಳಿದ್ದೆ. ಆದರೆ ಅದರ ಬಗ್ಗೆ ವಿವರಗಳು ದೊರೆಯಲಿಲ್ಲ.

ಶ್ರೀ ಹೆಚ್. ಎಸ್. ರುದ್ರಪ್ಪ.—ನಾನು ಇನ್ನೂ ಮುಗಿಸಿಲ್ಲ. ಅದರ ಬಗ್ಗೆಯೂ ಹೇಳುತ್ತೇನೆ. ಹೈದರಾಬಾದು ಮತ್ತು ಬಾಂಬೆ ಕರ್ನಾಟಕದಲ್ಲಿ ನಗದಾಗಿ ಹಣ ಕೊಡುವ ಪದ್ಧತಿ ಜಾರಿಯಲ್ಲಿತ್ತು. ಈ ಟ್ಯಾಕ್ಸ್ ರುಗಳಿಗಾಗಿ ಏನು ಕೊಡಬೇಕಾಗಿತ್ತೋ ಅದನ್ನು ತಕಾವೀ ಸಾಲಗಳ ರೂಪದಲ್ಲಿ ಕೊಡುತ್ತಿದ್ದರು. ಅದೇ ರೂಲ್ಸನ್ನೇ ಪುನಃ ಇಲ್ಲೂ ಜಾರಿಗೆ ತರಬೇಕೆಂದಿದ್ದೇವೆ ಮತ್ತು ಅದಕ್ಕೆ ತಕ್ಕಂತೆ ಕಾನೂನನ್ನೂ ಮಾಡಿ ಅದರ ಬಗ್ಗೆ ಗವರ್ನಮೆಂಟಿನ ಆರ್ಡರನ್ನೂ ಹೊರಡಿಸುವುದರಲ್ಲಿದೆ.

ಶ್ರೀ ಕುಂದೂರು ರುದ್ರಪ್ಪ.—ಮೈಸೂರಿಗೆಲ್ಲ ಒಂದೇ ರೀತಿಯಾದ orderನ್ನು ಮಾಡಬೇಕು ಸ್ವಾಮೀ. ಹಳೆಯ ಮೈಸೂರಿಗೆ ಬೇರೆ ಎಂದು ಮಾಡಬಾರದು.

ಶ್ರೀ ಹೆಚ್. ಎಸ್. ರುದ್ರಪ್ಪ.—ತಾವು ಹೇಳತಕ್ಕದ್ದು ನ್ಯಾಯವಲ್ಲ. ಅಲ್ಪ ಕಾಲಾವಧಿ ಸಾಲಗಳನ್ನು ಜಾಸ್ತಿಯಾಗಿ ಕೊಡುತ್ತಿದ್ದೇವೆ. ಅದರಿಂದ ಆ ರೀತಿ ಮಾಡಲಿಕ್ಕೆ ಆಗುವುದಿಲ್ಲ. ಆದಷ್ಟೂ ಒಂದೇ ದೃಷ್ಟಿಯಿಂದ ಮಾಡಬೇಕಂದೇನೋ ಇದೆ.

Sri U. M. MADAPPA.—Sir, I raise a point of order, ಪೊನ್ನೆ ದಿವಸ ಈ ನಬೆಯಲ್ಲಿ ಒಂದು ತೀರ್ಮಾನವಾಗಿತ್ತು. ಈ ಡಿಮ್ಯಾಂಡನ್ನು ಆರು ಗಂಟೆಗೆ ಹಾಕಬೇಕು ಎಂದಾಗಿತ್ತು, ಮತ್ತು ಆ ರೀತಿ ಫೈನಲ್ಲಾಗಿ ಫಿಕ್ಸ್ ಆಗಿತ್ತು. ಈಗ ಏಳು ಗಂಟೆಯಾಗಿದೆ. ರೂಲಿನ ಪ್ರಕಾರ :

Rule 124 (2) : On the last day of the allotted days, at five O'clock, or at the hour fixed for the termination of the day's meeting, the Speaker shall forthwith put every question necessary to dispose of all the outstanding matters in connection with the demands for grants.

This rule contemplates that the hour must be fixed for the day.

ಈಗ ಆರು ಗಂಟೆಯಾಗಿ ಹೋಗಿದೆ. ಡಿಮ್ಯಾಂಡು ಹಾಗೆಯೇ ಇದೆ, ಇನ್ನೂ ವೋಟಿಗೆ ಹಾಕಿಲ್ಲ. ಅಲ್ಲದೆ ಇನ್ನೂ ಏಏನಿನ್ನರು ಅವರ ಭಾಷಣವನ್ನು ಮುಗಿಸಿಲ್ಲ. ಹೀಗಿರುವುದರಿಂದ ಈ ಡಿಮ್ಯಾಂಡನ್ನು ವೋಟಿಗೆ ಹಾಕಲು ಹೇಗೆ ಅವಕಾಶಮಾಡಿ ಕೊಡಬೇಕು ?

ಅಧ್ಯಕ್ಷರು.—ಇದರಲ್ಲೇ ಇದೆ, ತಾವೇ ಓದಿ ನೋಡಿ.—That must be taken as the time when the meeting actually terminates. I have not fixed 6 O'clock as the time of termination of the meeting. So far as possible, we should finish our business by 6 O'clock. If it is not possible, the termination of the day's business will be at the hour when we actually rise for the day.

ಶ್ರೀ ಯು. ಎಂ. ಮಾದಪ್ಪ.—ಇದು ಹಾಗಲ್ಲ.

At the hour fixed ಎಂದು, ಆರು ಗಂಟೆ ಎಂದು ನಿಗದಿಯಾಗಿತ್ತು.

ಅಧ್ಯಕ್ಷರು.—ಅವೊತ್ತಿನ ಮನವರಿಕೆ ಆ ರೀತಿಯಾಗಿತ್ತು. ಆಗ ಆಷ್ಟು ತೀವ್ರವಾಗಿ ಎಂದರೆ, ಆರು, ಆರೂವರೆ ಗಂಟೆಯೊಳಗೇ ಮುಗಿಸಬೇಕೆಂದು ಆಗಿತ್ತು. ಆದರೆ ಅದು ಅವೊತ್ತಿನ ದಿವಸಕ್ಕೆ ಮಾತ್ರ ಎಂದಾಗಿತ್ತು. ಶಕ್ಯವಿದ್ದರೆ, ಆರು, ಆರೂವರೆ ಗಂಟೆಯೊಳಗೆ ಅಥವಾ ಸ್ವಲ್ಪ ಹೆಚ್ಚಿಗೆ ಎಂದರೆ ಏಳು ಗಂಟೆಯೊಳಗೇ ಮುಗಿಸಬೇಕೆಂದಿದೆ.

ಶ್ರೀ ಯು. ಎಂ. ಮಾದಪ್ಪ.—ಪ್ರೊಸೀಡಿಂಗ್ಸ್ ಇದೆ, ತಾವು ಬೇಕಾದರೆ ಅದನ್ನು ನೋಡಿ ತಮ್ಮ ರೂಲಿಂಗು ಕೊಡಬಹುದು.

Sri F. X. DENIS PINTO (Kaup).—May I know till what time the meeting continues? Will it continue till 10 O'clock?

Mr. SPEAKER.—It will not continue like that. Sometimes it will continue for a long time.

Sri V. SRINIVAS SHETTY.—We have no objection. There ought to be a fixity of time. Under the rule it is either 5 O'clock or at the time fixed. Now it is neither 5 O'clock nor any time has been fixed.

Mr. SPEAKER.—I have already stated that we have not so far fixed any time limit. We are of course sitting for our own convenience. I have already stated that the day's business should be taken as terminating at this hour when the House rises.

Sri S. D. KOTHAVALE.—The rule speaks of the last day when Demands are put. So, today is not the last day and the question does not arise.

Sri F. X. DENIS PINTO.—I do not think the convenience of the Members was asked at all. The House was never consulted.

Mr. SPEAKER.—That right is with me, not with the House. I have already stated that as far as possible we shall try to finish the business early and rise. If it is not possible we have to sit until the business is over. The termination should mean the hour when the House actually rises.

ಶ್ರೀ ಯು. ಎಂ. ಮಾದಪ್ಪ.—ಇಸ್ಟಾಕ್ಷಿ ಮುಂದೆ ಯಾವ ರೀತಿ ಮಾಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

Mr. SPEAKER.—We have only six days more. We have to push through some more work. On the 26th the last Demand will be put to vote. Only a few days are remaining and I do not know why this objection has come at this hour.

ಶ್ರೀ ಯು. ಎಂ. ಮಾದಪ್ಪ.—ಇದು ಹಣಕಾಸಿಗೆ ಸಂಬಂಧಪಟ್ಟ ವಿಷಯ. ಇಂಥ ಸಂದರ್ಭಗಳಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಗಮನಿಸಬೇಕು. ಇಲ್ಲದೆ ಇದ್ದರೆ ಕಷ್ಟವಾಗುತ್ತದೆ.

Mr. SPEAKER.—I tell you even if you pass it after 6 O'clock it can never be an illegality. It may be—I will not admit it—at the most irregular. The day's work will come to an end at the hour we rise.

Sri U. M. MADAPPA.—Is it the ruling?

Mr. SPEAKER.—That is the ruling.

ಶ್ರೀ ಎಚ್. ಎಸ್. ರುದ್ರಪ್ಪ.—ಮಾನ್ಯ ಸದಸ್ಯರು ಈಗಾಗಲೇ ಬಹಳ ವೇಳೆಯಾಗಿದೆ ಎಂದು ಹೇಳಿರುವುದರಿಂದ, ಸದಸ್ಯರೆಲ್ಲ ಏನೇನು ವಿಷಯಗಳನ್ನು ತಿಳಿಸಿದ್ದಾರೆಯೋ ಅದನ್ನೆಲ್ಲ ತನಿಖೆ ಮಾಡಿ, ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The question is:

"That a sum not exceeding Rs. 2,14,27,000 be granted to the Government to defray the charges which will come in course of payment during the year ending 31st day of March 1959, in respect of 'Agriculture'."

The motion was adopted.

Mr. SPEAKER.—The question is:

"That a sum not exceeding Rs. 94,58,100 be granted to the Government to defray the charges which will come in course of payment during the year ending 31st day of March 1959, in respect of 'Veterinary'."

The motion was adopted.

Mr. SPEAKER.—Before we rise, I would like to mention that on account

(MR. SPEAKER)

of the Solar Eclipse tomorrow, the hours of sitting of the House have been changed. We will sit tomorrow from one o'clock. The House will now rise and meet tomorrow at 1 P.M.

The House adjourned at Eleven Minutes past Seven of the Clock to meet again at One of the Clock on Saturday, the 19th April 1958.

Karnataka State Archives,
(Departmental Library)
(ಇಲಾಖಾ ಗ್ರಂಥಾಲಯ)
Accession No (B) 4770
Date.....

KSA LIBRARY, B'lore
B004764
328.32402 548 LAD,1958
JJ32

WD 1018—GPB—900—3-10-1958